

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 9 ಶನಿವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 202 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಂದಿನ ಸೆಪ್ಟೆಂಬರ್‌ನಲ್ಲಿ ಮೈಸೂರು ತಾರಾಲಯ ಲೋಕಾರ್ಪಣೆ

- ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿಶ್ವಾಸ
- 90 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಖಗೋಳ ಕೌತುಕ
- ಜಪಾನ್, ಫ್ರಾನ್ಸ್‌ನಿಂದ ಅಗತ್ಯ ಬಿಡಿಭಾಗಗಳ ಆಮದು; ಕನ್ನಡದಲ್ಲಿ ಮಾಹಿತಿ ವ್ಯವಸ್ಥೆ



ಮೈಸೂರು ಚಾಮುಂಡಿಬೆಟ್ಟ ತಪ್ಪಲಿನಲ್ಲಿ ನಿರ್ಮಾಣ ಹಂತದಲ್ಲಿರುವ ತಾರಾಲಯ ಕಾಮಗಾರಿಯನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಪರಿಶೀಲಿಸಿದರು. ಸಂಸದ ಯದುವೀರ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯ ನಿರ್ದೇಶಕಿ ಪ್ರೊ.ಅನ್ನಪೂರ್ಣಿ ಸುಬ್ರಹ್ಮಣಿ ಮತ್ತಿತರರಿದ್ದರು.

> “ಮೈಸೂರಿನಲ್ಲಿ ಕಾಸ್ಮಾಲಜಿ ಕೇಂದ್ರ ನಿರ್ಮಾಣವಾಗುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ ಹಾಗೂ ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಸಹಯೋಗದಲ್ಲಿ ಪ್ರಗತಿಯಲ್ಲಿರುವ ಈ ಯೋಜನೆಯಿಂದ ಪ್ರವಾಸೋದ್ಯಮ ಹಾಗೂ ವಿಜ್ಞಾನ ಶಿಕ್ಷಣಕ್ಕೆ ತುಂಬಾ ಅನುಕೂಲವಾಗಲಿದೆ. ಅದರಲ್ಲೂ ಕನ್ನಡದಲ್ಲಿ ವಿವರಣೆ ನೀಡುವುದರಿಂದ ಸ್ಥಳೀಯ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗಲಿದೆ.
> –ಸಂಸದ ಯದುವೀರ್



ಮೈಸೂರು, ನ.8(ಎಸ್‌ಬಿಡಿ)– ಮೈಸೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ವಿಶ್ವದ ಮೊದಲ ಗುಮ್ಮಟಾಕಾರದ ತಾರಾಲಯ ಮುಂದಿನ ವರ್ಷ ಸೆಪ್ಟೆಂಬರ್‌ನಲ್ಲಿ ಲೋಕಾರ್ಪಣೆಗೊಳ್ಳುವ ವಿಶ್ವಾಸವಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಜಯ ಚಾಮರಾಜ ಒಡೆಯರ್ ಉನ್ನತ ಕಲಿಕಾ ಕೇಂದ್ರದ ಆವರಣದಲ್ಲಿ ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ ಮೂಲಕ ಸುಮಾರು 90 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಗುಮ್ಮಟ ಮಾದರಿ ತಾರಾಲಯ(ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಸಂಸ್ಥೆ) ಕಾಮಗಾರಿಯನ್ನು ಶುಕ್ರವಾರ ಪರಿಶೀಲಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಕೇವಲ ಮೈಸೂರು ಹಾಗೂ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ಭಾರತಕ್ಕೆ ವಿಶೇಷವಾದ ತಾರಾಲಯವಾಗಲಿದೆ ಎಂದು ಸಂತಸ ವ್ಯಕ್ತಪಡಿಸಿದರು. ಇದು ಭಾರತದ ಪ್ರಮುಖ ಯೋಜನೆಗಳಲ್ಲೊಂದು. 2022ರಲ್ಲಿ ಕಾಮಗಾರಿ ಆರಂಭಗೊಂಡಿತಾದರೂ ನಡುವೆ ಸ್ವಲ್ಪ ವಿಳಂಬವಾಯಿತು. ಸದ್ಯ ಕಾಮಗಾರಿ ಚುರುಕುಗೊಂಡಿದ್ದು, 2025ರ ಸೆಪ್ಟೆಂಬರ್‌ನಲ್ಲಿ ಪೂರ್ಣಗೊಳ್ಳುವ ವಿಶ್ವಾಸವಿದೆ. ಆ ಮೂಲಕ ವಿಜ್ಞಾನ ಶಿಕ್ಷಣ ವ್ಯವಸ್ಥೆಯಲ್ಲಿ ಕರ್ನಾಟಕ, ದೇಶದ ನಾಯಕತ್ವ ವಹಿಸಲಿದೆ. ಕೊಡೈಕನಾಲ್ ಹಾಗೂ ಲಡಾಕ್‌ನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವೀಕ್ಷಣಾಲಯದಲ್ಲಿರುವಂತೆ ಹಗಲು ಮತ್ತು ರಾತ್ರಿ ವೇಳೆ ಆಕಾಶದ ನೈಜ ಚಿತ್ರಣವನ್ನು ಕಣ್ತುಂಬಿಕೊಳ್ಳುವುದರ ಜೊತೆಗೆ ಬಾನಂಗಳದ ಅಧ್ಯಯನ ಹಾಗೂ ಸಂಶೋಧನೆಯನ್ನೂ ನಡೆಸ ಬಹುದಾಗಿದೆ ಎಂದು ತಿಳಿಸಿದರು.

ಅತ್ಯಾಧುನಿಕ ತಂತ್ರಜ್ಞಾನ: ಇದು ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯ 41ನೇ ● 6ನೇ ಪುಟಕ್ಕೆ

ನಾನೇ ಸಿಎಂ ಸಿದ್ದರಾಮಯ್ಯ! ಮುಂದಿನ ಸಿಎಂ ಡಿಕೆಶಿ ಅಭಿಮಾನಿಗಳು!!

ಒಬ್ಬರು ಸಿಎಂ ಸ್ಥಾನದಲ್ಲಿ ಮುಂದುವರೆಯಲು ಪಟ್ಟು; ಮತ್ತೊಬ್ಬರ ಅಭಿಮಾನಿಗಳಿಗೆ ತಮ್ಮ ನಾಯಕನ ಸ್ಥಾನಕ್ಕೇರಿಸುವ ಉತ್ಸಾಹ



ಚನ್ನಪಟ್ಟಣ, ನ.8–ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪ್ರಚಾರದ ಭರಾಟೆ ಜೋರಾಗಿದೆ. ಈ ಹೊತ್ತಿನಲ್ಲೇ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಸ್ಥಾನ ಕುರಿತಾದ ಚರ್ಚೆಯೂ ಆರಂಭವಾಗಿದೆ. ಸಂಡೂರು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಿನ ಮೂರೂವರೆ ವರ್ಷ ನಾನೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದೇನೆ ಎಂಬರ್ಥದಲ್ಲಿ ಹೇಳಿದ್ದರು. ಇದರ ಬೆನ್ನಲ್ಲೇ ಚನ್ನಪಟ್ಟಣ ಉಪ ಚುನಾವಣೆ ಅಖಾಡದಲ್ಲಿ ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಗು ಕೇಳಿಬಂದಿದೆ. ● 6ನೇ ಪುಟಕ್ಕೆ

ನನ್ನ 62 ವರ್ಷ ರಾಜಕಾರಣದಲ್ಲಿ ಇಂತಹ ಕೆಟ್ಟ ಸರ್ಕಾರ ಕಂಡಿಲ್ಲ

ಚಿನಕುರಳಿಯಲ್ಲಿ ಗುಡುಗಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ

ನನ್ನ ಕೊನೆಯುಸಿರಿರುವವರೆಗೂ ಸಕ್ರಿಯ ರಾಜಕಾರಣದಲ್ಲಿರುವೆ



ಪಾಂಡವಪುರ ತಾಲೂಕಿನ ಎಸ್‌ಟಿಜಿ ಪದವಿ ಪೂರ್ವ ಕಾಲೇಜಿನ ವಸತಿ ನಿಲಯ ಕಟ್ಟಡ ಉದ್ಘಾಟನೆ ಮಾಡಿದ ಮಾಜಿ ಪ್ರಧಾನ ಮಂತ್ರಿ ಎಚ್.ಡಿ.ದೇವೇಗೌಡ ಅವರನ್ನು ಮಾಜಿ ಸಚಿವ ಹಾಗೂ ಸಂಸ್ಥೆಯ ಅಧ್ಯಕ್ಷ ಸಿ.ಎಸ್.ಪುಟ್ಟರಾಜು ಅವರು ಅಭಿನಂದಿಸಿದರು.

ಚಿನಕುರಳಿ/ಮಂಡ್ಯ,ನ.8– ಹೋರಾಟವೆಂಬುದು ದೇವೇಗೌಡರ ಹುಟ್ಟುಗುಣವಾಗಿದ್ದು, ನನ್ನ ದೇಹದಲ್ಲಿ ಕೊನೆಯುಸಿರುವವರೆಗೂ ಸಕ್ರಿಯ ರಾಜಕಾರಣದಲ್ಲಿದ್ದುಕೊಂಡು ಹೋರಾಟ ಮಾಡುತ್ತೇನೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಗುಡುಗಿದರು.

ಶುಕ್ರವಾರ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಶ್ರೀರಾಮಮೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿದ ನಂತರ ಎಸ್‌ಟಿಜಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಹಾಸ್ಟೆಲ್ ಕಟ್ಟಡ ಉದ್ಘಾಟಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ರಾಜ್ಯದಲ್ಲಿ ಇರುವಂತಹ ಕೆಟ್ಟ ಸರಕಾರವನ್ನು ನನ್ನ 62 ವರ್ಷದ ರಾಜಕೀಯದ ಇತಿಹಾಸದಲ್ಲಿ ಕಂಡಿಲ್ಲ. ದೇವೇಗೌಡರಿಗೆ 92 ವರ್ಷ ವಯಸ್ಸಾಗಿದೆ. ಮೊಮ್ಮಗನನ್ನು ಗೆಲ್ಲಿಸಿ ನಂತರ ಮನೆ ಸೇರಿಕೊಳ್ಳಾರೆ ಎಂದುಕೊಂಡಿದ್ದಾರೆ. ನಾನು ಮನೆ ಸೇರುವ ಜಾಯಮಾನದವನಲ್ಲ, ಕೊನೆಯವರೆಗೂ ಹೋರಾಟ ಮಾಡುತ್ತೇನೆ. ಈ ಸರಕಾರವನ್ನು ಕಿತ್ತೊಗೆಯುವರೆಗೂ ಹೋರಾಟ ನಿಲ್ಲೋದಿಲ್ಲ ಎಂದು ಹೇಳಿದರು.

ಎಚ್‌ಡಿಕೆ ವರ್ಸಸ್ ಡಿಕೆ ಎಂದು ಹೋಲಿಕೆ ಮಾಡಬೇಡಿ, ಎಚ್.ಡಿ.ಕುಮಾರಸ್ವಾಮಿ ದೇವೇಗೌಡರ ಮಗ ಎಂದಲ್ಲ. ದೇಶದಲ್ಲಿ ಜೆಡಿಎಸ್ ಕೇವಲ ಎರಡು ಸ್ಥಾನಗಳಿದ್ದರೂ ದೇಶದ ಎರಡು ಪ್ರಮುಖ ಖಾತೆಯ ನಿರ್ವಹಣೆಯ ಜವಾಬ್ದಾರಿ ನೀಡಿದ್ದಾರೆ. ಇದು ಕುಮಾರಸ್ವಾಮಿ ಬೆಳೆಸಿಕೊಂಡಿರುವ ವ್ಯಕ್ತಿತ್ವ ಎಂದರು. ವಾಲ್ಮೀಕಿ ನಿಗಮದ 80 ಕೋಟಿ ಹಣವನ್ನು ಭ್ರಷ್ಟಾಚಾರ ನಡೆಸಿ ತೆಲಂಗಾಣ ಚುನಾವಣೆಗೆ ಬಳಕೆ ಮಾಡಿಕೊಂಡರು. ಮಂಡ್ಯ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಗುತ್ತಿಗೆದಾರನಾಗಿದ್ದ ವ್ಯಕ್ತಿಯನ್ನು ನಮ್ಮ ವಿರುದ್ಧ ಅಭ್ಯರ್ಥಿಯನ್ನಾಗಿ ಮಾಡಿ, ಅವರ ಗುತ್ತಿಗೆಯ ಕೆಲಸದ 120 ಕೋಟಿ ● 6ನೇ ಪುಟಕ್ಕೆ

> “ಸರ್ಕಾರವನ್ನು ಕಿತ್ತುಹಾಕುವ ಕುರಿತ ದೇವೇಗೌಡರ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಸಿಎಂ ಶಿವಕುಮಾರ್, ಇದು ಸುಲಭವಾಗಿ ಕಿತ್ತು ಹಾಕಲು ನಮ್ಮ ಸರ್ಕಾರ ಕಡಲೆ ಗಿಡ ಅಲ್ಲ. ಇದು 136 ಶಾಸಕರ ಬಲಿಷ್ಠ ಸರ್ಕಾರವಾಗಿದೆ. ಇದು ಜನರಿಂದ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದೆ ಎಂದು ತಿರುಗೇಟು ನೀಡಿದರು.

ಮನೆ ಬಾಗಿಲಿಗೆ ಬರಲಿದೆ ಮುಜರಾಯಿ ದೇವಸ್ಥಾನದ ಪ್ರಸಾದ

ಹೊಸ ಯೋಜನೆ ಜಾರಿಗೆ ಮುಜರಾಯಿ ಇಲಾಖೆ ಚಿಂತನೆ


ಬೆಂಗಳೂರು, ನ. 8– ಕರ್ನಾಟಕದ ಪ್ರತಿ ದೇವಾಲಯಗಳ ಪ್ರಸಾದವನ್ನು ಮನೆ ಬಾಗಿಲಿಗೆ ತಲುಪಿಸುವ ಯೋಜನೆ ಜಾರಿಗೆ ಮುಜರಾಯಿ ಇಲಾಖೆ ಚಿಂತನೆ ನಡೆಸಿದೆ. ಈ ಕುರಿತಾಗಿ ಮುಜರಾಯಿ ಸಚಿವರ ಜೊತೆ ಚರ್ಚೆ ಮಾಡಿ ಶೀಘ್ರದಲ್ಲೇ ಜಾರಿ ಮಾಡಲಾಗುವುದು ಎಂದು ಮಾಧ್ಯಮಕ್ಕೆ ಮುಜರಾಯಿ ಇಲಾಖೆ ಆಯುಕ್ತ ವೆಂಕಟೇಶ್ ಮಾಹಿತಿ ನೀಡಿದ್ದಾರೆ.

ಮನೆಯಲ್ಲಿ ಕುಳಿತೇ ಪ್ರಸಿದ್ಧ ದೇವಾಲಯಗಳ ಪ್ರಸಾದ ಸ್ವೀಕರಿಸಿ. ಸದ್ಯ ಮುಜರಾಯಿ ಇಲಾಖೆ ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಜನರಿಗೆ ಸೇವೆ ನೀಡಲು ಹಲವಾರು ಪ್ಲ್ಯಾನ್ ಮಾಡಿಕೊಳ್ಳುತ್ತಿದೆ. ಈಗಾಗಲೇ ಆನ್ ಲೈನ್ ಸೇವೆ, ಬುಕ್ಕಿಂಗ್ ಅಂತ ಜಾರಿ ಆಗಿದೆ. ಈಗ ಮತ್ತೊಂದು ಹೊಸ ಯೋಜನೆ ಜಾರಿಗೆ ಪ್ಲ್ಯಾನ್ ಮಾಡಲಾಗುತ್ತಿದೆ. ಇನ್ನು ಈ ಹೊಸ ಯೋಜನೆಯಿಂದ ಮನೆಯಲ್ಲೇ ಕುಳಿತು ಪ್ರಸಿದ್ಧ ದೇವಾಲಯಗಳ ಪ್ರಸಾದವನ್ನು ಸ್ವೀಕರಿಸಬಹುದಾಗಿದೆ. ಕರ್ನಾಟಕ ರಾಜ್ಯವ್ಯಾಪಿ ● 6ನೇ ಪುಟಕ್ಕೆ









ಮೈಸೂರು ಮಿತ್ರ ಶನಿವಾರ 9 ನವೆಂಬರ್ 2024

ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಹಬ್ಬ ಆಚರಣೆ

ಸಂಸ್ಕೃತಿ ಪ್ರೀತಿಸುವಂತೆ ಶಾಸಕ ಹರೀಶ್‌ಗೌಡ ಕರೆ



ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ಹಬ್ಬದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿದರು.

ಮೈಸೂರು, ನ.8(ಜಿಎ)–ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸಾಂಸ್ಕೃತಿಕ ವೇದಿಕೆ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಶುಕ್ರವಾರ ಕನ್ನಡ ಹಬ್ಬ ಆಚರಿಸಲಾಯಿತು.

ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿ ಮಾತನಾಡಿ, ಮಾತೃ ಭಾಷೆ ಹಾಗೂ ನಮ್ಮ ಸಂಸ್ಕೃತಿ ಉಳಿದರೆ ನೆಮ್ಮದಿಯಿಂದ ಇರಬಹುದು. ಕನ್ನಡ ಭಾಷೆ ,ರಾಜ್ಯದ ಸಂಸ್ಕೃತಿಯನ್ನು ನಾವು ಪ್ರೀತಿಸಬೇಕು. ಕನ್ನಡಕ್ಕೆ ತನ್ನದೇ ಆದ ಇತಿಹಾಸ ಹಾಗೂ ಮಹತ್ವವಿದ್ದು, ಅದನ್ನು ಯಾರು ಮರೆಯಬಾರದು ಎಂದು ತಿಳಿಸಿದರು. ಇಂದು ಜಗತ್ತು ಸ್ಪರ್ಧಾತ್ಮಕ ಯುಗವಾಗಿದ್ದು, ವಿದ್ಯಾರ್ಥಿಗಳು ಓದಿನ ಜೊತೆಯಲ್ಲಿ ಕೌಶಲ್ಯಾಧಾರಿತ ವಿಷಯಗಳನ್ನು ಅಧ್ಯಯನ ಮಾಡಿ. ಓದಿನ ಜೊತೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ಮೂಲಕ ಜೀವನ ರೂಪಿಸಿಕೊಳ್ಳಬೇಕು. ಶಿಕ್ಷಣ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿ ಗಳ ಜೀವನವನ್ನು ಉತ್ತುಂಗ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ಸಹಕಾರಿಯಾಗಲಿದೆ ಎಂದು ಸಲಹೆ ನೀಡಿದರು. ಈ ವೇಳೆ ಕಾಲೇಜಿನ ಎರಡನೇ ಹಂತದ ಕಾಮಗಾರಿ ಹಾಗೂ ವಿದ್ಯಾರ್ಥಿನಿಲಯದಲ್ಲಿ ಹೆಚ್ಚು ... ವರಿಯಾಗಿ 500 ವಿದ್ಯಾರ್ಥಿನಿಯರಿಗೆ ತಂಗಲು ಕಟ್ಟಡ ನಿರ್ಮಾಣಕ್ಕೆ ಶಂಕು ಸ್ಥಾಪನೆ ಕಾರ್ಯ ನೆರವೇರಿಸುವುದಾಗಿ ಭರವಸೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಕನ್ನಡ ಏಕೀಕರಣ ಸಂದರ್ಭದಲ್ಲಿ ಸಾಕಷ್ಟು ಮಹನೀಯರು ಹೋರಾಟ ಮಾಡಿ, ರಾಜ್ಯ ಒಂದಾಗಲು ಶ್ರಮಿಸಿದ್ದಾರೆ. ಕನ್ನಡ ಭಾಷೆಗೆ ತನ್ನದೇಯಾದ ಇತಿಹಾಸದ ಮಹತ್ವ ಇದೆ. ರಾಜ್ಯದ ಕನ್ನಡ ನೆಲೆದಲ್ಲಿ ನಾನಾ ಸಾಂಸ್ಕೃತಿಕ ವಿಚಾರಗಳಿವೆ. ಇದನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ತಿಳಿದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಆರ್.ನಳಿನಿ, ಸಾಂಸ್ಕೃತಿಕ ವೇದಿಕೆಯ ಕಾರ್ಯದರ್ಶಿ ಪ್ರೊ. ಎಚ್.ಎಸ್.ಧನಲಕ್ಷ್ಮಿ, ಖಜಾಂಚಿ ಪ್ರೊ.ಎನ್.ವನಿತ, ಐಕ್ಯೂಎಸಿ ಘಟಕದ ಸಂಚಾಲಕರಾದ ಡಾ. ಎನ್.ನಾಗೇಂದ್ರ, ಪತ್ರಾಂಕಿತ ವ್ಯವಸ್ಥಾಪಕರಾದ ಬಸವ ರಾಜು, ವಿದ್ಯಾರ್ಥಿ ವೇದಿಕೆಯ ಅಧ್ಯಕ್ಷೆ ಲಿಖಿತ , ಕಾರ್ಯದರ್ಶಿ ಸಿಂಧೂರಾಣಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಎನ್.ಆರ್.ಮೊಹಲ್ಲಾದ ಶ್ರೀ ಕಾವೇರಿ ಕೊಡವ ಒಕ್ಕೂಟದ ಸಂತೋಷ ಕೂಟ





ಶ್ರೀ ಕಾವೇರಿ ಕೊಡವ ಒಕ್ಕೂಟದ ಸಂತೋಷಕೂಟದಲ್ಲಿ ಪಾಲ್ಗೊಂಡಿರುವ ಕೊಡವ ಬಾಂಧವರು.

ಮೈಸೂರು, ನ. 8– ಮೈಸೂರಿನ ಎನ್.ಆರ್. ಮೊಹಲ್ಲಾದ ಶ್ರೀ ಕಾವೇರಿ ಕೊಡವ ಒಕ್ಕೂಟದ ಸಂತೋಷ ಕೂಟವು ಜಯಲಕ್ಷ್ಮಿಪುರಂನ ಕೊಡವ ಸಹಕಾರ ಸಂಘದಲ್ಲಿ ಇತ್ತೀಚೆಗೆ ನಡೆಯಿತು. ಇಡೀ ದಿನ ನಡೆದ ಕಾರ್ಯಕ್ರಮದಲ್ಲಿ ಬೊಳಕಾಟ್, ಕೊಡವಾಟ್ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮವನ್ನು ಚೊಟ್ಟೆಮಂಡ ಗೀತಾ ಅಶೋಕ್ ನಡೆಸಿಕೊಟ್ಟರು. ಬೊಳಕಾಟ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಚೊಟ್ಟೆಮಂಡ ಲಾಲು, ದೀಕ್ಷಿತಾ, ಕೊಟೇರ ಕುಶಾಲಪ್ಪ, ಕೋಡಿರಾ ಪುಷ್ಪಾ, ಕೊಟೇರಾ ರೇವತಿ ಕುಶಾಲಪ್ಪ ಅವರ ಮಾರ್ಗದರ್ಶನದಲ್ಲಿ ನಡೆಯಿತು.

ಒಕ್ಕೂಟದ ಅಧ್ಯಕ್ಷ ಕೊಡೀರಾ ಪ್ರಕಾಶ್ ನಾಣಯ್ಯ, ಕಾರ್ಯದರ್ಶಿ ಮಾಡೆಟೀರಾ ಸುನೀಲ್ ಸೋಮಣ್ಣ ಮತ್ತು ಕಮಿಟಿ ಸದಸ್ಯರಾದ ಬಾಚಿರಾನಾಯಂಡ ಪ್ರಸನ್ನ, ನರಪಂಡ ಸನ್ನು ಮಂದಪ್ಪ, ಕೊಟೇರಾ ಸುರೇಶ್ ಕುಶಾಲಪ್ಪ, ಅಟ್ರಂಗಡ ಪ್ರವೀಣ್ ಪೂವಣ್ಣ, ಚೋಟೆಯಂಡ ಸ್ಮಿತಾ ಪೂಣಚ್ಚ, ಬಾಲ್ಯಾಟಂಡ ಸರಸು ಕುಶಾಲಪ್ಪ, ಚೊಟ್ಟೆಮಂಡ ಲಾಲೂ ಮೋಹನ್ ಮತ್ತು ಅಜ್ಜಿನಿಕಂಡ ಚಿಟ್ಟಿಯಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರೈತ ಸಣ್ಣಪ್ಪ ಸಾವಿನ ವಿಷಯ: ತಮ್ಮ ವಿರುದ್ಧ ಉದ್ದೇಶಪೂರ್ವಕವಾಗಿ ಎಫ್‌ಐಆರ್ ದಾಖಲು

ಸಂಸದ ತೇಜಸ್ವಿ ಸೂರ್ಯ ಆಕ್ರೋಶ

ಬೆಂಗಳೂರು, ನ.8 (ಕೆಎಂಶಿ)–ರೈತ ಸಣ್ಣಪ್ಪ ಸಾವಿನ ವಿಷಯಕ್ಕೆ ಸಂಬಂಧಿಸಿದಂತೆ ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸ್ಪಷ್ಟನೆ ಹಿನ್ನೆಲೆಯಲ್ಲಿ ಟ್ವೀಟ್ ಹಿಂಪಡೆದರೂ ಸಚಿವ ಪ್ರಿಯಾಂಕ್ ಖರ್ಗೆ ಪೊಲೀಸರನ್ನು ಹೆದರಿಸಿ, ಬೆದರಿಸಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾವೇರಿ ರೈತನೊಬ್ಬ ತನ್ನ ಜಮೀನಿನ ಕಂದಾಯ ದಾಖಲೆಗಳಲ್ಲಿ ವಕ್ಫ್ ಬೋರ್ಡ್ ಹೆಸರು ನಮೂದಿಸಲಾಗಿದೆ ಎಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಟ್ವೀಟ್ ಮಾಡಿದ್ದೆ. ನಂತರ ಪೊಲೀಸ್ ವರಿಷ್ಠಾಧಿಕಾರಿ ಸ್ಪಷ್ಟನೆ ಹಿನ್ನೆಲೆಯಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ತಾವು ಟ್ವೀಟ್ ಡಿಲೀಟ್ ಮಾಡಿ ಘಟನೆಯ ಸೂಕ್ತ ತನಿಖೆ ಆಗಬೇಕೆಂದು ಹೇಳಿದ್ದರೂ, ತಮ್ಮ ವಿರುದ್ಧ ಉದ್ದೇಶಪೂರ್ವಕವಾಗಿ ಎಫ್‌ಐಆರ್ ದಾಖಲಿಸಲಾಗಿದೆ ಎಂದರು.

ತಾವು ಟ್ವೀಟ್ ಡಿಲೀಟ್ ಮಾಡಿದ ನಂತರವೂ, ಸಂಸದ ತೇಜಸ್ವಿ ಸೂರ್ಯ ಸುಳ್ಳು ಸುದ್ದಿ ಹಬ್ಬಿಸಿದ್ದಾರೆ ಎಂದು ಎಫ್‌ಐಆರ್ ದಾಖಲಾಗಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮಾಡಲು ಏನು ಕೆಲಸ ಇಲ್ಲದೆ, ಇಂತಹ ವಿಚಾರಗಳನ್ನೇ ಕೆದಕಿ ಎಫ್‌ಐಆರ್ ದಾಖಲಾಗುವಂತೆ ಮಾಡುತ್ತಿದ್ದಾರೆ. ಇದಕ್ಕಾಗಿ ಅವರು ರಾಜ್ಯದ ಜನರ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು. ವಕ್ಫ್ ತಿದ್ದುಪಡಿ ಮಸೂದೆ ಕುರಿತ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಅಧ್ಯಕ್ಷ ಜಗದಂಬಿಕಾ ಪಾಲ್ ಅವರನ್ನು ಭೇಟಿ ಮಾಡಿದ ಹಾವೇರಿಯ ರೈತ ಕುಟುಂಬವೊಂದು ತಮ್ಮ ಜಮೀನಿನ ಪಹಣಿಯಲ್ಲಿ ವಕ್ಫ್ ಹೆಸರು ನಮೂದಾಗಿರುವ ಸಂಗತಿಯನ್ನು ಹೇಳಿಕೊಂಡಿದ್ದು, ಕನ್ನಡದ ಆನ್‌ಲೈನ್ ಸುದ್ದಿವಾಹಿನಿಯೊಂದು ಸುದ್ದಿಯನ್ನೂ ಬಿತ್ತರ ಮಾಡಿತ್ತು ಎಂದರು.

ಸಿದ್ದರಾಮಯ್ಯರ ಮುಗಿಸಲು ಬಿಜೆಪಿ ಪ್ರಯತ್ನ:ಡಿಕೆಶಿ



ಬೆಂಗಳೂರು, ನ.8 (ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನಮಾನಸದ ನಾಯಕ ಎಂಬ ಕಾರಣಕ್ಕೆ ಅವರನ್ನು ರಾಜಕೀಯವಾಗಿ ಮುಗಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಪಾದಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದೆಲ್ಲೆಡೆ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ನಾಯಕರನ್ನು ಬಿಜೆಪಿ ರಾಜಕೀಯವಾಗಿ ಮುಗಿಸಲು ಪ್ರಯತ್ನಿಸುತ್ತಿದೆ ಎಂದರು.

ಸಮಾಜದ ಎಲ್ಲಾ ವರ್ಗದ ಜನರನ್ನು ಒಟ್ಟಾಗಿ ತೆಗೆದುಕೊಂಡು ಹೋಗುವುದರ ಮೇಲೆ ಕಾಂಗ್ರೆಸ್ ಪಕ್ಷ ನಂಬಿಕೆಯಿಟ್ಟಿದೆ ಎಂದರು.

ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್‌ನಿಂದ ಮೈಸೂರಲ್ಲಿ ಅತ್ಯಾಕರ್ಷಕ ವಿನ್ಯಾಸಗಳ ಆಭರಣ ಪ್ರದರ್ಶನ



ಮೈಸೂರು, ನ. 8– ದೇಶದ ಹೆಸರಾಂತ ಆಭರಣ ಸಂಸ್ಥೆಯಾಗಿರುವ ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜ್ಯುವೆಲ್ಲರ್ಸ್ ಮೈಸೂರಿನಲ್ಲಿ ನಾಲ್ಕು ದಿನಗಳ ಆಕರ್ಷಕ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಿದೆ. ಈ ಪ್ರದರ್ಶನವು ಮೈಸೂರಿನ ಹೋಟೇಲ್ ಗ್ರ್ಯಾಂಡ್ ಮರ್ಕ್ಯೂರ್‌ನ ನೆಲಮಹಡಿಯಲ್ಲಿರುವ ದಿ ರೀಜೆಂಟ್ ಹಾಲ್‌ನಲ್ಲಿ ನವೆಂಬರ್ 8ರಿಂದ 11ರವರೆಗೆ ನಡೆಯಲಿದೆ. ಸಾಂಪ್ರದಾಯಿಕ ಮತ್ತು ಸಮಕಾಲೀನವಾದ ಆಭರಣಗಳ ಸಂಗ್ರಹದ ವಿಶಿಷ್ಟ ಶ್ರೇಣಿಯೊಂದಿಗೆ ಶುದ್ಧ ಚಿನ್ನ ಮತ್ತು ರತ್ನಗಳು ಹಾಗೂ ಅತ್ಯುತ್ತಮ ಕರಕುಶಲತೆಯೊಂದಿಗೆ ಸಿದ್ಧಪಡಿಸಲಾದ ಮನಮೋಹಕ ಆಭರಣಗಳು ಇಲ್ಲಿ ಪ್ರದರ್ಶನಗೊಳ್ಳುತ್ತಿವೆ. ಈ ಆಭರಣಗಳ ಪ್ರದರ್ಶನವನ್ನು ಭಾರತೀಯ ಹೆಸರಾಂತ ನಟಿ ಮತ್ತು ಮಾಡೆಲ್ ರೋಶಿನಿ ಪ್ರಕಾಶ್ ಉದ್ಘಾಟನೆ ಮಾಡಿದರು.

ಕಾವೇರಿ ವಿದ್ಯಾಸಂಸ್ಥೆಯಲ್ಲಿ ಕ್ಯಾನ್ಸರ್ ಜನ ಜಾಗೃತಿ ಜಾಥಾ



ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಅಂಗವಾಗಿ ಮೈಸೂರಿನ ಕುವೆಂಪು ನಗರದ ಕಾವೇರಿ ವಿದ್ಯಾಸಂಸ್ಥೆ ಹೆಚ್ ಎಸ್ ಮತ್ತು ಪದವಿ ವಿದ್ಯಾರ್ಥಿಗಳು ಭಾನವಿ ಆಸ್ಪತ್ರೆಯ ಮುಂಭಾಗದಿಂದ ಮೂಲಕ ಅಕ್ಷಯ ಭಂಡಾರದ ಮಾರ್ಗವಾಗಿ ಅಪೋಲೋ ಆಸ್ಪತ್ರೆಯ ಮುಖ್ಯ ರಸ್ತೆಗಳಲ್ಲಿ ಸಾಗಿ ಜನರಿಗೆ ಕ್ಯಾನ್ಸರ್‌ನಿಂದಾಗುವ ಅಪಾಯಗಳು, ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮೆರವಣಿಗೆಯ ಮೂಲಕ ಜಾಗೃತಿ ಮೂಡಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಡಾ. ಸಿ.ಈ. ಸುಬ್ರಮಣ್ಯ ಅವರು ಕ್ಯಾನ್ಸರ್ ಪತ್ತೆ ಹಚ್ಚುವ ಕ್ರಮಗಳು, ಇದರಿಂದ ಆಗುವ ಅಪಾಯಗಳು, ನಾವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು. ಪ್ರಾಂಶುಪಾಲರಾದ ನವೀನ್ ಎನ್ ಸಿ ಹಾಗೂ ಶಿಕ್ಷಕರು ಹಾಜರಿದ್ದರು.

ಯು.ಡಿ.ಪವನ್ ರಾಜ್ಯಮಟ್ಟಕ್ಕೆ ಆಯ್ಕೆ



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ 17 ವರ್ಷದೊಳಗಿನ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿ ಯು.ಡಿ. ಪವನ್ ಗುಂಡು ಎಸೆತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿಯನ್ನು ಕನ್ನಡ ರಾಜ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ಮೈಸೂರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಅಭಿನಂದಿಸಿದರು. ಚಿತ್ರದಲ್ಲಿ ಮುಖ್ಯೋಪಾಧ್ಯಾಯರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಿದ್ದಾರೆ.

ನಿಧನ



ಡಾ.ಸೈಯದ್ ಷಾ ಖುಸ್ರೊ ಹುಸ್ಸಾನಿ

ಮೈಸೂರು, ನ. 8–ಮೈಸೂರಿನ ಡಾ. ಸೈಯದ್ ಷಾ ಖುಸ್ರೊ ಹುಸ್ಸಾನಿ (79) ಅವರು ನ.6ರಂದು ನಿಧನರಾದರು. ಶ್ರೀಯುತರು ಸಜ್ಜದ್ ನಷೀನ್ ಹಝರತ್ ಕ್ವಾಜಾ ಬಂದಾ ನವಾಜ್ (ಆರ್.ಎ) ಕಲಬುರ್ಗಿ, ಉಪಕುಲಪತಿಗಳು, ಕ್ವಾಜಾ ಬಂದಾ ನವಾಜ್ ಯೂನಿವರ್ಸಿಟಿ, ಮಾಜಿ ಸದಸ್ಯರು, ಕರ್ನಾಟಕ ರಾಜ್ಯ ವಕ್ಫ್ ಬೋರ್ಡ್, ಬೆಂಗಳೂರು, ಮಾಜಿ ಸದಸ್ಯರು, ಸೆಂಟ್ರಲ್ ವಕ್ಫ್ ಕೌನ್ಸಿಲ್, ದೆಹಲಿ, ಇನ್ನೂ ಅನೇಕ ಸಂಘಟನೆಗಳಲ್ಲಿ ಪದಾಧಿಕಾರಿಗಳಾಗಿದ್ದವರು. ಮೃತರು ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನ. 7 ರಂದು ಸಂಜೆ ಮಗ್ರಿಬ್ ಪ್ರಾರ್ಥನೆಯ ನಂತರ ಹಝರತ್ ಕ್ವಾಜಾ ಬಂದಾ ನವಾಜ್ ರುದ್ರಭೂಮಿಯಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.11.2024 ಶನಿವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತಕ್ಕೆ ಯೋಗ ಮತ್ತು ಆಕ್ಯೂಪಂಕ್ಚರ್ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.
- **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು :** ಕೃತಕ ಬುದ್ಧಿಮತ್ತೆಯ ಮೂಲಕ ಜಗತ್ತನ್ನು ಮರು ರೂಪಿಸುವ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಪ್ರೊ ಹೆಚ್.ಎಸ್. ನಾಗೇಂದ್ರಸ್ವಾಮಿ, ಸಂಪನ್ಮೂಲ ವ್ಯಕ್ತಿಗಳು : ಪ್ರೊ. ಎಸ್. ಶ್ರೀನಾಥ್, ಪ್ರೊ. ಸಿ.ಆರ್. ಆದಿತ್ಯಾ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 9.30 ರಿಂದ.
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ವಿದ್ಯಾವರ್ಧಕ ಕಾನೂನು ಕಾಲೇಜು :** ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ನ್ಯಾಯಮೂರ್ತಿ ಇ.ಎಸ್. ಇಂದಿರೇಶ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಎಸ್. ಶಿವಲಿಂಗಯ್ಯ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.
- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ) :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಶ್ರೀ ಕ್ಷೇತ್ರ, ಮೈಸೂರು ಜಿಲ್ಲೆ, ಬೆಳಗ್ಗೆಯಿಂದ.
- **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾಕುಂಭಾಭಿಷೇಕ, 10ನೇ ವರ್ಷದ ಹಾಲರವಿ ಸೇವೆ, ಚಿಣ್ಣರ ಚಿತ್ರಕಲಾ ಮತ್ತು ಆಟೋಟ ಸ್ಪರ್ಧೆ, ರಂಗವಲ್ಲಿ ಸ್ಪರ್ಧೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.
- **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ :** ಸುವರ್ಣ ಕರ್ನಾಟಕ 50: ಸಂಭ್ರಮಾಚರಣೆ, ಐತಿಹಾಸಿಕ ದಾಖಲೆಗಳ, ಛಾಯಾಚಿತ್ರಗಳ ಪ್ರದರ್ಶನ, ಸ್ಥಳ: ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾ ವಿದ್ಯಾಲಯ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30 ರಿಂದ.
- **ಭಾರತ ಸರ್ಕಾರದ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವಾಲಯ:** ಮೈಸೂರು ಸಂಗೀತ ಸುಗಂಧ–2024, ಬೆಳಗ್ಗೆ 9ರಿಂದ ವಿಜಯ ಸೂರ್ಯ ಅವರಿಂದ ನಾಗಸ್ವರಂ, ಬೆಳಗ್ಗೆ 9.15 ರಿಂದ ಆರ್.ಎನ್. ಶ್ರೀಲತಾ ಶಿಷ್ಯರಿಂದ ಸಮೂಹ ಗಾಯನ, ಬೆಳಗ್ಗೆ 10 ರಿಂದ ಉಡುಪಿ ಅರವಿಂದ ಹೆಬ್ಬಾರ್ ಅವರಿಂದ ಪುರಂದರ ದಾಸರ ಸಂಯೋಜನೆ ಕುರಿತು ಉಪನ್ಯಾಸ ಪ್ರಾತ್ಯಕ್ಷಿಕೆ, ಬೆಳಗ್ಗೆ 10.45ಕ್ಕೆ ಮೈಸೂರು ಡಿ. ಬಾಲಕೃಷ್ಣ ಅವರಿಂದ ಕರ್ನಾಟಕ ವಾದ್ಯ ವೀಣಾ, ಬೆಳಗ್ಗೆ 11.45ಕ್ಕೆ ಬೆಂಗಳೂರಿನ ಶ್ರೀಕಂಠಮ್ ನಾಗೇಂದ್ರ ಶಾಸ್ತ್ರಿ ಅವರಿಂದ ಮೈಸೂರು ಸಂಯೋಜಕರ ಮೇಲೆ ಉಪನ್ಯಾಸ ಪ್ರಾತ್ಯಕ್ಷಿಕೆ, ಮಧ್ಯಾಹ್ನ 2 ರಿಂದ ಮೋಹನ್ ಕುಮಾರ್ ದಾಸರು ತುಮಕೂರು ಅವರಿಂದ ಹರಿಕಥೆ, ಮ. 2.45 ರಿಂದ ವಿಜಯಲಕ್ಷ್ಮಿ ಸುರೇಶ್ ಬಾಳೇಕುಂದ್ರೆ ಅವರಿಂದ ಅಕ್ಕ ಮಹಾದೇವಿ ಮೇಲೆ ಉಪನ್ಯಾಸ ಪ್ರಾತ್ಯಕ್ಷಿಕೆ, ಸಂಜೆ 4.45 ರಿಂದ ಟಿ.ಕೆ.ರಾಮಚಂದ್ರ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 4.30ರಿಂದ ಬೆಂಗಳೂರಿನ ಮಾನಸಿಪ್ರಸಾದ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 5.15ರಿಂದ ಕೆ.ಗಾಯತ್ರಿ ಚೆನ್ನೈ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 6 ರಿಂದ ಎಸ್.ಶಂಕರ್, ಬೆಂಗಳೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣ.
- **ನಾಟ್ಯ ಅಕಾಡೆಮಿ ಪ್ರದರ್ಶಕ ಕಲೆಗಳು ಮತ್ತು ಸಂಶೋಧನಾ ಕೇಂದ್ರ :** ವಾರ್ಷಿಕೋತ್ಸವ ಪ್ರಯುಕ್ತ ನೃತ್ಯ, ಗಾಯನ, ಏಕಪಾತ್ರಾಭಿನಯ, ರಂಗೋಲಿ, ಆಶುಭಾಷಣ, ಕರೋಕೆ, ವೇಷಭೂಷಣ, ಚಿತ್ರಕಲಾ, ಪ್ರಬಂಧ ಸ್ಪರ್ಧೆ, ಸ್ಥಳ: ಪುರಭವನ, ಬೆಳಗ್ಗೆ 10 ರಿಂದ.
- **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** 69ನೇ ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾಲೇಜು ಪ್ರಾಂಶುಪಾಲರಾದ ಡಾ. ಎಂ. ಶಾರದ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾಭವನ, ಬೆಳಗ್ಗೆ 10.30ಕ್ಕೆ.
- **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ವಚನಕಾರರ ಕುರಿತು ಭಾಷಣ ಸ್ಪರ್ಧೆ ಹಾಗೂ ಉಪನ್ಯಾಸ, ಉದ್ಘಾಟನೆ : ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ಬಿ. ಬೆಟ್ಟಸ್ವಾಮಿ, ಬಹುಮಾನ ವಿತರಣೆ : ಜೆಎಸ್‌ಎಸ್ ಪಿಯು ಕಾಲೇಜು ಪ್ರಿನ್ಸಿಪಾಲ್ ಎ.ಆರ್. ಕಾಂತರಾಜು, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ.ನಾಗೇಶ್, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ವಿಜಯನಗರ 2ನೇ ಹಂತ, ಬೆಳಗ್ಗೆ 10.30ಕ್ಕೆ.
- **ಗಿರಿ ಚಂದ್ರಶೇಖರ್ ಮತ್ತು ಪಕ್ಷಿ ಪ್ರೇಮಿಗಳು :** ಭಾರತದ ಪಕ್ಷಿ ಪಿತಾಮಹ ಡಾ. ಸಲೀಂ ಅಲಿ ಅವರ ನೆನಪಿನಲ್ಲಿ ರೆಕ್ಕೆ ಪುಕ್ಕ ಭಾರತದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ : ಮನು ಕೆ. ಮತ್ತು ಕು. ವಿಜಯಲಕ್ಷ್ಮಿ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.
- **ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಅಧಿಕೃತ ಕಲಾ–ಸಾಹಿತ್ಯಿಕ ಸಂಘವಾದ ಸಂಪಾದಕ ಮಂಡಳಿ :** ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆ, ಮುಖ್ಯ ಅತಿಥಿಗಳು : ಗಾಯಕ ಡಾ. ಸುಚೇತನ್ ರಂಗಸ್ವಾಮಿ, ಜೆಎಸ್‌ಎಸ್ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಕುಲಸಚಿವ ಪ್ರೊ. ಡಾ. ಎಸ್.ಎ. ಧನರಾಜ, ಕಾಲೇಜಿನ ಪ್ರಭಾರ ಪ್ರಾಂಶುಪಾಲ ಡಾ. ಸಿ.ನಟರಾಜು, ಡೀನ್ ಡಾ. ಎಂ.ಎನ್. ನಾಗೇಂದ್ರ ಪ್ರಸಾದ್, ಸಂಪಾದಕ ಮಂಡಳಿ ಪ್ರಾಧ್ಯಾಪಕರಾದ ಡಾ. ವಾಣಿಶ್ರೀ ಅರುಣ್, ಸ್ಥಳ: ಎಸ್‌ಜೆಸಿಇ ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು :** ವಜ್ರ ಮಹೋತ್ಸವದ ಸಂಭ್ರಮಾಚರಣೆ ಅಂಗವಾಗಿ ರಂಗಬೆಳಕು ಕುರಿತ ಪ್ರಾತ್ಯಕ್ಷಿಕೆ, ರಂಗಾಯಣ ಬೆಳಕು ವಿನ್ಯಾಸಕರಾದ ಮಹೇಶ್ ಕಲ್ಲತ್ತಿ ಅವರಿಂದ, ಸ್ಥಳ: ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಬೆಳಗ್ಗೆ 11 ರಿಂದ.
- **ಕಾವೇರಿ ನಗರ ಕ್ಷೇಮಾಭಿವೃದ್ಧಿ ಸಮಿತಿ :** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಶಾಸಕ ತನ್ವೀರ್‌ಸೇಠ್, ಮುಖ್ಯ ಅತಿಥಿಗಳು : ಕಾಂಗ್ರೆಸ್ ಮುಖಂಡರಾದ ಮಹಮ್ಮದ್ ಖಲೀಲ್ ಉರ್ ರೆಹಮಾನ್, ಅಕ್ಮಲ್ ಪಾಷ, ಸಯ್ಯದ್ ಇಕ್ಬಾಲ್, ಸ್ಥಳ: ಕಾವೇರಿ ನಗರದ ಚಾಮುಂಡೇಶ್ವರಿ ದೇವಸ್ಥಾನ, ಮಧ್ಯಾಹ್ನ 2ಕ್ಕೆ.
- **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯ ಸಹಾಯಕ ಯೋಜನಾ ಸಮನ್ವಯಾಧಿಕಾರಿ ಜಿ. ವೆಂಕಟಾಚಲ, ಸ್ಥಳ: ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಒಕ್ಕಲಿಗ ಯುವ ಬ್ರಿಗೇಡ್ :** ಡಾ. ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪುಣ್ಯಸ್ಮರಣೆ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಜಯಂತ್ಯೋತ್ಸವ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ : ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ, ಅಧ್ಯಕ್ಷತೆ : ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್, ಮುಖ್ಯ ಅತಿಥಿಗಳು : ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಶಾಸಕ ಡಾ. ಸಿ.ಎನ್. ಅಶ್ವಥ್‌ನಾರಾಯಣ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಕೆ. ಹರೀಶ್‌ಗೌಡ, ಡಾ. ಮಂಥರ್‌ಗೌಡ, ಐಜಿಪಿ ರಾಜಸ್ಥಾನ ರಾಘವೇಂದ್ರ ಸುಹಾಸ್, ಕಾರ್ಮಿಕ ಆಯುಕ್ತ ಡಾ. ಹೆಚ್.ಎನ್. ಗೋಪಾಲಕೃಷ್ಣ, ಜಂಟಿ ಕಾರ್ಯದರ್ಶಿ ಕೆ. ನಾಗರಾಜ್, ಪೊಲೀಸ್ ವರಿಷ್ಠಾಧಿಕಾರಿ ಡಾ. ಎ.ಎನ್. ಪ್ರಕಾಶ್‌ಗೌಡ, ವಿಶೇಷ ಆಹ್ವಾನಿತರು : ಡಾ. ನಾಗಾರ್ಜುನ್ ಬಿ. ಗೌಡ, ಪಿ.ವಿ. ಭೈರಪ್ಪ, ಶ್ರೀಮತಿ ಎನ್. ಭವ್ಯಶ್ರೀ, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಸಂಜೆ 5.30ಕ್ಕೆ.
- **ರಂಗವಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯ, ಬೆಂಗಳೂರು ಮತ್ತು ವಿಜಯ ವಿಠ್ಠಲ ಶಿಕ್ಷಣ ಸಂಸ್ಥೆಗಳು :** ಸಂಜೆ 6ಕ್ಕೆ ರಂಗ ಹಬ್ಬ 'ರಂಗವಲ್ಲಿ ರಂಗ ಸಂಭ್ರಮ–2024', ಸಂಜೆ 5.30ಕ್ಕೆ ಮೈಸೂರಿನ ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ತಂಡದಿಂದ ಸುಗಮ ಸಂಗೀತ, ಸಂಜೆ 7ಕ್ಕೆ ಮಂಗಳೂರು ಕಲಾಭಿ ರಂಗ ತಂಡದಿಂದ ಎ ಫ್ರೆಂಡ್ ಬಿಯಾಂಡ್ ದಿ ಫೆನ್ಸ್ ನಾಟಕ ಪ್ರದರ್ಶನ, ವಿನ್ಯಾಸ ಮತ್ತು ನಿರ್ದೇಶನ : ಶ್ರವಣ್ ಹೆಗ್ಗೋಡು. ಸ್ಥಳ: ಕಿರು ರಂಗಮಂದಿರ.
- **ಶ್ರೀ ರಾಮಕೃಷ್ಣ ಆಶ್ರಮ:** ಸರಗೂರು ರಮೇಶ್ ಅವರಿಂದ ಗಾಡ್ ಲಿವ್ಡ್ ವಿತ್ ದೆಮ್ ಕುರಿತು ಇಂಗ್ಲೀಷ್‌ನಲ್ಲಿ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಶ್ರೀ ಕೃಷ್ಣ ಗಾನಸಭಾ:** ಕೊಳಲು ಮಾಂತ್ರಿಕ ಟಿ.ಆರ್. ಮಹಾಲಿಂಗಂ ಅವರ 99ನೇ ಜನ್ಮ ದಿನೋತ್ಸವ ಮತ್ತು ಕೊಳಲು ವಾದನ, ವಿದ್ವಾನ್ ಸಿ.ಎಸ್. ಕೇಶವಚಂದ್ರ–ಕೊಳಲು, ವಿದ್ವಾನ್ ಅಮೋಘ ನಡದೂರ್–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ
- **ಕಲಾಸುರುಚಿ :** ಸೈನ್ಸ್ ಸಂಜೆ ಕಾರ್ಯಕ್ರಮ, ಡೇಟಾವಿವ್‌ನ ಮುಖ್ಯ ದತ್ತಾಂಶ ಯೋಜನಾಧಿಕಾರಿ ಸಂಕೇತ್ ಪಾಟೀಲ್ ಅವರು 'ಕೃತಕ ಬುದ್ಧಿ ಮತ್ತು ಭಾಷೆ – ಅನುಕೂಲಗಳು ಮತ್ತು ಅಪಾಯಗಳು' ವಿಷಯ ಕುರಿತು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಭಾಷಣ, ಸ್ಥಳ: ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30 ರಿಂದ.
- **ವ್ಯವಸ್ಥಾಪಕರು :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ "ಮಧುರ ಗಾನ" ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ತಗಡೂರು ರಾಮಚಂದ್ರ ರಾವ್ ಸರ್ಕಲ್ (ಚಾಮುಂಡಿಪುರಂ ಸರ್ಕಲ್), ಸಂಜೆ 7.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್.ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ–ಹೆಚ್‌ಐವಿ–ಅಂದು ಇಂದು, ಪ್ರಾಯೋಜಕರು – ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಆರ್. ಸುಧಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ –ಪೀಪಲ್ಸ್ ಪಾರ್ಕ್‌ನಲ್ಲಿರುವ ಸರ್ಕಾರಿ ಪದವಿ ಪೂರ್ವ ಪ್ರೌಢಶಾಲೆ ವಿಭಾಗದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ಮಹಾಕಲ್ಯಾಣ, ರಚನೆ–ಎಸ್. ವಿ. ಕೃಷ್ಣಮೂರ್ತಿ, ನಿರ್ಮಾಣ–ಉಮೇಶ್. ಎಸ್.ಎಸ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ವಿದ್ವಾಂಸರಾದ ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ ಅವರೊಂದಿಗೆ ಡಾ. ಬಿ.ವಿ. ವಸಂತಕುಮಾರ್ ಅವರು ನಡೆಸಿದ್ದ ಸಂವಾದದ ಎರಡನೇ ಭಾಗ, 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸುಸ್ಥಿರ ಹೈನುಗಾರಿಕೆ ಕುರಿತು ಕೆ. ಆರ್. ಪೇಟೆ ತಾಲೂಕು ಬೂಕನಕೆರೆ ಹೋಬಳಿ ಕುರುಬಹಳ್ಳಿಯ ಕೃಷಿಕ ಕೆ. ಪ್ರಶಾಂತ್ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್. ಮಂದಪಕ ರವಿ – ಮೃದಂಗ

ಕೃಷಿ ಉಪಕರಣಗಳ ಮೇಲಿನ ಜಿಎಸ್‌ಟಿ ರದ್ದು ಮಾಡಿ

ಮೈಸೂರಿನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ರೈತರ ಮನವಿ



ಮೈಸೂರು, ನ.8(ಬಿಎಲ್‌ಯು)– ಕೃಷಿ ಉತ್ಪನ್ನಗಳ ಮೇಲಿನ ಜಿಎಸ್‌ಟಿ ರದ್ದು ಸೇರಿದಂತೆ ರೈತರ ಬೇಡಿಕೆ ಈಡೇರಿಸುವಂತೆ ರಾಜ್ಯ ಕಬ್ಬು ಬೆಳೆಗಾರರು ಇಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಲ್ಲಿ ಮನವಿ ಮಾಡಿದರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ನಡೆದ ಸಮಾರಂಭದಲ್ಲಿ ಪಾಲ್ಗೊಂಡು ನಿರ್ಗಮಿಸುವ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ರೈತರು ಸಚಿವರಿಗೆ ಮನವಿ ಸಲ್ಲಿಸಿದರು.

ರೈತರು ಬಳಸುವ ಹನಿ ನೀರಾವರಿ ಕೊಳವೆಗಳು, ಕೀಟನಾಶಕಗಳು, ರಸಗೊಬ್ಬರದ ಮೇಲೆ ಜಿಎಸ್ ಟಿ ವಿಧಿಸಲಾಗಿದೆ. ಇದರಿಂದ ರೈತರ ಖರ್ಚು ವೆಚ್ಚದ ಮೇಲೆ ದೊಡ್ಡ ಹೊರೆಯಾಗಿದೆ. ಈ ಹಿನ್ನೆಲೆ ಕೃಷಿ ಉಪಕರಣಗಳ ಮೇಲಿನ ಜಿಎಸ್‌ಟಿ ರದ್ದು ಮಾಡುವಂತೆ ಕೋರಿದರು.

ಅಷ್ಟೇ ಅಲ್ಲದೆ ರೈತರ ಸಾಲಕ್ಕೆ ಸಿಬಿಲ್ ಸ್ಕೋರ್ ಪರಿಗಣಿಸಬಾರದು, ಕೃಷಿ ಸಾಲ ವಸೂಲಿಗೆ ಬ್ಯಾಂಕ್‌ಗಳು ರೈತರ ಜಮೀನು ಮುಟ್ಟುಗೋಲು ಹಾಕಿಕೊಂಡು ಹರಾಜು ಹಾಕಬಾರದು, ಮಹಿಳಾ ಸ್ವಸಹಾಯ ಸಂಘಗಳಿಗೆ ಖಾಸಗಿ ಫೈನಾನ್ಸ್‌ಗಳು ವಸೂಲಾತಿ ಕಿರುಕುಳ ನೀಡುವುದಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ನಿರ್ಮಲಾ ಸೀತಾರಾಮನ್, ಯಾವ ವಸ್ತುವಿಗೆ ತೆರಿಗೆ ವಿಧಿಸಬೇಕು ಎಂಬುದನ್ನು ಜಿಎಸ್‌ಟಿ ಕೌನ್ಸಿಲ್ ನಿರ್ಧರಿಸುತ್ತದೆ. ನಿಮ್ಮ ಕರ್ನಾಟಕದ ಪ್ರತಿನಿಧಿಗಳು ಅದರಲ್ಲಿ ಭಾಗವಹಿಸುತ್ತಾರೆ. ಈ ವಿಚಾರವನ್ನು ಅವರ ಮೂಲಕ ಅಲ್ಲಿ ಪ್ರಸ್ತಾಪಿಸಲು ಹೇಳಿ ಎಂದು ಸಲಹೆ ನೀಡಿದರು.

ಆದರೂ, ನಿಮ್ಮ ಬೇಡಿಕೆಗಳಿದ್ದರೆ ಜಿಲ್ಲಾಧಿಕಾರಿ ಮೂಲಕ ನನಗೆ ಕಳುಹಿಸಿಕೊಡಿ, ಈ ಬಗ್ಗೆ ಪರಿಶೀಲನೆ ನಡೆಸುತ್ತೇನೆ ಎಂದು ನಿರ್ಮಲಾ ಸೀತರಾಮನ್ ರೈತರಿಗೆ ಭರವಸೆ ನೀಡಿದರು.

ಕಕ್ಷಿದಾರರಿಗೆ ವಾಲ್ಮೀಕಿ ವಿಚಾರ ತಿಳಿಸಿ ಪರಿವರ್ತನೆಗೆ ಪ್ರಯತ್ನಿಸಿ

• ಮೈಸೂರು ವಕೀಲರ ಸಂಘದಲ್ಲಿ ವಾಲ್ಮೀಕಿ ಜಯಂತಿ • ವಕೀಲರಿಗೆ ಹೈಕೋರ್ಟ್ ನ್ಯಾಯಮೂರ್ತಿ ಸಿ.ಜಿ.ಪಂಡಿತ್ ಸಲಹೆ

ಮೈಸೂರು, ನ.8(ಎಸ್‌ಪಿಎನ್)– ನಿಮ್ಮ ಬಳಿ ಸಲಹೆ ಕೇಳಿಕೊಂಡು ಬರುವ ಕಕ್ಷಿದಾರರು ಅಥವಾ ಸಮಾಜ ಘಾತುಕ ವ್ಯಕ್ತಿಗಳಿಗೆ ಮಹರ್ಷಿ ವಾಲ್ಮೀಕಿ ಜೀವನ ಚರಿತ್ರೆಯನ್ನು ತಿಳಿಸಿ, ಅವರ ಅಪರಾಧೀಕರಣದ ಮನಸ್ಸನ್ನು ಪರಿವರ್ತನೆಗೊಳಿಸಲು ಪ್ರಯತ್ನಿಸಬೇಕು ಎಂದು ವಕೀಲರಿಗೆ ಹೈಕೋರ್ಟ್ ನ್ಯಾಯಮೂರ್ತಿ ಸಿ.ಜಿ.ಪಂಡಿತ್ ಸಲಹೆ ನೀಡಿದರು.

ಮೈಸೂರು ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ–2024ರಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿ ಪೂರ್ವಾಶ್ರಮದ ಹೆಸರು ರತ್ನಾಕರ ಕಾಡಿನಲ್ಲಿ ಬೇಟೆಗಾರರ ಜೊತೆ ಸೇರಿ ದರೋಡೆ, ಸುಲಿಗೆ ಮಾಡಿ ಜೀವನ ಸಾಗಿಸುತ್ತಿದ್ದರು. ಒಂದು ದಿನ ಆ ಮಾರ್ಗ ಬಂದ ನಾರದ ಮಹಾ ಮುನಿಗಳ ಸುಲಿಗೆ ಮಾಡಲು ಪ್ರಯತ್ನಿಸಿ, ಅವರ ತಂಬೂರಿ ಬಿಟ್ಟು ಬೇರೇನು ಸಿಗದ ಹಿನ್ನಲೆಯಲ್ಲಿ ಅವರಿಬ್ಬರ ನಡುವೆ (ರತ್ನಾಕರ) ಕುಟುಂಬ ಹಿನ್ನಲೆ ಕುರಿತು ಮಾತುಕತೆ ನಡೆಯುತ್ತದೆ ಆ ಸಂದರ್ಭದಲ್ಲಿ ನಾರದ ಮಹರ್ಷಿಗಳ ಸಲಹೆ ಮೇರೆಗೆ ರತ್ನಾಕರ ರಾಮನಾಮ ಜಪಿಸುತ್ತಾ, ತಮ್ಮ ತಪ್ಪಿನ ಅರಿವಾಗಿ ವಾಲ್ಮೀಕಿ ಮಹರ್ಷಿಗಳಾಗಿ ಬದಲಾಗುವ ಸನ್ನಿವೇಶ ವಿವರಿಸಿದರು.

ಮಹರ್ಷಿ ವಾಲ್ಮೀಕಿ ಪರಿವರ್ತನೆಯ ಸಂಕೇತ. ಅವರು ಈ ಜಗತ್ತಿಗೆ ರಾಮಾಯಣ ಮಾತ್ರ ರಚಿಸಲಿಲ್ಲ. ಒಂದು ತಲೆಮಾರಿನ ಸಂಸ್ಕೃತಿಯನ್ನೇ ರಾಮಾಯಣದ ಮೂಲಕ ಪರಿಚಯಿಸಿ, ಸಮಸ್ತ ಮನುಕುಲಕ್ಕೆ ಆದರ್ಶಪ್ರಾಯ ಆಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಇತ್ತೀಚಿನ ದಿನಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ಕನಕದಾಸ, ವಾಲ್ಮೀಕಿ ಸೇರಿದಂತೆ ಅನೇಕ ಮಹಾಪುರುಷರ ಜಯಂತಿಗಳನ್ನು ಆಚರಿಸುತ್ತಿದ್ದೇವೆ. ಇದರ ಜೊತೆಗೆ ಅವರ ತತ್ವಾದರ್ಶಗಳನ್ನು ಪಾಲಿಸಿದರಷ್ಟೇ ಅಂತಹ ಜಯಂತಿಗಳು ಅರ್ಥಪೂರ್ಣವಾಗಿ ರುತ್ತದೆ. ಸಮಾಜದಲ್ಲಿ ಸುಲಿಗೆಕೋರ, ದರೋಡೆ ಕೋರನೊಬ್ಬ ಪರಿವರ್ತನೆಗೊಂಡು ಮಹರ್ಷಿ ವಾಲ್ಮೀಕಿಯಾಗಿ ಬದಲಾದ ಕಥೆ ನಮ್ಮ ಮುಂದಿರುವಾಗ ಅಪರಾಧ ಚಟುವಟಿಕೆಗಳಲ್ಲಿ ಗುರುತಿಸಿಕೊಳ್ಳುವ ವ್ಯಕ್ತಿಗಳಿಗೆ ವಾಲ್ಮೀಕಿ ಕಥೆಯನ್ನು ತಿಳಿಸಿ ಪರಿವರ್ತಿಸಲು ವಕೀಲರಿಂದ ಸಾಧ್ಯವಿದೆ ಎಂದು ಬಲವಾಗಿ ಪ್ರತಿಪಾದಿಸಿದರು.

ಬೆಂಗಳೂರು ಭೂ ಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದ ನ್ಯಾಯಿಕ ಸದಸ್ಯ ಎನ್.ಎಸ್.ಪಾಟೀಲ್ ಮಾತನಾಡಿ, ಭಾರತೀಯ ಪರಂಪರೆ ಉಳಿವಿಗೆ ವಾಲ್ಮೀಕಿ ರಾಮಾಯಣ ಕೊಡುಗೆ ಅಪಾರ ಎಂದರು.



ಮೈಸೂರು ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಸಿ.ಜಿ.ಪಂಡಿತ್ ಸೇರಿದಂತೆ ಇತರರು ಪುಷ್ಪನಮನ ಸಲ್ಲಿಸಿದರು.

> ರತ್ನಾಕರನೆಂಬ ಬೇಟೆಗಾರ ತತ್ವಜ್ಞಾನಿಯಾಗಿ ಪರಿವರ್ತನೆಗೊಂಡು ರಾಮಾಯಣದಂಥ ಶ್ರೇಷ್ಠ ಮಹಾಕಾವ್ಯ ರಚಿಸಿದ ಕೀರ್ತಿ ಮಹರ್ಷಿ ವಾಲ್ಮೀಕಿಗೆ ಸಲ್ಲುತ್ತದೆ. ಬುದ್ಧ ಬಸವಣ್ಣರಿಗಿಂತ ಸಾವಿರಾರು ವರ್ಷಗಳ ಹಿಂದೆಯೇ ಅಹಿಂಸೆಯೇ ಎಲ್ಲಾ ಧರ್ಮಗಳ ಸಾರ ಎಂಬುದನ್ನು ಲೋಕಕ್ಕೆ ತಿಳಿಸಿಕೊಟ್ಟಿರುವ ವಾಲ್ಮೀಕಿ ಅವರ ಚಿಂತನೆ ಅದ್ಭುತ.
> – **ಶ್ರೀ ಪ್ರಸನ್ನಾನಂದ ಸ್ವಾಮೀಜಿ,** ಮಹರ್ಷಿ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ

ಮೈಸೂರು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶ ರವೀಂದ್ರ ಹೆಗಡೆ ಮಾತನಾಡಿ, ರಾಮಾಯಣ ದಂತಹ ಮಹಾಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿಯ ಚಿಂತನೆ ವಿಶ್ವಮಾನ್ಯವಾಗಿದ್ದು, ರಾಮಾಯಣದ ಮೂಲಕ ರಾಜಧರ್ಮ, ನೀತಿ ಶಾಸ್ತ್ರವನ್ನು ಜಗತ್ತಿಗೆ ನೀಡಿದ ಕೀರ್ತಿ ವಾಲ್ಮೀಕಿ ಮಹರ್ಷಿಗೆ ಸಲ್ಲುತ್ತದೆ ಎಂದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ ಆರ್ ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ. ಚಂದ್ರಶೇಖರ್, ಖಜಾಂಚಿ ಎಚ್ ಬಿ ಭರತ್, ಜಂಟಿ ಕಾರ್ಯದರ್ಶಿ ಕೆ.ಆರ್. ಚರಣ್ ರಾಜ್, ಮಹಿಳಾ ಜಂಟಿ ಕಾರ್ಯದರ್ಶಿ ಬಿ.ವಿ ವಿನೋದ, ಹಿರಿಯ ಸಮಿತಿ ಸದಸ್ಯರಾದ ಜಿ.ಎಸ್.ಶಿವಸ್ವಾಮಿ ಆರ್, ಕನ್ಯಾಕುಮಾರಿ, ಕೆ.ಎಸ್.ಅಂದಾನಿ, ಎಸ್ ಕೃಷ್ಣ ಪ್ರದೀಪ್ ಬಿಡ್ಡನ್, ಕೆ ದೇವರಾಜ, ಎಂ ಕಿಶೋರ್ ಕೀರ್ತಿ, ಜೆ ಲೋಕೇಶ್, ಎಂ.ಬಿ.ದೀಪು ಇದ್ದರು.

ಅನಿಕೇತನ ರಂಗತರಬೇತಿ ಶಿಬಿರಕ್ಕೆ ಚಾಲನೆ



ಅನಿಕೇತನರಂಗತರಬೇತಿ ಶಿಬಿರದಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡುತ್ತಿರುವುದು

ಮೈಸೂರು, ನ.8(ಎಸ್‌ಪಿಎನ್)– ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹವ್ಯಾಸಿ ರಂಗ ತಂಡಗಳು ಆಯೋಜಿಸುವ ನಾಟಕ, ಜಾನಪದ ಕಲಿಕೆ ಹಾಗೂ ರಂಗಭೂಮಿ ಶಿಬಿರಗಳಿಂದ ಕರ್ನಾಟಕ ರಂಗಭೂಮಿ ಇನ್ನೂ ಜೀವಂತವಾಗಿವೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ರಂಗತಾಲೀಮು ಕೊಠಡಿಯಲ್ಲಿ ನಾಲ್ವಡಿ ಸೋಶಿಯಲ್ ಕಲ್ಚರಲ್ ಅಂಡ್‌ಎಜುಕೇಷನಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಲಾಗಿರುವ ಅನಿಕೇತನ ರಂಗತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಕಾಲೇಜು ವಿದ್ಯಾರ್ಥಿಗಳ ಕಲಿಕೆಗೆ ರಂಗ ತರಬೇತಿ ಶಿಬಿರಗಳು ಒಂದು ಸದಾವಕಾಶ. ಇಂತಹ ರಂಗ ತರಬೇತಿ ಶಿಬಿರಗಳ ಪ್ರಯೋಜನ ಪಡೆಯುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಅವರು, ಕಲಿಕೆಗೆ ಕೊನೆಯಿಲ್ಲ. ಉತ್ತಮ ವ್ಯಕ್ತಿತ್ವ ಮೈಗೂಡಿಸಿಕೊಳ್ಳಲು ರಂಗಭೂಮಿ ಸಹಕಾರಿ. ಅಲ್ಲದೆ, ರಂಗ ತರಬೇತಿಗಳಿಂದ ವಿವಿಧ ವಿಷಯಗಳಲ್ಲಿ ಓದುತ್ತಿರುವ ಹೊಸಹೊಸ ಗೆಳೆಯರು ಪರಿಚಯವಾಗುವುದರಿಂದ ಮುಂದಿನ ಜೀವನದಲ್ಲಿ ಈ ಸ್ನೇಹ ಉಪಯೋಗವಾಗಲಿದೆ ಎಂದು ಸಲಹೆ ನೀಡಿದರು.

ಹಿರಿಯ ರಂಗಕರ್ಮಿ ಎಚ್.ಜನಾರ್ಧನ್(ಜನ್ನಿ) ಮಾತನಾಡಿ, ರಂಗಭೂಮಿ ಬದುಕಿನ ವಿವಿಧ ಆಯಾಮಗಳನ್ನು ಪರಿಚಯಿಸುತ್ತದೆ. ಪ್ರತಿಯೊಬ್ಬರು ಇಲ್ಲಿ ಅನುಭವದ ಮೂಲಕ ಬದುಕು ಕಟ್ಟಿಕೊಳ್ಳುವ ಅನುಭವ ರಂಗಭೂಮಿಯಲ್ಲಿ ದೊರೆಯುತ್ತದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ರಂಗಭೂಮಿ ಬದುಕಿನ ಸವಾಲುಗಳನ್ನು ಎದುರಿಸುವ ಕಲೆ ಕಲಿಸಿಕೊಡುತ್ತದೆ. ಅಲ್ಲದೆ ಬದುಕಿನ ಸ್ವಯಂ ವಿಮರ್ಶೆಗೆ ಅವಕಾಶ ದೊರೆಯಲಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮಾತನಾಡಿ, ರಂಗಭೂಮಿ ಶಿಬಿರಗಳಲ್ಲಿ ಯುವಕ–ಯುವತಿಯರು ಶಿಬಿರಾರ್ಥಿ ಎಂಬ ಮನೋಭಾವದಲ್ಲಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಕಲೆ ಸಿದ್ದಿಸುತ್ತದೆ ಎಂದರು. ವೇದಿಕೆಯಲ್ಲಿ ರಾಜೇಶ್ವರಿ ವಸ್ತ್ರಾಲಂಕಾರ ಸಂಸ್ಥಾಪಕ ಬಿ.ಎಂ.ರಾಮಚಂದ್ರ, ನಾಲ್ವಡಿ ಸೋಶಿಯಲ್ ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ ಹಾಜರಿದ್ದರು.

ಸೇವಾ ಕಾರ್ಯಗಳೊಂದಿಗೆ ಉದ್ಯಮಿ ಮಂಜುಗೌಡರ ಹುಟ್ಟುಹಬ್ಬ ಆಚರಣೆ



ಮೈಸೂರು, ನ 8– ವಿವಿದ ಸೇವಾ ಕಾರ್ಯಗಳೊಂದಿಗೆ ಉದ್ಯಮಿ ಹಾಗೂ ಮೈಸೂರು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟ ಪೂರ್ವ ಅಧ್ಯಕ್ಷ ಜಿ ಮಂಜುಗೌಡ ಅವರ 52ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಇಂದು ಆಚರಿಸಿದರು.

ಇಟ್ಟಿಗೆಗೂಡಿನಲ್ಲಿರುವ ಅಶ್ವಿನಿ ಎಂಟರ್‌ಪ್ರೈಸಸ್ ಕಚೇರಿ ಮುಂಬಾಗ ಪೌರ ಕಾರ್ಮಿಕರಿಗೆ ಹಾಗು ಬಡ ಜನರಿಗೆ ಬಟ್ಟೆ ಮತ್ತು ಸಿಹಿ ವಿತರಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಪಾಲಿಕೆ ಮಾಜಿ ಸದಸ್ಯೆ ಛಾಯಾದೇವಿ, ವಾಸಣ್ಣ, ಸಾಗರ್‌ಗೌಡ ಸೇರಿದಂತೆ ಹಲವರು ಉಪಸ್ಥತರಿದ್ದರು.

ನಂತರ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಕಾರ್ಯನಿರ್ವಹಿಸುವ ಭದ್ರತಾ ಸಿಬ್ಬಂದಿಳು, ತೋಟಗಾರಿಕೆ ಸಿಬ್ಬಂದಿಗಳು, ಪೌರಕಾರ್ಮಿಕರಿಗೆ ಆಜಂ ಬೈ ಸ್ನೇಹ ಬಳಗ ವತಿಯಿಂದ ಆರೋಗ್ಯ ತಪಾಸಣೆ ಶಿಬಿರ ನಡೆಸಿ, ಬಟ್ಟೆ ಹಾಗು ಸಿಹಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯ್ಯೂಬ್‌ಖಾನ್, ಸಿಇಓ ರುದ್ರೇಶ್ ಜಿಪಿಎ ಮಲ್ಲಿಕಾರ್ಜುನ್, ಸರ್ದಾರ್, ಸಂಪತ್ ಹಾಗೂ ಎಲ್ಲಾ ಮಳಿಗೆದಾರರು ಮಂಜುಗೌಡ ಅವರ ಅಭಿಮಾನಿಗಳು ಭಾಗವಹಿಸಿದರು.

ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ಪುಟ್ಟೀರಮ್ಮ ವಿಶೇಷ ಮಕ್ಕಳ ಶಾಲೆಯಲ್ಲಿ ಆಟಿಕೆ ವಸ್ತುಗಳು ಮತ್ತು ಪ್ರಾಜೆಕ್ಟರ್‌ಗಳು ಹಾಗು ಹಣ್ಣು ಹಂಪಲು ವಿತರಿಸಲಾಯಿತು. ಬನ್ನಿಮಂಟಪದಲ್ಲಿರುವ ಸಾಯಿ ರಂಗ ವಿಶೇಷ ಮಕ್ಕಳ ಶಾಲೆಯಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಹಾಗೂ ಸಿಹಿ ಮತ್ತು ಹಣ್ಣುಗಳನ್ನು ಹಾಗೂ ಸಿಬ್ಬಂದಿ ಗಳಿಗೆ ಬಟ್ಟೆಗಳನ್ನು ವಿತರಿಸಲಾಯಿತು. ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಮಹಿಳಾ ಬಂದಿಗಳಿಗೆ ಸೀರೆ ಮತ್ತು ಸಿಹಿ ವಿತರಿಸಲಾಯಿತು ಹಾಗೂ ಇದೇ ಸಂದರ್ಭದಲ್ಲಿ ಬಂದಿಯೊಬ್ಬರಿಗೆ ದಂಡದ ಹಣ ಪಾವತಿಸಿ ಬಿಡುಗಡೆಗೆ ಸಹಕರಿಸಲಾಯಿತು.

ವಕ್ಫ್ ಬೋರ್ಡ್ ಕಾಯ್ದೆ ತಿದ್ದುಪಡಿಗೆ ಆಗ್ರಹಿಸಿ ಬಿಕೆಎಸ್ ಅಂಚೆ ಚಳವಳಿ



ರೈತರ ಹಿತದೃಷ್ಟಿಯಿಂದ ವಕ್ಫ್ ಮಂಡಳಿ ಕಾಯ್ದೆಗೆ ತಿದ್ದುಪಡಿ ತರುವಂತೆ ಆಗ್ರಹಿಸಿ, ಭಾರತೀಯ ಕಿಸಾನ್ ಸಂಘದ ಪಿರಿಯಾಪಟ್ಟಣ ಘಟಕದ ವತಿಯಿಂದ ಪ್ರತಿಭಟಿಸಲಾಯಿತು.

ಮೈಸೂರು, ನ.8– ವಕ್ಫ್ ಬೋರ್ಡ್ ಕಾಯ್ದೆ ತಿದ್ದುಪಡಿಗೆ ಆಗ್ರಹಿಸಿ ಭಾರತೀಯ ಕಿಸಾನ್ ಸಂಘ(ಬಿಕೆಎಸ್)ದ ಪಿರಿಯಾಪಟ್ಟಣ ಘಟಕದ ವತಿಯಿಂದ ಅಂಚೆಪತ್ರ ಚಳವಳಿ ನಡೆಸಲಾಯಿತು.

ಇದೇ ವೇಳೆ ಪಟ್ಟಣದ ಅಂಚೆ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಸಂಘದ ಸದಸ್ಯರು, ರಾಜ್ಯದಲ್ಲಿ ವಕ್ಫ್ ಬೋರ್ಡ್ ವಿವಾದ ವ್ಯಾಪಿಸಿದೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಬೆಟ್ಟದಪುರ, ಕೊಡಗು ಜಿಲ್ಲೆ, ವಿಜಯಪುರ, ಧಾರವಾಡ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ನೂರಾರು ವರ್ಷದಿಂದ ಕೃಷಿ ಮಾಡುತ್ತಿರುವ ಭೂಮಿ, ದೇವಸ್ಥಾನ, ಮಠಮಾನ್ಯಗಳ ಆಸ್ತಿಗಳ ಪಹಣಿಯಲ್ಲಿ ಏಕಾಏಕಿ ವಕ್ಫ್ ಬೋರ್ಡ್ ಹೆಸರು ಸೇರ್ಪಡೆಯಾಗಿದೆ. ಪರಿಣಾಮ ರೈತರು ಆತಂಕಕ್ಕೊಳಗಾಗಿದ್ದಾರೆ. ಹಾಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿ, ಶೀಘ್ರ ವಕ್ಫ್ ಬೋರ್ಡ್ ಕಾಯ್ದೆ ತಿದ್ದುಪಡಿಗೆ ಮುಂದಾಗಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ, ಜಿಲ್ಲಾ ಕಾರ್ಯದರ್ಶಿ ರವಿ ಗಂಡತ್ತೂರು, ವಿಜಯ್‌ಕುಮಾರ್, ತಾಲೂಕು ಅಧ್ಯಕ್ಷ ಚಂದ್ರೇಗೌಡ, ಗೌರವಾಧ್ಯಕ್ಷ ಕೃಷ್ಣೇಗೌಡ, ಕಾರ್ಯದರ್ಶಿ ಗಣೇಶ್, ಶಿವಪ್ಪ ಮಾಗಳಿ, ನಾಗರಾಜು, ನಾರಾಯಣ ಬೆಟ್ಟದಪುರ, ಮೈಲಾರಿ, ಜಯರಾಮೇಗೌಡ, ಸ್ವಾಮಿ, ಈಚೂರು ಚೇತನ್‌ಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಉಪಚುನಾವಣೆ ಬಳಿಕ ಸಿಎಂ ಸ್ಥಾನದಿಂದ ಸಿದ್ದರಾಮಯ್ಯ ಇಳಿಯುತ್ತಾರೆ!

ಕಾಂಗ್ರೆಸ್ ಹೈಕಮಾಂಡ್‌ನಿಂದ ಸೂಚನೆ: ಬಿಜೆಪಿ ಶಾಸಕ ಜನಾರ್ಧನ ರೆಡ್ಡಿ ಹೇಳಿಕೆ

ಕೊಪ್ಪಳ/ಬಳ್ಳಾರಿ: ಉಪಚುನಾವಣೆ ಬಳಿಕ ಸಿದ್ದರಾಮಯ್ಯರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಹೈಕಮಾಂಡ್ ಸೂಚನೆ ಕೊಟ್ಟಿದೆ ಎಂದು ಶಾಸಕ ಜನಾರ್ದನರೆಡ್ಡಿ ಹೇಳಿದರು.

ಸಂಡೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ಲೋಕಾಯುಕ್ತ ತನಿಖೆ ಸರಿಯಾಗಿ ನಡೆಯುತ್ತಿಲ್ಲ. ಸಿಎಂ ಎ1 ಆರೋಪಿಯಾಗಿದ್ದು ಈ ಪ್ರಕರಣ ಸಿಬಿಐಗೆ ವಹಿಸಬೇಕು. ಸಿಎಂ ಜೈಲಿಗೆ ಹೋಗುವುದು ಗ್ಯಾರಂಟಿಯಾಗಿದೆ. ಉಪಚುನಾವಣೆ ಆದ ಮೇಲೆ ಸಿಎಂ ಸ್ಥಾನದಿಂದ ಕೆಳಗೆ ಇಳಿಸಲು ಹೈಕಮಾಂಡ್ ಸೂಚನೆ ಕೊಟ್ಟಿದೆ. 25 ಸಾವಿರ ಕೋಟಿ ರೂ. ಗಣಿಗಾರಿಕೆ ಹಣವನ್ನು ಸಂಗ್ರಹಿಸಿದ್ದಾರೆ. ಆದರೆ ಅದನ್ನು ಬಳಕೆ ಮಾಡಲು ಅವರಿಂದ ಆಗುತ್ತಿಲ್ಲ. ಅಭಿವೃದ್ಧಿ ಬದಲು ಆ ದುಡ್ಡು ದೋಚಲು ಸಂಚು ರೂಪಿಸಿದ್ದಾರೆ ಎಂದರು.

ಕರ್ನಾಟಕದ ಮುಖ್ಯಮಂತ್ರಿಯಾಗಿ ಬಳ್ಳಾರಿ, ಸಂಡೂರು ಜಿಲ್ಲೆಗೆ ಅವರ ಕೊಡುಗೆ ಏನು ಇಲ್ಲ. ಕುಡಿಯುವ ನೀರು, ಕೆರೆಗಳನ್ನು ನಿರ್ಮಾಣ ಮಾಡಿ, ತುಂಗಭದ್ರಾ ನೀರು ಹರಿಸಿ ಮನೆ ಮನೆಗೆ ನೀರು ಕೊಟ್ಟಿದ್ದೀವಿ. ಬಳ್ಳಾರಿ ನಗರ ಮೊದಲು ಹೇಗಿತ್ತು, ಈಗ ಹೇಗಾಗಿದೆ, ನಾವೆಲ್ಲ ಅಭಿವೃದ್ಧಿ ಮಾಡಿದ್ದೇವೆ. ಸಂಡೂರಿನಲ್ಲಿ ನಾವು ಗೆಲ್ಲದೇ ಇದ್ದರೂ 250 ಕೋಟಿ ರೂ. ರಸ್ತೆಗೆ ನೀಡಿದ್ದೇವೆ. ರೆಡ್ಡಿ ಬಗ್ಗೆ ಮಾತನಾಡದೇ ಇರಲು ಆಗುವುದಿಲ್ಲ ಅಭಿವೃದ್ಧಿ ಕೆಲಸ ಏನೂ ಮಾಡಿಲ್ಲ ಎನ್ನುವ ಕಾರಣಕ್ಕೆ ನನ್ನ ಬಗ್ಗೆ ಮಾತನಾಡುತ್ತಿದ್ದಾರೆ. ನಾನು ಒಬ್ಬರ ಜೇಬಿಗೆ ಕತ್ತರಿ ಹಾಕಿಲ್ಲ, ಮೋಸ ಮಾಡಿಲ್ಲ ಎಂದು ತಿಳಿಸಿದರು.


ಸಿದ್ದರಾಮಯ್ಯ ಅಹಂಕಾರದ ಮನುಷ್ಯ, ನಾನು 1 ಲಕ್ಷ ಕೋಟಿ ರೂ ಲೂಟಿ ಮಾಡಿದ್ದೇನೆ ಎಂದು ಆರೋಪ ಮಾಡುತ್ತಾರೆ ಸಿಎಂ ಹುಚ್ಚರಾಗಿದ್ದಾರೆ ಅವರ ಯುಪಿಎ ಸರ್ಕಾರ ಇದ್ದಾಗ ಏನು ಕಿತ್ತುಕೊಳ್ಳಲು ಆಗಲಿಲ್ಲ. ಈಗ ಏನು ಮಾತಾಡುತ್ತೀರಾ. ಅವರಿಗೆ ನೆಮ್ಮದಿ ಕದಡಿದೆ. ರಾತ್ರಿ ಸರಿಯಾಗಿ ನಿದ್ದೆಯೂ ಮಾಡ್ತಲ್ಲ ಎಂದರು.

ಮೊದಲ ಟಿ20: ಭಾರತಕ್ಕೆ ಭರ್ಜರಿ ಜಯ

ಡರ್ಬನ್, ನ8– ಸಂಜು ಸ್ಯಾಮ್ಸನ್ ಅವರ ಶತಕದ ನೆರವಿನಿಂದ ಭಾರತ, ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ 61 ರನ್‌ಗಳ ಭರ್ಜರಿ ಜಯ ಗಳಿಸಿದೆ. ಆ ಮೂಲಕ 4 ಪಂದ್ಯಗಳ ಸರಣಿಯಲ್ಲಿ 1–0 ಅಂತರದ ಮುನ್ನಡೆ ಸಾಧಿಸಿದೆ. ಇಲ್ಲಿನ ಕಿಂಗ್ಸ್‌ಮೇಡ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 202 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಭಾರತದ ಪರ ಸಂಜು ಸ್ಯಾಮ್ಸನ್ 50 ಎಸೆತಗಳಲ್ಲಿ 10 ಸಿಕ್ಸರ್, 7 ಬೌಂಡರಿ ಒಳಗೊಂಡ 107 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಅಭಿಷೇಕ್ ಶರ್ಮಾ 7, ಸೂರ್ಯಕುಮಾರ್ ಯಾದವ್ 21, ತಿಲಕ್ ವರ್ಮಾ 33, ರಿಂಕು ಸಿಂಗ್ 11 ರನ್ ಗಳಿಸಿದರು. ಆಫ್ರಿಕಾ ಪರ ಜೆರಾಲ್ಡ್ ಕೋಟ್ಜಿ 3, ಪ್ಯಾಟ್ರಿಕ್ ಕ್ರುಗರ್, ಪೀಟರ್, ಕೇಶವ್ ಮಹಾರಾಜ್ ಹಾಗೂ ಮಾರ್ಕೋ ಯಾನ್ಸನ್ ತಲಾ ಒಂದೊಂದು ವಿಕೆಟ್ ಪಡೆದರು.

203ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 17.5 ಓವರ್‌ಗಳಲ್ಲಿ 141ರನ್‌ಗಳಿಗೆ ಆಲೌಟಾಯಿತು. ತಂಡದ ಪರ ರಿಯಾನ್ ರಿಕ್ಲಿಂಗ್‌ಟನ್ 21, ಟ್ರಿಸ್ಟನ್ ಸ್ಟಬ್ಸ್ 11, ಹೆನ್ರಿಚ್ ಕ್ಲಾಸೆನ್ 25, ಡೇವಿಡ್ ಮಿಲ್ಲರ್ 18, ಜೆರಾಲ್ಡ್ ಕೋಟ್ಜಿ 23, ಮಾರ್ಕೋ ಯಾನ್ಸನ್ 12 ರನ್ ಗಳಿಸಿದರು. ಭಾರತದ ಪರ ವರುಣ್ ಚಕ್ರವರ್ತಿ, ರವಿ ಬಿಷ್ಣೋಯಿ ತಲಾ 3, ಆವೇಶ್ ಖಾನ್ 2, ಅರ್ಷದೀಪ್ ಸಿಂಗ್ 1 ವಿಕೆಟ್ ಪಡೆದರು.

ಕರಕುಶಲ ನಗರದಲ್ಲಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ



ಮೈಸೂರಿನ ಕರಕುಶಲನಗರದಲ್ಲಿ ಶುಕ್ರವಾರ ಶಾಸಕ ಕೆ.ಹರೀಶ್‌ಗೌಡ ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ನ.8(ಎಂಟಿವೈ)– ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದ ಮೈಸೂರು ನಗರ ಪಾಲಿಕೆ ವಾರ್ಡ್ 7ರ ವ್ಯಾಪ್ತಿಯ ಕರಕುಶಲನಗರದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ. ಹರೀಶ್ ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರಿನ ಮೇಟಗಳ್ಳಿ ಸಮೀಪದ ಕರಕುಶಲನಗರದಲ್ಲಿ ಕುಡಿಯುವ ನೀರು, ಚರಂಡಿ, ರಸ್ತೆ ಸೇರಿದಂತೆ ಮೂಲಭೂತ ಸೌಲಭ್ಯದ ಕೊರತೆಯನ್ನು ಸ್ಥಳೀಯರು ಎದುರಿಸುತ್ತಿದ್ದರು. ಕಳೆದ ವಾರವಷ್ಟೇ ಪಾದಯಾತ್ರೆ ವೇಳೆ ಸ್ಥಳೀಯರು ಮೂಲಭೂತ ಸೌಲಭ್ಯ ಒದಗಿಸುವಂತೆ ಶಾಸಕ ಕೆ.ಹರೀಶ್‌ಗೌಡ ಅವರಿಗೆ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ಪಾಲಿಕೆ ಅಧಿಕಾರಿಗಳೊಂದಿಗೆ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಈ ವೇಳೆ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಕರಕುಶಲನಗರ ಮಹಾನಗರ ಪಾಲಿಕೆಯ 7ನೇ ವಾರ್ಡ್‌ಗೆ ಸೇರುತ್ತದೆ. ಇಲ್ಲಿನ ನಿವಾಸಿಗಳು ಮೂಲ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದ್ದರು. ರಸ್ತೆಗಳು ಗುಂಡಿ ಬಿದ್ದು ಹಾಳಾಗಿದ್ದು, ವಾಹನ ಸಂಚರಿಸಲು ಕಷ್ಟವಾಗುತ್ತಿದೆ. ಚರಂಡಿ ಹಾಳಾಗಿದ್ದು, ಅನೈರ್ಮಲ್ಯ ತಾಂಡವವಾಡುತ್ತಿದೆ ಎಂದು ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳೀಯರ ಬೇಡಿಕೆಗೆ ಅನುಗುಣವಾಗಿ ರಸ್ತೆ, ಚರಂಡಿ ದುರಸ್ತಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗದೆ ಎಂದರು.

43.31 ಲಕ್ಷ ರೂ. ವೆಚ್ಚದಲ್ಲಿ ಕರಕುಶಲನಗರದ ಗಣಪತಿ ದೇವಾಲಯದ ಹಿಂಭಾಗದ ರಸ್ತೆ, ಚರಂಡಿ, ಮಥುರಾ ನಗರದ ಜೆಎಸ್‌ಎಸ್ ಶಾಲೆ ಹಿಂಭಾಗದ ರಸ್ತೆಗಳು ಮತ್ತು ಚರಂಡಿ ನಿರ್ಮಾಣ ಕಾಮಗಾರಿ, ಎಫ್.ಸಿ.ಐ. ಗೋಡೋನ್ ಹಾಗೂ ಐಓಸಿಎಲ್ ಕಾಂಪೌಂಡ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಲ್ಲದೆ, 26.68 ಲಕ್ಷ ರೂ. ವೆಚ್ಚದಲ್ಲಿ ಮಥುರಾ ನಗರ ಬಡಾವಣೆಯ 2ಎ ಕ್ರಾಸ್ ರಸ್ತೆಯ ಅಭಿವೃದ್ಧಿ ಕಾಮಗಾರಿ, ಕರಕುಶಲ ನಗರದ 3ನೇ ಅಡ್ಡ ರಸ್ತೆ ಮತ್ತು ಅಕ್ಕಪಕ್ಕದ ರಸ್ತೆ ಚರಂಡಿ ಅಭಿವೃದ್ಧಿ ಕಾಮಗಾರಿ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಾಲಿಕೆಯ ಅಭಿವೃದ್ಧಿ ಅಧಿಕಾರಿ ಮನುಗೌಡ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮುಖಂಡರಾದ ವಿನಯ್, ಉಮೇಶ, ಗಣೇಶ್, ಶೇಖರ್, ಆಶಾ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನೀನು ಮದ್ವೆ ಆದ್ಮೇಲೆ ಸಪರೇಟ್ ಮನೆ ಮಾಡಿ ಅಂತ ಹೇಳಲ್ಲ ತಾನೆ?

ಪ್ರೇಯಸಿ : ಖಂಡಿತ ಇಲ್ಲಪ್ಪ, ನಾನು ಅಂಥವಳಲ್ಲ, ಆದರೆ ನಿಮ್ಮಮ್ಮನಿಗೆ ಒಂದು ಹೊಸ ಮನೆ ಮಾಡಿ ಅಂತ ಹೇಳ್ತಿನಷ್ಟೆ!

ಮೈಸೂರು ಮಿತ್ರ

ಶನಿವಾರ, 9 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕನ್ನಡದ ಹೊಲ ಮಣ್ಣು ಎನಗೆ ನವನಿಧಿ ಹೊನ್ನು, ಕನ್ನಡದ ತಿಳಿ ಜಲವು ಸುಧೆಯು ಪಲ್ಲವವು, ಕನ್ನಡದ ಹೂಗಿಡವು ಎನ್ನೊಡಲಿಗದೆ ತೊಡವು, ಕನ್ನಡದ ಪಶುಪಕ್ಷಿ ಚೆಲುವಿಗದೆ ಸಾಕ್ಷಿ. –ಬೆನಗಲ್ ರಾಮರಾವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನ ಮಗಳು ಲಾಭ ಬಂದ ಹೊರತು ಮಡಿಕೆ ಒಡೆಯುವುದಿಲ್ಲ.

ನಿಮ್ಮ ಪತ್ರಗಳು

ಪದವಿ ಪೂರ್ವ ಕಾಲೇಜು ಹಂತದಲ್ಲಿ ಪಿಯು ಉಪನ್ಯಾಸಕರ ನೇಮಕಾತಿ ಮಾಡಿ

ಮಾನ್ಯರೆ,

ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಅವರ ಬಳಿ ಬಹಿರಂಗ ಮನವಿ. ಈಗಾಗಲೇ ನೀವೇ ತಿಳಿಸಿದಂತೆ ಶಾಲಾ ಶಿಕ್ಷಣ ಇಲಾಖೆಯ ಪದವಿ ಪೂರ್ವ ಹಂತದ ಕಾಲೇಜುಗಳಲ್ಲಿ ಸರಿ ಸುಮಾರು ನಾಲ್ಕು ಸಾವಿರ ಹುದ್ದೆಗಳು ಖಾಲಿ ಇವೆ. ಹಂತ ಹಂತವಾಗಿ ಮುಖ್ಯಮಂತ್ರಿಗಳ ಹಾಗೂ ಅರ್ಥಿಕ ಇಲಾಖೆಯ ಅನುಮತಿ ಪಡೆದು ನೇಮಕಾತಿ ಮಾಡಿಕೊಳ್ಳಲು ಮುಂದಾಗಬೇಕಿದೆ.

ಜೊತೆಗೆ ಈ ಮನವಿಯ ಮುಖ್ಯ ಉದ್ದೇಶ... ಈಗಾಗಲೇ ವಯೋಮಿತಿ ಮೀರುತ್ತಿರುವ ಉಪನ್ಯಾಸಕರು ತಮ್ಮ ಜೀವನಕ್ಕೆ ಕೆಲ ಖಾಸಗಿ ಮತ್ತು ಸರ್ಕಾರಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಡಿಮೆ ಸಂಬಳ ಪಡೆದು ಕರ್ತವ್ಯ ನಿರ್ವಹಿಸುತ್ತಿದ್ದು, ಅವರ ಜೀವನಮಟ್ಟ ಸುಧಾರಣೆಗೆ ಆದಷ್ಟು ಬೇಗನೆ ಕ್ರಮ ಕೈಗೊಳ್ಳಬೇಕಿದೆ. ಖಾಸಗಿ ಕಾಲೇಜುಗಳ ಕರ್ತವ್ಯ ಭಾರ, ಸರ್ಕಾರಿ ಕಾಲೇಜುಗಳಲ್ಲಿನ ಮೂದಲಿಕೆಯ ಭಾರ ಎರಡೂ ಸಹ ಬೇಸರ ತರಿಸಿದೆ. ಖಾಸಗಿ ಕ್ಷೇತ್ರದಲ್ಲಿನ ಕಡಿಮೆ ಸಂಬಳ ಅಧಿಕ ಕೆಲಸದ ಒತ್ತಡದಿಂದಾಗಿ ಜೀವನ ಶೈಲಿ ಕಠಿಣ ಎನಿಸುತ್ತದೆ. ಜೊತೆಗೆ ಕೆಲ ಸರ್ಕಾರಿ ಉಪನ್ಯಾಸಕರು ಕಡಿಮೆ ಸಂಬಳದ ಈ ಅತಿಥಿ ಉಪನ್ಯಾಸಕರ ಸೇವೆಗೆ ಬದಲು ಬೇರೆ ಕೆಲಸ ಮಾಡಿದರೆ (ತರಕಾರಿ ಮಾರಿದರೆ) ದಿನಕ್ಕೆ ಎಲ್ಲಾ ವೆಚ್ಚ ಕಳೆದು ರೂ.700 ಗಳಿಸಬಹುದು. ಅಂದರೆ ತಿಂಗಳಿಗೆ ರೂ. 21000 ಸಾವಿರ ಸಿಗುತ್ತದೆ ಎಂದು ನೇರವಾಗಿ ಮೂದಲಿಸುತ್ತಿದ್ದರೆ ಕೆಲಸ ಮಾಡುವ ಮನಸು ಕೆಲ ಉತ್ಸಾಹಿ ಯುವ ಉಪನ್ಯಾಸಕರಿಗೆ ಹೇಗಾದರೂ ಬರಬೇಕು ನೀವೇ ಹೇಳಿ.

ಹಾಗಾಗಿ ದುಸ್ತರದ ಜೀವನ ನಿವಾರಣೆಗೆ ವಯೋಮಿತಿ ಮೀರುತ್ತಿರುವ ಈ ಸಂದರ್ಭದಲ್ಲಿ ಆದಷ್ಟು ಬೇಗ ಪಿಯು ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಎಲ್ಲಾ ನೊಂದ ರಾಜ್ಯದ ಉಪನ್ಯಾಸಕರ ಪರವಾಗಿ ಈ ಮೂಲಕ ಮನವಿ. ಆದಷ್ಟು ಬೇಗನೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿಲಾಗುತ್ತಿದೆ.

–ನೊಂದ ಉಪನ್ಯಾಸಕರು, ಮೈಸೂರು.

ಕರ್ನಾಟಕದ ವೈದ್ಯಕೀಯ ಶಿಕ್ಷಣದಲ್ಲೂ ಕನ್ನಡ ಸಿಲಬಸ್ ಅಳವಡಿಸಿ

ಮಾನ್ಯರೆ,

ಸುಪ್ರೀಂ ಕೋರ್ಟ್ ಕಲಾಪದಲ್ಲಿ ಹಿಂದಿ ಅನುಷ್ಠಾನಗೊಳಿಸಿ ಎಂಬ ಮನವಿಯನ್ನು ತಿರಸ್ಕರಿಸಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ.

ಮಧ್ಯ ಪ್ರದೇಶದಲ್ಲಿ ವೈದ್ಯಕೀಯ ಕಾಲೇಜೊಂದು ಹಿಂದಿಯಲ್ಲಿ ವೈದ್ಯಕೀಯ ಶಿಕ್ಷಣ ಬೋಧಿಸುತ್ತಿದೆ ಎಂದು ವರದಿಯಾಗಿದೆ. ಮುಂದಿನ ವರ್ಷಗಳಲ್ಲಿ ಉತ್ತರ ಭಾರತದ ಎಲ್ಲಾ ಹಿಂದಿ ಮಾತನಾಡುವ ರಾಜ್ಯಗಳಲ್ಲೂ ಇದು ಅನುಷ್ಠಾನಗೊಂಡರೂ ಅಚ್ಚರಿಯಿಲ್ಲ. ಈಗಿನ ಕೇಂದ್ರ ಸರ್ಕಾರದ ಅಜೆಂಡಾವೇ ಹಿಂದಿಯನ್ನು ರಾಷ್ಟ್ರ ಭಾಷೆ ಮಾಡುವುದು!

ಮುಂದಿನ ಕ್ಷೇತ್ರ ವಿಂಗಡಣೆಯ ನಂತರ ಉತ್ತರ ಭಾರತೀಯ (ಹಿಂದಿ) ಸಂಸದರ ಸಂಖ್ಯೆ ಹೆಚ್ಚಾಗಿ, ದಕ್ಷಿಣ ಭಾರತ ಕೇವಲ ಅವರಿಗೆ ಕಪ್ಪ ಕೊಡುವ ರಾಜ್ಯಗಳಾಗಷ್ಟೇ ಉಳಿದು ಕಡೆಗಣನೆಗೆ ಒಳಗಾಗಬಹುದು. ಅದಕ್ಕೆ ಕಾರಣ ದಕ್ಷಿಣ ಭಾರತೀಯರು ಕಟ್ಟುನಿಟ್ಟಾಗಿ ಪಾಲಿಸಿದ ಕುಟುಂಬ ಕಲ್ಯಾಣ ಕಾರ್ಯಕ್ರಮ!

ಕಳೆದ 10 ವರ್ಷಗಳಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಂಸತ್ತಿನ ಕಾರ್ಯ ಕಲಾಪಗಳು ಕೂಡ ಬಹುತೇಕ ಹಿಂದಿಯಲ್ಲೇ ನಡೆಯುತ್ತಿವೆ. ಎಲ್ಲೋ ಕೆಲ ಸಚಿವರನ್ನು ಬಿಟ್ಟರೆ ಎಲ್ಲಾ ಸಚಿವರೂ, ಸದಸ್ಯರ ಪ್ರಶ್ನೆಗಳಿಗೆ ಹಿಂದಿಯಲ್ಲೇ ಉತ್ತರಿಸುತ್ತಾರೆ. ಹಾಗೂ ಹಿಂದಿ ರಾಜ್ಯಗಳ ಎಲ್ಲಾ ಸದಸ್ಯರು ಹಿಂದಿಯಲ್ಲೇ ಅಹವಾಲು ಹಾಗೂ ಪ್ರಶ್ನೆಗಳನ್ನು ಕೇಳುತ್ತಾರೆ. ಇದರಿಂದ ದಕ್ಷಿಣ ಭಾರತ ಹಾಗೂ ಹಿಂದಿಯೇತರ ಪೂರ್ವ, ಪಶ್ಚಿಮದ ರಾಜ್ಯಗಳ ಸದಸ್ಯರು ಕಾರ್ಯ ಕಲಾಪಗಳನ್ನು ತಮಗೆ ಭಾಷೆ ಅರ್ಥವಾಗದಿದ್ದರೂ ಅನಿವಾರ್ಯವಾಗಿ ಕೇಳಿಸಿಕೊಳ್ಳುತ್ತಾ ಕೂರಬೇಕಾಗಿದೆ. ಇದು ಒಂದು ಕಡೆಯದರೆ ದೂರದರ್ಶನದಲ್ಲಿ ನೇರ ಪ್ರಸಾರವಾಗುವ ಸಂಸತ್ತಿನ ಕಲಾಪಗಳಲ್ಲಿ ಸಚಿವರು ಹಾಗೂ ಸದಸ್ಯರು ಹಿಂದಿಯಲ್ಲಿ ಸಂಭಾಷಣೆ ನಡೆಸುವುದರಿಂದ ದಕ್ಷಿಣ ಭಾರತದ ಹಾಗೂ ಹಿಂದಿಯೇತರ ಜನರು ಹಿಂದಿ ಅರ್ಥವಾಗದೆ, ಕಲಾಪ ವೀಕ್ಷಿಸಲು ಪರಿತಪಿಸುವಂತಾಗುತ್ತದೆ. ಆದ್ದರಿಂದ ಪಾರ್ಲಿಮೆಂಟ್ ಕಲಾಪಗಳನ್ನು ಆಂಗ್ಲ ಭಾಷೆಯಲ್ಲೇ ನಡೆಸುವಂತೆ ದಕ್ಷಿಣ ಭಾರತದ ಸಂಸತ್ ಸದಸ್ಯರು ಒತ್ತಾಯ ಮಾಡಬೇಕು. ಈ ದಿಸೆಯಲ್ಲಿ ದಕ್ಷಿಣ ಭಾರತದ ರಾಜ್ಯ ಸರ್ಕಾರಗಳು ಒತ್ತಡ ಹಾಕಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು. ಕರ್ನಾಟಕದ ಎಲ್ಲಾ ಮೆಡಿಕಲ್ ಕಾಲೇಜುಗಳಲ್ಲಿ ಕನ್ನಡ ಸಿಲಬಸ್ ಅಳವಡಿಸಿದರೆ ಉತ್ತರ ಭಾರತದವರ ವಲಸೆಯನ್ನು ಪರಿಣಾಮಕಾರಿಯಾಗಿ ತಡೆಯಬಹುದು. ಇಲ್ಲಿ ಪ್ರಶ್ನೆ ಎಂದರೆ ಹಿಂದಿ ಅಥವಾ ಕನ್ನಡದಲ್ಲಿ ಎಂಬಿಬಿಎಸ್ ಮಾಡಿದವರಿಗೆ ವಿದೇಶಗಳಲ್ಲಿ ಮನ್ನಣೆ ಸಿಗುವುದೇ? ಎನ್ನುವುದು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ರಾಮಸ್ವಾಮಿ ಸರ್ಕಲ್‌ನಲ್ಲಿ ಬಸ್ ನಿಲುಗಡೆ ಮಾಡಿ

ಮಾನ್ಯರೇ

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿರುವ ಬಸ್ ಸ್ಟಾಪ್‌ನಲ್ಲಿ ಪ್ರತಿನಿತ್ಯ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಜನರು ನಗರ ಸಾರಿಗೆ ಬಸ್‌ಗಳ ಮೂಲಕ ಸಂಚರಿಸುತ್ತಾರೆ. ಆದರೆ ಈ ಮಾರ್ಗದಲ್ಲಿ ಸಂಚರಿಸುವ ಬಹುತೇಕ ಬಸ್‌ಗಳ ಚಾಲಕರು ಬಸ್ ನಿಲುಗಡೆ ಮಾಡದೇ ಹಾಗೆಯೇ ಹೋಗುತ್ತಾರೆ. ರಾಮಸ್ವಾಮಿ ಸರ್ಕಲ್ ಮೂಲಕ ಸಂಚರಿಸುವ ಬಹುತೇಕ ಬಸ್‌ಗಳು ನಿಲುಗಡೆಯಾಗದೇ ಇರುವುದರಿಂದ ಸಿಟಿ ಬಸ್ ನಿಲ್ದಾಣ, ಗ್ರಾಮಾಂತರ ಬಸ್ ನಿಲ್ದಾಣಕ್ಕೆ ತರಳಲು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಮಹಾರಾಜ ಕಾಲೇಜು, ಯುವರಾಜ ಕಾಲೇಜು, ಸದ್ವಿದ್ಯಾ ಕಾಲೇಜು, ಮರಿಮಲ್ಲಪ್ಪ ಕಾಲೇಜು, ಮಹಾರಾಣಿ ಕಾಲೇಜು, ಹಾರ್ಡ್ವಿಕ್ ಕಾಲೇಜು ಸೇರಿದಂತೆ ವಿವಿ ಕಾಲೇಜುಗಳಿಗೆ ಆಗಮಿಸುವ ವಿದ್ಯಾರ್ಥಿಗಳು ಬಸ್ ಇಲ್ಲದೇ ಪರಿತಪಿಸುವಂತಾಗಿದೆ. ಮಧ್ಯಾಹ್ನ 3 ರಿಂದ ಸಂಜೆ 5ರವರೆಗೂ ಈ ಮಾರ್ಗದಲ್ಲಿ ಸಂಚರಿಸುವ ಬಹುತೇಕ ಬಸ್‌ಗಳನ್ನು ನಿಲ್ಲಿಸುವುದೇ ಇಲ್ಲ. ಈ ಬಗ್ಗೆ ಮೈಸೂರು ನಗರ ಸಾರಿಗೆ ವಿಭಾಗೀಯ ನಿಯಂತ್ರಕರಿಗೆ ದೂರು ನೀಡಿದರೆ ಸಿಸಿ ಕ್ಯಾಮರಾ ಅಳವಡಿಸಲಾಗುವುದು, ಸಿಬ್ಬಂದಿಯನ್ನು ನಿಯೋಜಿಸಲಾಗುವುದು ಎಂದು ಹೇಳಿದ್ದಾರೆ ಹೊರತು ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಸಂಬಂಧಪಟ್ಟವರು ಈಗಲಾದರೂ ರಾಮಸ್ವಾಮಿ ಸರ್ಕಲ್ ಬಸ್‌ಸ್ಟಾಪ್‌ನಲ್ಲಿ ಪ್ರತಿಯೊಂದೂ ನಗರ ಸಾರಿಗೆ ಬಸ್ ನಿಲುಗಡೆ ಮಾಡುವ ಮೂಲಕ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕಾಗಿದೆ.


–ಮಹತಿ, ಮೈಸೂರು

ಬಹುಮುಖಿ



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಶರವೇಗದ ಶಂಕರ್‌ನಾಗ್



ನವೆಂಬರ್ 9, ಖ್ಯಾತ ಚಲನಚಿತ್ರ ನಟ ಶಂಕರ್‌ನಾಗ್ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

> "ನಟಿಸಿದ ಮೊದಲ ಚಿತ್ರಕ್ಕೇ ರಾಷ್ಟ್ರ ಪ್ರಶಸ್ತಿ ಪಡೆದು, ಎರಡನೇ ಚಿತ್ರಕ್ಕೇ ಸೂಪರ್ ಸ್ಟಾರ್ ಪಟ್ಟ ಪಡೆದುಕೊಂಡಿದ್ದ ಶಂಕರ್‌ನಾಗ್ ಆ ಪಟ್ಟವನ್ನು ಯಾವತ್ತೂ ಕಳೆದುಕೊಳ್ಳದೆ ದಿನದಿಂದ ದಿನಕ್ಕೆ ಊರ್ಧ್ವಮುಖಿಯಾಗಿ ಬೆಳ್ಳಿತೆರೆಯಲ್ಲಿ ಬೆಳಗತೊಡಗಿದ್ದರು. ಶಂಕರ್‌ನಾಗ್ ಸಾಧನೆ ವಿಧಿರಾಯನಿಗೆ ಸಾಕೆನಿಸಿತೆಂದು ಕಾಣುತ್ತದೆ. ಡಾ.ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' ಯಶಸ್ವಿ ನಾಟಕವನ್ನು ಚಲನಚಿತ್ರವಾಗಿಸುವ ಮಹದಾಸೆಯಲಿ ಚಿತ್ರೀಕರಣ ಆರಂಭಿಸಲು ಬೆಂಗಳೂರಿನಿಂದ ಹುಬ್ಬಳ್ಳಿಗೆ ಶಂಕರ್‌ನಾಗ್ ಕಾರಿನಲ್ಲಿ ಹೊರಟಿದ್ದರು. ಹೊರಟೇ ಬಿಟ್ಟರು. ಅದು 1990 ಸೆಪ್ಟಂಬರ್ 30. ಬೆಳಗಿನ ಸಮಯ ಕಾರು ಅಪಘಾತದಲ್ಲಿ ಶಂಕರ್‌ನಾಗ್ ಮತ್ತೆ ಬಾರದ ಲೋಕ ಸೇರಿಕೊಂಡರು.

ಅಪ್ರತಿಮ ಚಲನಚಿತ್ರನಟ, ಅದ್ಭುತ ನಿರ್ದೇಶಕ, ಅಸಾಧಾರಣ ರಂಗಕರ್ಮಿ, ಅನನ್ಯ ಚಿಂತಕ, ಅತಿವೇಗಕ್ಕೆ ಅನ್ವರ್ಥದಂತಿದ್ದ ಶಂಕರ್‌ನಾಗ್ ತೀರಾ ಸಾಮಾನ್ಯನಂತೆ ಬದುಕಿದವರು.ಅಷ್ಟೇ ಅಲ್ಲ, ಜನಪರ ಕಾಳಜಿಯಿಂದ ಜನರ ಆಶಯಗಳನ್ನು ಪೂರೈಸಲು ಹಲವು ಹತ್ತು ಬಗೆಯ ಪ್ರಾಮಾಣಿಕ ಪ್ರಯತ್ನ ಮಾಡುವ ಸಾಮಾಜಿಕ ಪ್ರಜ್ಞೆ ಅವರಿಗಿತ್ತು.

ಬೆಂಗಳೂರಿನಲ್ಲಿ ಮೆಟ್ರೋರೈಲು ಓಡಬೇಕೆಂಬ ಮಹಾ ಕನಸನ್ನು ಅವರು ಎಂಭತ್ತರ ದಶಕದಲ್ಲೇ ಕಂಡಿದ್ದರು. ಇದಕ್ಕೆ ಸಂಬಂಧಿಸಿದಂತೆ ಅಚ್ಚುಕಟ್ಟಾಗಿ ಯೋಜನೆಯೊಂದನ್ನು ರೂಪಿಸಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣಹೆಗಡೆ ಅವರಿಗೂ ನೀಡಿದ್ದರು. ಇದಕ್ಕಾಗಿ ಅವರು ಹೆಗಡೆ ಸಂಪುಟದಲ್ಲಿ ಆಗ ಸಚಿವರಾಗಿದ್ದ ಎಸ್.ಆರ್.ಬೊಮ್ಮಾಯಿ ಅವರೊಡನೆ ತನ್ನ ಸ್ವಂತ ಖರ್ಚಿನಲ್ಲಿ ಲಂಡನ್ನಿಗೆ ಹೋಗಿ ಮೆಟ್ರೋ ರೈಲ್ವೆ ತಜ್ಞರೊಡನೆ ಮಾತುಕತೆ ನಡೆಸಿ ಬಂದಿದ್ದೂ ಉಂಟು. ಆಗ ಪತಿ–ಪತ್ನಿಯರಾಗಿದ್ದರೂ ಒಳ್ಳೆ ಹೋಗೋ ಬಾರೋ ಸ್ನೇಹಿತರಂತಿದ್ದ ಅರುಂಧತಿನಾಗ್ ಅವರು, 'ಯಾಕೋ ಇದಕ್ಕೆಲ್ಲ ನಿನ್ನ ದುಡಿಮೆಯ ಸ್ವಂತ ಹಣವನ್ನು ಖರ್ಚು ಮಾಡಿದೆ' ಅಂತ ಕೇಳಿದಾಗ 'ಕರ್ನಾಟಕ ನನಗೆ ಇಷ್ಟೆಲ್ಲವನ್ನೂ ಕೊಟ್ಟಿದೆ. ಅದಕ್ಕೆ ಪ್ರತಿಫಲವಾಗಿ ನಾನು ಒಂದಿಷ್ಟನ್ನಾದರೂ ಮಾಡಬೇಡವೇ?' ಎಂದಿದ್ದರಂತೆ. ಅಂಥ ನಾಡಾಭಿಮಾನಿ, ನಿಸ್ವಾರ್ಥಮಯಿ, ತಾನು ಹುಟ್ಟಿದ ನೆಲಕ್ಕೆ, ತನ್ನನ್ನು ಬೆಳೆಸಿದ ಜನಕ್ಕೆ ಏನಾದರೂ ಮಾಡಬೇಕೆಂಬ ತುಡಿತದ, ಮಿಡಿತದ, ತ್ಯಾಗಮಯಿ ಅವರು. ಅದಕ್ಕೆ ತಕ್ಕವೇಗ ಅವರ ಕ್ರಿಯಾಶೀಲ ಮನಸ್ಸಿಗಿತ್ತು.

ಶಂಕರ್‌ನಾಗ್‌ರ ವೇಗದ ಬಗ್ಗೆ ಅರುಂಧತಿನಾಗ್‌ರ ಮಾತುಗಳಲ್ಲೇ ಹೇಳುವುದಾದರೆ– ಅವರ ಸ್ಪೀಡ್ ಅದ್ಭುತ. ಒಂದು ಕಡೆ ಸಿನಿಮಾ, ಮತ್ತೊಂದು ಕಡೆ ರಂಗಭೂಮಿ, ಇನ್ನೊಂದು ಕಡೆ ರಾಜಕೀಯ, ಸಾಮಾಜಿಕ ಚಿಂತನೆ, ಅಭಿವೃದ್ಧಿಯ ಕನಸು, ಬೆಂಗಳೂರಿಗೊಂದು ಅಂಡರ್‌ಗ್ರೌಂಡ್ ಟ್ರೇನ್ ಮಾಡಬೇಕು, ವಿಂಡ್ ಪವರ್ ಮಾಡಬೇಕು, ಫ್ಲೈ ಆಶ್ ಬ್ರಿಕ್ ಮಾಡಬೇಕು, ಕನ್ನಡ ಫಿಲ್ಮ್ ಇಂಡಸ್ಟ್ರಿ ತನ್ನ ಕಾಲ ಮೇಲೆ ನಿಲ್ಲಬೇಕು, ಅದಕ್ಕೊಂದು ಸಂಕೇತದಂತಹ ಸ್ಟುಡಿಯೋ ಕಟ್ಟಬೇಕು, ಇಡೀ ಜಗತ್ತೇ ಬೆರಗಾಗುವಂತೆ ಕನ್ನಡ ಚಿತ್ರಗಳು ಬರಬೇಕು, ಕರ್ನಾಟಕದ ಪ್ರತೀ ಹಳ್ಳಿಗಳಿಗೆ ಹೆಲಿಕಾಪ್ಟರ್ ಮೂಲಕ ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು. ಇವನ್ನೆಲ್ಲಾ ಶಂಕರ್ ಯೋಚಿಸಿದಾಗ ಯಾವುದೇ ಕಂಪ್ಯೂಟರ್‌ಗಳಿರಲಿಲ್ಲ, ಮೊಬೈಲ್‌ಗಳಿರಲಿಲ್ಲ. ಇದು ಶಂಕರ್‌ನಾಗ್‌ರ ಕ್ರಿಯಾಶೀಲ ಮನಸ್ಸಿಗೆ, ಪ್ರಯೋಗಶೀಲ ಮೆದುಳಿಗೆ ತಾನಿರುವ ಕಾಲದಿಂದ ಮುಂದಿನ ಮೂವತ್ತು, ನಲವತ್ತು, ಐವತ್ತು, ನೂರು ವರ್ಷಗಳ ಮುಂದಕ್ಕೆ ಆಲೋಚಿಸುವ ಅವರ ದೂರ ದೃಷ್ಟಿಗೊಂದು ನಿದರ್ಶನ.

ಅದರ ಫಲವೇ ಕನ್ನಡ ಚಿತ್ರರಂಗಕ್ಕೆ ಮೊಟ್ಟ ಮೊದಲಿಗೆ ಆ ಕಾಲದಲ್ಲೇ ಅವರು ತಂದ ಕಂಪ್ಯೂಟರ್ ಚಾಲಿತ ಶಬ್ಧಗ್ರಹಣ ತಂತ್ರಜ್ಞಾನದ ಪರಿಕಲ್ಪನೆಯ ಸಂಕೇತ್ ಎಲೆಕ್ಟ್ರಾನಿಕ್ ರೆಕಾರ್ಡಿಂಗ್ ಸ್ಟುಡಿಯೊ! ಹಾಗೆಯೇ ಅವರು ಕಟ್ಟಿದ 'ಕಂಟ್ರಿ ಕ್ಲಬ್' ಕೂಡ ಶಂಕರ್‌ನಾಗ್‌ರ ಕರ್ತೃತ್ವ ಶಕ್ತಿಗೆ ಸಾಕ್ಷಿ. ಬಹುಶಃ ಅವರು ಇಲ್ಲಿಯ ತನಕ ಬದುಕಿದ್ದರೆ ಅವರ ಚಿಂತನೆಗಳು, ಕಂಡ ಕನಸುಗಳು ಎಲ್ಲವೂ ಖಂಡಿತ ಸಾಕಾರಗೊಳ್ಳುತ್ತಿದ್ದವು. ಅಷ್ಟೇ ಅಲ್ಲ, ಕನ್ನಡ ಚಿತ್ರರಂಗದಲ್ಲಷ್ಟೇ ಅಲ್ಲದೆ ಒಟ್ಟಾರೆ ಕರ್ನಾಟಕದಲ್ಲಿ ಎಂತೆಂಥಾ ಅದ್ಭುತಗಳನ್ನು ಅವರು ಮಾಡಿಬಿಡುತ್ತಿದ್ದರೋ ಏನೋ! ನಿಜಕ್ಕೂ ಅದನ್ನು ಊಹಿಸಲಿಕ್ಕೂ ಆಗದು.ಅಂಥ ಪವಾಡ ಸದೃಶ ಮಹದದ್ಭುತ ಶಂಕರ್‌ನಾಗ್.

ಇಂಥ ಮಹಾ ಕನಸುಗಾರ ಶಂಕರ್‌ನಾಗ್ ಜನಿಸಿದ್ದು 1954ರ ನವೆಂಬರ್ 9. ಇವರ ಮನೆಯ ಮುಂದೆ ನಾಗರಕಟ್ಟೆ ಇದ್ದ ಕಾರಣ ಇವರ ಹೆಸರಿನ ಮುಂದೆ ನಾಗರಕಟ್ಟೆ ಸೇರಿಕೊಂಡು ಶಂಕರ್‌ನಾಗರಕಟ್ಟೆಯಾಗಿ ಅದೇ ಮುಂದಿನ ದಿನಗಳಲ್ಲಿ ಶಂಕರ್‌ನಾಗ್ ಆದದ್ದು ಈಗ ಇತಿಹಾಸ. ಜನ್ಮಸ್ಥಳ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಸಮೀಪದ ಮಲ್ಲಾಪುರ ಎಂಬ ಪುಟ್ಟ ಗ್ರಾಮ.ತಂದೆ ಹೊನ್ನಾವರ ಸದಾನಂದ ನಾಗರಕಟ್ಟೆ, ಒಡಹುಟ್ಟಿದವರು ಅಕ್ಕ ಶ್ಯಾಮಲ ನಾಗರಕಟ್ಟೆ, ಅಣ್ಣ ಅನಂತ್‌ನಾಗರಕಟ್ಟೆ(ಅನಂತ್‌ನಾಗ್). ಬಡತನ ಬಗಲಲ್ಲಿದ್ದರೂ ಸುಸಂಸ್ಕೃತ ವಾತಾವರಣದಲ್ಲಿದ್ದ ಈ ಪುಟ್ಟ ಕುಟುಂಬಕ್ಕೆ ನೆಮ್ಮದಿಗೇನೂ ಕೊರತೆ ಇರಲಿಲ್ಲ.

ಶಂಕರ್ ನಾಗರಕಟ್ಟೆಯ ವಿದ್ಯಾಭ್ಯಾಸ ಮುಂಬೈನಲ್ಲೇ ಮುಂದುವರಿಯಿತು. ಮುಂಬೈ ವಿಶ್ವವಿದ್ಯಾಲಯದಲ್ಲಿ ಕಾಮರ್ಸ್ ಪದವಿ ಮುಗಿಸಿ ಅಲ್ಲೇ ಬ್ಯಾಂಕ್‌ವೊಂದರಲ್ಲಿ ಗುಮಾಸ್ತನಾಗಿ ಸೇರಿಕೊಂಡರು. ಬ್ಯಾಂಕ್ ಉದ್ಯೋಗಿಯಾಗಿದ್ದುಕೊಂಡೇ ಮರಾಠಿ ರಂಗಭೂಮಿಯಲ್ಲಿ ತೊಡಗಿಸಿಕೊಂಡರು. ಅಲ್ಲಿಂದ ಶಂಕರ್‌ನಾಗ್ ಆಗಿ ಅವರ ಹೆಸರು ಮರಾಠಿ ರಂಗಭೂಮಿಯಲ್ಲಿ ಮಿಂಚತೊಡಗಿತು. ಬಹಳಷ್ಟು ನಾಟಕಗಳಲ್ಲಿ ಬಿಡುವಿಲ್ಲದಂತೆ ಅಭಿನಯಿಸಿ ಮುಂಬೈನಲ್ಲಿ ಗಮನಾರ್ಹ ಹೆಸರು ಮಾಡಿದರು. ಅಲ್ಲಿ ಇವರನ್ನು ಒಳ್ಳೆ ರಂಗಕರ್ಮಿಯಾಗಿ ರೂಪಿಸಿದವರು ಶಂಕರ್‌ನಾಗ್ ಹೆಚ್ಚು ಗೌರವಿಸುತ್ತಿದ್ದ ಅವರ ಗುರು ಖ್ಯಾತ ನಿರ್ದೇಶಕ ಸಾಯಿ ಪರಾಂಜಪೆ. ಇವರ ಗರಡಿಯಲ್ಲಿ ನಟನೆ, ನಿರ್ದೇಶನ, ಸ್ಟೇಜ್, ಲೈಟಿಂಗ್, ಮೇಕಪ್... ಎಲ್ಲದರಲ್ಲೂ ತಜ್ಞರಾಗಿ ಬಿಟ್ಟಿದ್ದರು.

ಹೀಗೆ ಶಂಕರ್‌ನಾಗ್ ಮುಂಬೈನಲ್ಲಿ ನಾಟಕಗಳಲ್ಲಿ ನಟಿಸುತ್ತಿದ್ದ ಸಂದರ್ಭದಲ್ಲಿ ಖ್ಯಾತ ನಿರ್ದೇಶಕ ಗಿರೀಶ್ ಕಾರ್ನಾಡ್ ಅವರು ಬಂದವರೇ 'ಸಿನಿಮಾದಲ್ಲಿ ಪಾರ್ಟ್ ಮಾಡ್ತಿಯೇನೊ ಹುಡುಗಾ?' ಅಂದದ್ದೇ ತಡ ಹಿಂದೆ ಮುಂದೆ ಏನೂ ಯೋಚಿಸದೆ ಕಾರ್ನಾಡ್ ಹಿಂದೆ ಶಂಕರ್‌ನಾಗ್ ನಡೆದರು. ಪರಿಣಾಮ 1978ರಲ್ಲಿ ಗಿರೀಶ್ ಕಾರ್ನಾಡ್ ನಿರ್ದೇಶನದ 'ಒಂದಾನೊಂದು ಕಾಲದಲ್ಲಿ' ಕಲಾತ್ಮಕ ಚಿತ್ರದ ಹೀರೋ ಆಗಿ ಕನ್ನಡ ಚಿತ್ರರಂಗವನ್ನು ಪ್ರಥಮವಾಗಿ ಶಂಕರ್‌ನಾಗ್ ಪ್ರವೇಶಿಸಿದರು. ಈ ಚಿತ್ರದ ಅವರ ಅಮೋಘ ಅಭಿನಯಕ್ಕೆ ಭಾರತ ಸರ್ಕಾರದ ಶ್ರೇಷ್ಠನಟ ರಾಷ್ಟ್ರ ಪ್ರಶಸ್ತಿಗೆ ಭಾಜನರಾದರು. ಈ ಚಿತ್ರಕ್ಕೆ 'ರಜತ ಕಮಲ ರಾಷ್ಟ್ರ ಪ್ರಶಸ್ತಿ' ಲಭ್ಯವಾಯಿತು. ಇದು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿಯೂ ಪ್ರದರ್ಶನಗೊಂಡು ಇಡೀ ಭಾರತೀಯ ಚಿತ್ರರಂಗ ಇತ್ತ ತಿರುಗಿ ನೋಡುವಂತೆ ಮಾಡಿತು. 'ಒಂದಾನೊಂದು ಕಾಲದಲ್ಲಿ' ಚಿತ್ರದ ಮೂಲಕ ದಿನಬೆಳಗಾಗುವುದರೊಳಗೆ ಶಂಕರ್‌ನಾಗ್ ಬಣ್ಣದ ಲೋಕದ ಹೊಸ ಮಿಂಚಾಗಿದ್ದರು. ಅದೇ ಸಂದರ್ಭದಲ್ಲಿ ಚಿತ್ರೋದ್ಯಮಿ ಅಬ್ಬಯ್ಯನಾಯ್ಡು ಅವರನ್ನು ಶಂಕರ್‌ನಾಗ್ ಬಹಳ ಆಕರ್ಷಿಸಿದ್ದರು. ಹಾಗಾಗಿ 1979ರಲ್ಲಿ ಅಬ್ಬಯ್ಯನಾಯ್ಡು ನಿರ್ಮಿಸಿದ ವೈದ್ಯ ವಿಜ್ಞಾನಕ್ಕೊಂದು ಸವಾಲ್ ಎನ್ನುವಂತಹ ಮೆದುಳನ್ನು ಕಸಿಮಾಡುವ ವಿಶಿಷ್ಟ ಕಥೆಯುಳ್ಳ 'ಸೀತಾರಾಮು' ಚಿತ್ರದಲ್ಲಿ ಅಂದಿನ ಸೂಪರ್ ಸ್ಟಾರಿಣಿಯಾಗಿದ್ದ ಮಂಜುಳಾ ಜೊತೆ ನಾಯಕನಟರಾಗಿ ಶಂಕರ್‌ನಾಗ್ ನಟಿಸಿದರು. ಸೀತಾರಾಮು ಅತ್ಯಂತ ಯಶಸ್ವಿ ಚಿತ್ರವಾಗಿ ಜನಮನ್ನಣೆಗಳಿಸಿ ಹಣದ ಮಳೆಯನ್ನೇ ಸುರಿಸಿತು. ಶಂಕರ್‌ನಾಗ್ ಕನ್ನಡ ಚಿತ್ರರಸಿಕರ ಕಣ್ಮಣಿಯಾಗಿ ಬಿಟ್ಟರು. ಕಲಾತ್ಮಕ ಹಾಗೂ ಕಮರ್ಷಿಯಲ್ ಎರಡೂ ಬಗೆಯ ಚಿತ್ರಗಳಿಗೂ ಸಲ್ಲಬಲ್ಲಂತಹ ಏಕೈಕ ನಟನೆಂಬ ಹೆಗ್ಗಳಿಕೆಗಳಿಸಿದ ಶಂಕರ್‌ನಾಗ್ ಅಲ್ಲಿಂದೀಚೆಗೆ ಸಾಲು ಸಾಲು ಚಿತ್ರಗಳ ನಾಯಕನಟರಾಗಿ ನಾಗಾಲೋಟದಲ್ಲಿ ಮುನ್ನಡೆದರು.

ಕನ್ನಡ ಚಿತ್ರರಂಗದ ಮೈದಾನದಲ್ಲಿ ಶಂಕರ್‌ನಾಗ್‌ರ ಮಿಂಚಿನ ವೇಗ ಎಷ್ಟಿತ್ತೆಂದರೆ ನಿಜಕ್ಕೂ ಅಚ್ಚರಿಯಾಗುತ್ತದೆ. ಏಕೆಂದರೆ ಕನ್ನಡ ಚಿತ್ರರಂಗದಲ್ಲಿ ಶಂಕರ್‌ನಾಗ್ ಇದ್ದದ್ದು ಕೇವಲ 12 ವರ್ಷಗಳು. ಅಭಿನಯಿಸಿದ್ದು 90 ಚಿತ್ರಗಳಿಗೂ ಹೆಚ್ಚು ಸರಾಸರಿ ಲೆಕ್ಕ ಹಾಕಿದರೆ ಎಂತಹವರಿಗೂ ಅವರ ವೇಗದ ಅರಿವಾದೀತು. ಒಂದಾನೊಂದು ಕಾಲದಲ್ಲಿ, ಸೀತಾರಾಮು, ಮೂಗನಸೇಡು, ಮುನಿಯನ ಮಾದರಿ, ಆಟೋರಾಜ, ಕಾರ್ಮಿಕ ಕಳ್ಳನಲ್ಲ, ತಾಳಿಯ ಆಣೆ, ಅಪೂರ್ವ ಸಂಗಮ, ಕರಿನಾಗ, ಗೀತಾ, ಜೀವಕ್ಕೆ ಜೀವ, ಹೊಸಜೀವನ, ಸಾಂಗ್ಲಿಯಾನ, ಸಾಂಗ್ಲಿಯಾನ ಭಾಗ–2, ಸಿ.ಬಿ.ಐ. ಶಂಕರ್, ಮಿಂಚಿನ ಓಟ, ಆಕ್ಸಿಡೆಂಟ್..... ಮುಂತಾದವು ಶಂಕರ್‌ನಾಗ್ ಅವರಿಗೆ ಹೆಚ್ಚು ಖ್ಯಾತಿ ತಂದು ಕೊಟ್ಟ ಚಿತ್ರಗಳು, ಹಾಗೆಯೇ ತಾಯಿಯ ಕನಸು, ಆರದಗಾಯ, ಪ್ರೀತಿ ಮಾಡು ತಮಾಷೆನೋಡು, ಐಲವ್‌ಯೂ, ಚಂಡಿ ಚಾಮುಂಡಿ, ತಾಯಿಯ ಮಡಿಲಲ್ಲಿ, ರುಸ್ತುಂ ಜೋಡಿ, ಗಂಡಬೇರುಂಡ, ಕೆರಳಿದ ಹೆಣ್ಣು, ಹುಲಿ ಹೆಬ್ಬುಲಿ, ಜನ್ಮದ ಅನುಬಂಧ, ತಾಯಿ, ಕಾಳಿಂಗ ಸರ್ಪ, ದೇವರ ಆಟ, ಬೆಂಕಿ ಬಿರುಗಾಳಿ, ಹೊಸ ತೀರ್ಪು, ಕಿಲಾಡಿ ಅಳಿಯ, ಶಕ್ತಿ, ನ್ಯಾಯ ಎಲ್ಲಿದೆ, ನೋಡಿ ಸ್ವಾಮಿ ನಾವಿರೋದೆ ಹೀಗೆ, ಗೆದ್ದ ಮಗ, ಸುಂದರ ಕಾಂಡ ಇವು ಇವರು ಅಭಿನಯಿಸಿದ ಪ್ರಮುಖ ಚಿತ್ರಗಳು.

ಶಂಕರ್‌ನಾಗ್ ಚಿತ್ರರಂಗ ಪ್ರವೇಶಿಸಿದ ಪ್ರಾರಂಭದಲ್ಲಿ ನಟನೆಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದರೂ ನಂತರದ ದಿನಗಳಲ್ಲಿ ಚಿತ್ರ ನಿರ್ಮಾಣ ಮತ್ತು ನಿರ್ದೇಶನಕ್ಕೂ ಕೈಯಾಕಿ ಅಲ್ಲೂ ಸಹ ಯಶಸ್ಸು ಕಂಡರು. ಮಿಂಚಿನ ಓಟ, ಜನ್ಮ ಜನ್ಮದ ಅನುಬಂಧ, ಗೀತಾ, ಹೊಸತೀರ್ಪು, ನೋಡಿ ಸ್ವಾಮಿ ನಾವಿರೋದೆ ಹೀಗೆ, ಒಂದು ಮುತ್ತಿನ ಕಥೆ, ಆಕ್ಸಿಡೆಂಟ್ ಇವು ಅವರು ನಿರ್ದೇಶಿಸಿದ ಚಿತ್ರಗಳು, ಇವುಗಳಲ್ಲಿ 'ಆಕ್ಸಿಡೆಂಟ್' ರಾಜ್ಯ ಸರ್ಕಾರದಿಂದ ಪ್ರಥಮ ಅತ್ಯುತ್ತಮ ಚಿತ್ರವೆಂಬ ರಾಜ್ಯ ಪ್ರಶಸ್ತಿಗೆ ಮತ್ತು ಕೇಂದ್ರ ಸರ್ಕಾರದ ರಜತ ಕಮಲ ರಾಷ್ಟ್ರ ಪ್ರಶಸ್ತಿಗೆ ಭಾಜನವಾಗಿತ್ತು. ಹಾಗೆಯೇ ಇವರು ನಿರ್ದೇಶಿಸಿದ್ದ ಮಿಂಚಿನ ಓಟ ಮತ್ತು ಆಕ್ಸಿಡೆಂಟ್ ಚಿತ್ರಗಳು ವಿವಿಧ ವಿಭಾಗಗಳಲ್ಲಿ ಒಟ್ಟು 15 ರಾಜ್ಯ ಪ್ರಶಸ್ತಿಗಳನ್ನು ಗಳಿಸಿದ್ದು ಆಗ ಇದು ದಾಖಲೆಯಾಗಿತ್ತು. ವರನಟ ಡಾ.ರಾಜ್‌ಕುಮಾರ್ ಅಭಿನಯದ 'ಒಂದು ಮುತ್ತಿನ ಕಥೆ'ಯನ್ನು ನಿರ್ದೇಶಿಸಿದ್ದ ಹೆಗ್ಗಳಿಕೆಯ ಇವರು ನಿರ್ದೇಶಿಸಿದ ಎಲ್ಲಾ ಚಿತ್ರಗಳೂ ಒಂದಲ್ಲ ಒಂದು ರೀತಿಯಲ್ಲಿ ಯಶಸ್ವಿ ಚಿತ್ರಗಳೇ ಆಗಿದ್ದವು.

ಖ್ಯಾತ ಇಂಗ್ಲೀಷ್ ಕಾದಂಬರಿಕಾರ, ಕನ್ನಡಿಗ ಆರ್.ಕೆ.ನಾರಾಯಣ್ ಅವರ 'ಮಾಲ್ಗುಡಿಡೇಸ್' ಧಾರಾವಾಹಿಯನ್ನು ಇವರು ಹಿಂದಿಯಲ್ಲಿ ನಿರ್ದೇಶಿಸಿದಾಗ ರಾಷ್ಟ್ರವೇ ಅಲ್ಲದೆ, ವಿಶ್ವದ ಗಮನ ಸೆಳೆದು ಪ್ರಸಿದ್ಧಿಯ ಶಿಖರವೇರಿದ್ದರು. ದೂರದರ್ಶನ ಸರಣಿಯಲ್ಲಿ ಇದು ವಿಶ್ವದ ನಂಬರ್ ಒನ್ ಸ್ಥಾನಗಳಿಸಿತ್ತು.ಆಗ ದೂರದರ್ಶನಕ್ಕೆ ಹೆಚ್ಚು ವೀಕ್ಷಕರನ್ನು ಬರಮಾಡಿಕೊಂಡ ಕ್ರೆಡಿಟ್ ಕೂಡ ಶಂಕರ್‌ನಾಗ್‌ರ 'ಮಾಲ್ಗುಡಿಡೇಸ್'ಗೆ ಸಲ್ಲುತ್ತದೆ. ಇವರು ನಿರ್ದೇಶಿಸಿದ ಮತ್ತೊಂದು ದೂರದರ್ಶನ ಧಾರಾವಾಹಿ 'ಸ್ವಾಮಿ' ಸಹ ದೇಶ ವ್ಯಾಪಿ ಹೆಸರು ಮಾಡಿತ್ತು. ಬಾಲ ನಟ ಮಾ॥ ಮಂಜುನಾಥರನ್ನು ಕಿರುತೆರೆ ಹಾಗೂ ಹಿರಿ ತೆರೆಗಳೆರಡಕ್ಕೂ ಬಳಸಿಕೊಂಡು ಇವರು ಆತನೊಳಗಿನ ಅದ್ಭುತ ಬಾಲ ಪ್ರತಿಭೆಯನ್ನು ಜಗತ್ತಿಗೆ ಅನಾವರಣಗೊಳಿಸಿದ್ದರು. ಹಲವಾರು ಚಿತ್ರಗಳಲ್ಲಿ ಇವರಿಬ್ಬರ ಜೋಡಿ ಪ್ರೇಕ್ಷಕರಿಗೆ ಮೋಡಿಮಾಡಿತ್ತು.

ನಟಿಸಿದ ಮೊದಲ ಚಿತ್ರಕ್ಕೇ ರಾಷ್ಟ್ರ ಪ್ರಶಸ್ತಿ ಪಡೆದು, ಎರಡನೇ ಚಿತ್ರಕ್ಕೇ ಸೂಪರ್ ಸ್ಟಾರ್ ಪಟ್ಟ ಪಡೆದುಕೊಂಡಿದ್ದ ಶಂಕರ್‌ನಾಗ್ ಆ ಪಟ್ಟವನ್ನು ಯಾವತ್ತೂ ಕಳೆದು ಕೊಳ್ಳದೆ ದಿನದಿಂದ ದಿನಕ್ಕೆ ಊರ್ಧ್ವಮುಖಿಯಾಗಿ ಬೆಳ್ಳಿತೆರೆಯಲ್ಲಿ ಬೆಳಗತೊಡಗಿದ್ದರು. ಶಂಕರ್‌ನಾಗ್ ಸಾಧನೆ ವಿಧಿರಾಯನಿಗೆ ಸಾಕೆನಿಸಿತೆಂದು ಕಾಣುತ್ತದೆ. ಡಾ.ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' ಯಶಸ್ವಿ ನಾಟಕವನ್ನು ಚಲನಚಿತ್ರವಾಗಿಸುವ ಮಹದಾಸೆಯಲಿ ಚಿತ್ರೀಕರಣ ಆರಂಭಿಸಲು ಬೆಂಗಳೂರಿನಿಂದ ಹುಬ್ಬಳ್ಳಿಗೆ ಶಂಕರ್‌ನಾಗ್ ಕಾರಿನಲ್ಲಿ ಹೊರಟಿದ್ದರು. ಹೊರಟೇ ಬಿಟ್ಟರು. ಅದು 1990 ಸೆಪ್ಟಂಬರ್ 30. ಬೆಳಗಿನ ಸಮಯ ಕಾರು ಅಪಘಾತದಲ್ಲಿ ಶಂಕರ್‌ನಾಗ್ ಮತ್ತೆ ಬಾರದ ಲೋಕ ಸೇರಿಕೊಂಡರು.

ವೆಚ್ಚ ಕಡಿತಕ್ಕಾಗಿ ಹೆಚ್ಚೆಚ್ಚು ನಿರ್ವಾಹಕ ರಹಿತ ಬಸ್ ಓಡಿಸಲು ಕೆಎಸ್‌ಆರ್‌ಟಿಸಿ ಕ್ರಮ!



ಬೆಂಗಳೂರು: ಕಾರ್ಯಾಚರಣೆಯ ವೆಚ್ಚವನ್ನು ಕಡಿತಗೊಳಿಸಲು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತನ್ನ ಶೇಕಡಾ 10ಕ್ಕಿಂತ ಹೆಚ್ಚು ಬಸ್‌ಗಳನ್ನು ಕಂಡಕ್ಟರ್‌ಗಳಿಲ್ಲದೆ ನಿರ್ವಹಿಸುತ್ತಿದೆ. ಹೀಗಾಗಿ ಪ್ರತಿ ಕಿಲೋಮೀಟರ್‌ಗೆ ವೆಚ್ಚವನ್ನು 10 ರೂ. ಗಳಷ್ಟು ಕಡಿಮೆ ಮಾಡಲು ಸಾಧ್ಯವಾಗುತ್ತಿದೆ. ನಿಗಮ ಪ್ರಸ್ತುತ 850 ಕ್ಕೂ ಹೆಚ್ಚು ಬಸ್‌ಗಳಲ್ಲಿ 'ಏಕ–ಸಿಬ್ಬಂದಿ ಮಾದರಿ'ಯನ್ನು ಅಳವಡಿಸಿಕೊಂಡಿದೆ.

ಈ ಮಾದರಿಯ ಬಗ್ಗೆ ವಿವರಗಳನ್ನು ಹಂಚಿಕೊಂಡ ಕೆಎಸ್‌ಆರ್‌ಟಿಸಿ ಎಂಡಿ ಅನ್ಬು ಕುಮಾರ್, ಬೆಂಗಳೂರು–ಮೈಸೂರು, ಬೆಂಗಳೂರು–ಹಾಸನ, ಬೆಂಗಳೂರು–ದಾವಣಗೆರೆ, ಬೆಂಗಳೂರು–ಶಿವಮೊಗ್ಗದಂತಹ ಆಯ್ದ ಮಾರ್ಗಗಳಲ್ಲಿ ಕೆಲವು ಅಥವಾ ಯಾವುದೇ ನಿಲುಗಡೆಗಳಿಲ್ಲದ ಪಾಯಿಂಟ್–ಟು–ಪಾಯಿಂಟ್ ಮಾರ್ಗಗಳಲ್ಲಿ ನಿರ್ವಾಹಕ ರಹಿತ ಒಬ್ಬರೇ ಸಿಬ್ಬಂದಿ ಇರುವ ಮಾದರಿಯನ್ನು ಪರಿಚಯಿಸಲಾಗಿದೆ. ಬೆಂಗಳೂರು–ಮಡಿಕೇರಿ, ಬೆಂಗಳೂರು–ಕೋಲಾರ ಮತ್ತು ಇತರೆ ಬೋರ್ಡಿಂಗ್ ಪಾಯಿಂಟ್‌ನಲ್ಲಿ ಮತ್ತು ಹೆಚ್ಚುವರಿ ಪ್ರಯಾಣಿಕರು ದಾರಿಯುದ್ದಕ್ಕೂ ಹತ್ತಿದಾಗ ಚಾಲಕರಿಂದ ಟಿಕೆಟ್‌ಗಳನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಏಕ ಸಿಬ್ಬಂದಿ ಮಾದರಿಯನ್ನು ಪರಿಚಯಿಸುವ ಹಿಂದಿನ ಉದ್ದೇಶವನ್ನು ವಿವರಿಸಿದ ಅವರು, ಕೆಎಸ್‌ಆರ್‌ಟಿಸಿ ಸಾಮಾನ್ಯ ಮತ್ತು ಪ್ರೀಮಿಯಂ ಬಸ್‌ಗಳು ಸೇರಿದಂತೆ ಪ್ರತಿದಿನ 8,000 ಕ್ಕೂ ಹೆಚ್ಚು ಬಸ್‌ಗಳನ್ನು ನಿರ್ವಹಿಸುತ್ತದೆ. ಪ್ರತಿದಿನ 28 ಲಕ್ಷ ಕಿಲೋಮೀಟರ್‌ಗಳನ್ನು ಕ್ರಮಿಸುತ್ತದೆ. ಪ್ರತಿ ಕಿಲೋಮೀಟರ್‌ಗೆ ವೆಚ್ಚ, ಬಂಡವಾಳ ವೆಚ್ಚಗಳು, ಬಡ್ಡಿ, ಡೀಸೆಲ್, ಆಡಳಿತಾತ್ಮಕ ವೆಚ್ಚಗಳು ಮತ್ತು ಕಂಡಕ್ಟರ್ ಮತ್ತು ಡ್ರೈವರ್ ವೆಚ್ಚಗಳನ್ನು ಒಳಗೊಂಡಂತೆ ನಮ್ಮ ಬಸ್‌ಗಳನ್ನು ನಿರ್ವಹಿಸಲು ಪ್ರತಿ ಕಿಮೀಗೆ 50 ರೂ.ವರೆಗೆ ವೆಚ್ಚ ಉಂಟಾಗಲಿದೆ. ನಮ್ಮ ಗಳಿಕೆ (ಇಪಿಕೆಎಂ) ಪ್ರತಿ ಕಿಮೀಗೆ 50 ರೂ.ಗಿಂತ ಹೆಚ್ಚಿದ್ದರೆ ಮಾತ್ರ ನಿಗಮಕ್ಕೆ ಲಾಭವಾಗುತ್ತದೆ. ಆದಾಗ್ಯೂ, 8,000 ಬಸ್‌ಗಳಲ್ಲಿ, ಸುಮಾರು 5,000 ಬಸ್‌ಗಳು ಕಡಿಮೆ ಸಂಖ್ಯೆಯ ಪ್ರಯಾಣಿಕರು ಸೇರಿದಂತೆ ಅನೇಕ ಅಂಶಗಳಿಂದ ಪ್ರತಿ ಕಿ.ಮೀ.ಗೆ ರೂ. 50ಕ್ಕಿಂತ ಕಡಿಮೆ ಆದಾಯವನ್ನು ಪಡೆಯುತ್ತಿವೆ ಎಂದು ಹೇಳಿದ್ದಾರೆ.

ಸಾರ್ವಜನಿಕ ಬಸ್ ನಿಗಮಗಳು ಜನರಿಗೆ ಸೇವೆ ಸಲ್ಲಿಸಬೇಕು ಮತ್ತು ಹಣ ಮಾಡಬಾರದು ಎಂದು ಒಪ್ಪಿಕೊಂಡೇ, ಪ್ರಯಾಣಿಕರಿಗೆ ಹೊರೆಯಾಗದಂತೆ ಉತ್ತಮವಾಗಿ ಸೇವೆ ಸಲ್ಲಿಸಲು ವೆಚ್ಚವನ್ನು ಕಡಿತಗೊಳಿಸುವ ಮಾರ್ಗಗಳನ್ನು ನಿಗಮವು ಯಾವಾಗಲೂ ಅನ್ವೇಷಿಸುತ್ತಿದೆ ಮತ್ತು ನಿರ್ವಾಹಕ ರಹಿತ ಬಸ್ ಕಾರ್ಯಾಚರಣೆ ಅಂತಹ ಒಂದು ಕ್ರಮದ ಮಾದರಿಯಾಗಿದೆ ಎಂದರು.

ಈ ಮಾದರಿಯಿಂದ ಕೆಎಸ್‌ಆರ್‌ಟಿಸಿಗೆ ಪ್ರತಿ ಕಿ.ಮೀ.ಗೆ ಸುಮಾರು 10 ರೂಪಾಯಿ ಉಳಿಸಲು ಸಾಧ್ಯವಾಗುತ್ತದೆ. ಸುಮಾರು ಐದು ಗಂಟೆಗಳ ಪ್ರಯಾಣದ ಸಮಯವಿರುವ ಮಾರ್ಗಗಳಲ್ಲಿ ಮಾತ್ರ ನಾವು ಈ ಮಾದರಿಯನ್ನು ಪರಿಚಯಿಸಿದ್ದೇವೆ. 5–6 ಗಂಟೆಗಳಿಗಿಂತ ಹೆಚ್ಚಿನ ಪ್ರಯಾಣಕ್ಕಾಗಿ, ಚಾಲಕನಿಗೆ ಸಹಾಯವಿಲ್ಲದೆ ನಿರ್ವಹಿಸುವುದು ಸವಾಲಿನ ಸಂಗತಿಯಾಗಿದೆ ಎಂದು ಅವರು ಹೇಳಿದರು.

ಮಕ್ಕಳ ದಿನಾಚರಣೆ ಪ್ರಯುಕ್ತ

ವಸ್ತುಪ್ರದರ್ಶನಕ್ಕೆ ಮಕ್ಕಳಿಗೆ ಉಚಿತ ಪ್ರವೇಶ

ಮೈಸೂರು: ನ.14 ರಂದು 'ಮಕ್ಕಳ ದಿನಾಚರಣೆ' ಪ್ರಯುಕ್ತ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ವಸ್ತುಪ್ರದರ್ಶನವನ್ನು ವೀಕ್ಷಿಸಲು ಉಚಿತ ಪ್ರವೇಶಾವಕಾಶವನ್ನು ಕಲ್ಪಿಸಲಾಗಿದ್ದು, ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬಹುದು ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಸ್ಕೃತಿಕ ಸ್ಪರ್ಧೆಗಳ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ನ.8– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ 2024ರ ದಸರಾ ವಸ್ತುಪ್ರದರ್ಶನದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ನ.9 ರಿಂದ ಡಿ.28 ರವರೆಗೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಏರ್ಪಡಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದೆ.

ನ.16 ರಂದು 14 ವರ್ಷ ಮೇಲ್ಪಟ್ಟವರಿಂದ ಸಮೂಹ ನೃತ್ಯ ಸ್ಪರ್ಧೆಯನ್ನು ನ.14, ನ.23 ರಂದು ಎಲ್ಲಾ ವಯೋಮಾನದವರ ಜಾನಪದ ಸಮೂಹ ನೃತ್ಯ ಸ್ಪರ್ಧೆಯನ್ನು ನ.21, ನ.30 ರಂದು 8 ವರ್ಷಕ್ಕೆ ಒಳಪಟ್ಟವರ ಸಮೂಹ ನೃತ್ಯ ಸ್ಪರ್ಧೆಯನ್ನು ನ.28, ಡಿ.7 ರಂದು 16 ವರ್ಷ ಮೇಲ್ಪಟ್ಟವರ ಶಾಸ್ತ್ರೀಯ ಸಮೂಹ ನೃತ್ಯ ಸ್ಪರ್ಧೆಯನ್ನು ಡಿ.5, ಡಿ.14 ರಂದು 16 ವರ್ಷಗಳ ಪಟ್ಟವರ ಶಾಸ್ತ್ರೀಯ ಸಮೂಹ ನೃತ್ಯ ಸ್ಪರ್ಧೆಯನ್ನು ಡಿ.12, ಡಿ.21 ರಂದು ಎಲ್ಲಾ ವಯೋಮಾನದ ಸಮೂಹ ಗಾಯನ ಸ್ಪರ್ಧೆಯನ್ನು ಡಿ.19 ಹಾಗೂ ಡಿ.28 ರಂದು ಎಲ್ಲಾ ವಯೋಮಾನದವರ ಅಂತರ ವಿಶ್ವವಿದ್ಯಾನಿಲಯ ಸಮೂಹ ನೃತ್ಯ ಸ್ಪರ್ಧೆಯನ್ನು ಡಿ.20 ರವರೆಗೆ ವಿಸ್ತರಿಸಲಾಗಿದೆ.

ಆಸಕ್ತರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಕಚೇರಿ ಅಥವಾ https://forms.gle/qB9Wbj8D4KLFbod6A ಆನ್‌ಲೈನ್ ಮೂಲಕ ಅರ್ಜಿ ಪಡೆಯಬಹುದಾಗಿದ್ದು, ಪ್ರತಿ ತಂಡಕ್ಕೆ ಪ್ರವೇಶ ಶುಲ್ಕ 1000 ರೂ.ಗಳಿದ್ದು, ಪ್ರಾಧಿಕಾರದ ವತಿಯಿಂದ ಉಪಹಾರದ ವ್ಯವಸ್ಥೆ ಇರುತ್ತದೆ. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವಾಗಿ ರೂ.30,000, ದ್ವಿತೀಯ ಬಹುಮಾನ ರೂ. 20.000, ತೃತೀಯ ಬಹುಮಾನ 15000 ರೂ ಮತ್ತು ಎರಡು ತಂಡಗಳಿಗೆ ರೂ.5000 ಗಳ ಸಮಾಧಾನಕರ ಬಹುಮಾನ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲಾ ಸ್ಪರ್ಧಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಪದಕಗಳನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಾಂಸ್ಕೃತಿಕ ಉಪಸಮಿತಿಯ ಅಧ್ಯಕ್ಷರಾದ ರಘುರಾಜೇ ಅರಸ್ ಅವರ ದೂ.ಸಂ: 9880358761 ಹಾಗೂ ಸಾಂಸ್ಕೃತಿಕ ಉಪಸಮಿತಿಯ ಸದಸ್ಯ ಕಾರ್ಯದರ್ಶಿಯಾದ ಬಿ.ಆರ್ ನಂದಕುಮಾರ್ ಅವರ ದೂ.ಸಂ:7204202444 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಸಂಗೀತ ಸುಗಂಧ ಕಾರ್ಯಕ್ರಮ ಉದ್ಘಾಟನೆ

ಕರ್ನಾಟಕ ಸಂಗೀತಕ್ಕೆ ಜಾತಿ, ಧರ್ಮ, ಭಾಷೆ ಎಲ್ಲೆ ಇಲ್ಲ

●ಮೈಸೂರು ಸಂಗೀತದ ನಾಡು, ಚಂದನದ ಬೀಡು ●ಕನ್ನಡ ಭಾಷೆ, ಸಂಗೀತ ಹೃದಯ ಸ್ಪರ್ಶಿಸುತ್ತದೆ ●ದಾಸ ಸಾಹಿತ್ಯ ಎಂದೆಂದಿಗೂ ವಿಶ್ವವ್ಯಾಪಿ ಪ್ರಸ್ತುತ

–ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್

ಮೈಸೂರು, ನ.8(ಬಿಎಲ್‌ಯು)–ಭಾರತದ ಸಂಗೀತ ಪರಂಪರೆಗೆ ಕರ್ನಾಟಕ ಸಂಗೀತ ಮಹತ್ವದ ಕೊಡುಗೆ ನೀಡಿದ್ದು, ಜಾತಿ, ಧರ್ಮ, ಭಾಷೆ ಎಲ್ಲೆ ಮೀರಿರುವ ಕರ್ನಾಟಕದ ಸಂಗೀತ ಇಡೀ ವಿಶ್ವದಲ್ಲೆ ಪ್ರಖ್ಯಾತಿ ಪಡೆದಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಇಂದು ನಡೆದ ಕರ್ನಾಟಕ ಶಾಸ್ತ್ರೀಯ ಸಂಗೀತದ ದಾಸ ಪರಂಪರೆಯ ಸಂಗೀತೋತ್ಸವ ಮೈಸೂರು ಸಂಗೀತ ಸುಗಂಧ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದ ಸಂಗೀತದಲ್ಲಿ ದಾಸರು ರಚಿಸಿರುವ ಸಾಹಿತ್ಯವಂತೂ ಎಂದೆಂದಿಗೂ ಪ್ರಸ್ತುತ ಎಂದರು.

ಮೈಸೂರು ಸಂಗೀತದ ನಾಡು ಮಾತ್ರವಲ್ಲದೆ, ಚಂದನದ ನಾಡು ಕೂಡ. ಕನ್ನಡ ಭಾಷೆ ಮತ್ತು ಸಂಗೀತ ನೇರವಾಗಿ ಹೃದಯ ಸ್ಪರ್ಶಿಸುತ್ತದೆ. ಕನ್ನಡ ನಾಡಿನಲ್ಲಿರುವ ಸುಗಂಧದ ಜೊತೆಗೆ ಕನ್ನಡ ಭಾಷೆಯಲ್ಲಿ ಕೂಡ ಸುಗಂಧದ ಕಂಪು ಇದೆ ಎಂದು ಹೇಳಿದರು. ಮೈಸೂರು ರಾಜಪರಂಪರೆಯಲ್ಲಿ ಸಂಗೀತವನ್ನು ಹೆಚ್ಚು ಉತ್ತೇಜಿಸಲಾಗುತ್ತಿತ್ತು.

ಮೈಸೂರು ರಾಜರಾಗಿದ್ದ ಚಾಮರಾಜ ಒಡೆಯರ್ ಹಲವು ಗೀತೆಗಳನ್ನು ರಚಿಸಿದ್ದರು. ಈ ಮೂಲಕ ಮೈಸೂರಿನಲ್ಲಿ ಸಂಗೀತಕ್ಕೆ ಎಷ್ಟರ ಮಟ್ಟಿಗೆ ಪ್ರೋತ್ಸಾಹ ದೊರೆಯುತ್ತಿತ್ತು ಎಂದು ಅರಿಯಬಹುದು ಎಂದು ನಿರ್ಮಲಾ ಸೀತಾ ರಾಮನ್ ತಿಳಿಸಿದರು. ಮೈಸೂರಿನಲ್ಲಿ ಇಂತಹ ವಿಶಿಷ್ಟ ಕಾರ್ಯಕ್ರಮ ಆಯೋಜಿಸಿದ್ದು, ಇಲ್ಲಿ ದಾಸ ಸಂಗೀತದ ಬಗ್ಗೆ ಮಾತನಾಡುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ ಎಂದರು. ಭಾರತದ ಪ್ರತಿಯೊಂದು ರಾಜ್ಯ ತನ್ನದೆ ಆದ ವಿಭಿನ್ನ ಹಾಗೂ ವಿಶಿಷ್ಟ ರೀತಿಯ ಸಂಸ್ಕೃತಿ, ಭಾಷೆ ಹಾಗೂ ಸಂಗೀತ ಪರಂಪರೆ ಹೊಂದಿದೆ. ಇದು ದೇಶದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ತಿಳಿಸಿದರು. ಭಾರತದ ರಾಜರ ಆಳ್ವಿಕೆಯಲ್ಲಿ ಅದರಲ್ಲೂ ವಿಜಯನಗರ ಸಾಮ್ರಾಜ್ಯದಲ್ಲಿ ರಾಜ ಮನೆತನದವರು ಸಂಗೀತಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರು. ರಾಜರು ನೀಡಿದ ಉತ್ತೇಜನದಿಂದ ಇಂದು ಸಂಗೀತ ಕ್ಷೇತ್ರ ಬೆಳವಣಿಗೆ ಸಾಧಿಸುತ್ತಾ ಬಂದಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

12 ಮತ್ತು 14ನೇ ಶತಮಾನದ ನಡುವೆ ವಿಜಯನಗರ ಸಾಮ್ರಾಜ್ಯದ ವೇಳೆಯಲ್ಲಿ ಕರ್ನಾಟಕ ಸಂಗೀತ ಪ್ರವರ್ಧಮಾನಕ್ಕೆ ಬಂತು. ಸಂತ ಪುರಂದರ ದಾಸರು ಲಕ್ಷಾಂತರ ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಅಷ್ಟೆ ಅಲ್ಲದೆ ಸಂಗೀತಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಂಗೀತದ ಮೂಲಭೂತ ಪಾಠವನ್ನು ಬೋಧಿಸಿದರು ಎಂದು ತಿಳಿಸಿದರು.

ಇತಿಹಾಸದಲ್ಲಿ 18ನೇ ಶತಮಾನವನ್ನು ಕರ್ನಾಟಕ ಸಂಗೀತದ ಸುವರ್ಣಯುಗ ಎಂದು ಪರಿಗಣಿಸಬಹುದು ಎಂದು ಪ್ರತಿಪಾದಿಸಿದ ನಿರ್ಮಲಾ ಸೀತಾರಾಮನ್, ಪುರಂದರ ದಾಸರ ನಂತರ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮ ಶಾಸ್ತ್ರಿ ಸಮಕಾಲೀನರಾಗಿ ಕರ್ನಾಟಕ ಸಂಗೀತ ವನ್ನು ಮತ್ತಷ್ಟು ಉತ್ತುಂಗಕ್ಕೆ ತೆಗೆದುಕೊಂಡು ಹೋದರು ಎಂದು ಹೇಳಿದರು. ಪುರಂದರ ದಾಸರು ಸೇರಿದಂತೆ ಈ ಮೂವರು ಸಮಕಾಲೀನರು ಕರ್ನಾಟಕ ಸಂಗೀತವನ್ನು ಶ್ರೀಮಂತಗೊಳಿಸಿದರು. ದಾಸ ಸಾಹಿತ್ಯದಲ್ಲಿ ಕರ್ನಾಟಕ ಸಂಗೀತ ಮಧುರ ಸೌಂದರ್ಯ, ಲಯಬದ್ಧ ಮತ್ತು ಭಕ್ತಿಯನ್ನು ಮೇಳೈಸಿತು. ಈ ಮೂಲಕ ಕರ್ನಾಟಕ ಸಂಗೀತ ಮತ್ತಷ್ಟು ಹೆಸರುವಾಸಿಯಾಯಿತು ಎಂದು ತಿಳಿಸಿದರು.

ಭಾರತ ವಿವಿಧ ಸಂಸ್ಕೃತಿ, ಭಾಷೆ ಮತ್ತು ಸಂಗೀತವನ್ನು ಹೊಂದಿರುವ ಕಲೆಗಳ ತವರೂರು. ಇದನ್ನು ಉಳಿಸಿ ಬೆಳೆಸಬೇಕಾಗಿರುವುದು ಎಲ್ಲರ ಹೊಣೆ ಎಂದು ಹೇಳಿದರು. 'ಏಕ್ ಭಾರತ್ ವಿಕಸಿತ್ ಭಾರತ್' ಮಾತಿನ ಅರ್ಥ ಭಾರತದ ಪ್ರತಿಯೊಂದು ರಾಜ್ಯ ನಾನಾ ಭಾಷೆ ಮತ್ತು ಸಂಸ್ಕೃತಿ ಹೊಂದಿದ್ದರೂ ಎಲ್ಲರೂ ಪ್ರತಿನಿಧಿಸುವುದು ಭಾರತವನ್ನು. ಅದರಲ್ಲೂ ದಕ್ಷಿಣ ಭಾರತದ ರಾಜ್ಯಗಳ ಭಾಷೆ ಮತ್ತು ಸಂಸ್ಕೃತಿ ವಿಭಿನ್ನವಾದರೂ ವಿವಿಧತೆಯಲ್ಲಿ ಏಕತೆ ಸಾರುತ್ತೇವೆ. ಈ ಹಿನ್ನೆಲೆ ಪ್ರತಿಯೊಬ್ಬರು ಭೇದ–ಭಾವ ಬಿಟ್ಟು ತಮ್ಮ ಭಾಷೆ ಮತ್ತು ಸಂಸ್ಕೃತಿ ಉಳಿಸಿ, ಬೆಳೆಸಲು ಕೈ ಜೋಡಿಸಬೇಕು ಎಂದು ನಿರ್ಮಲಾ ಸೀತಾರಾಮನ್ ಸಲಹೆ ನೀಡಿದರು.

ದಕ್ಷಿಣ ಭಾರತದಲ್ಲಿ ಮೈಸೂರು ಸೇರಿದಂತೆ ಕರ್ನಾಟಕದ ಹಲವು ರಾಜ್ಯಗಳು ಜಿಐ ಟ್ಯಾಗ್‌ನ ವಿಭಿನ್ನ ಉತ್ಪನ್ನ ಹೊಂದಿದೆ. ಇದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಒಂದು ಜಿಲ್ಲೆ ಒಂದು ಉತ್ಪನ್ನವನ್ನು ಉತ್ತೇಜಿಸುತ್ತಿದೆ ಎಂದರು. ಪುರಂದರದಾಸರ ರಾಗಿ ಕುರಿತ ಕೀರ್ತನೆಯನ್ನು ಕನ್ನಡದಲ್ಲೇ ಉಲ್ಲೇಖಿಸಿದ ನಿರ್ಮಲಾ ಸೀತಾರಾಮನ್, ಪುರಂದರ ದಾಸರು ಮನೆ ಮನೆಗೆ ಭಿಕ್ಷೆಗೆ ತೆರಳುವ ಸಂದರ್ಭದಲ್ಲಿ ರಚಿಸಿದ ಸ್ವಾಸ್ಥ್ಯ ಸಾರುವ ಗೀತೆಯಲ್ಲಿ ವಿಠಲನನ್ನು ನೆನೆಯುತ್ತಾರೆ. ಇದು ಕನ್ನಡ ಸಂಗೀತ ಲೋಕದಲ್ಲಿ ಮೈಲಿಗಲ್ಲಾಗಿದೆ ಎಂದು ಹೇಳಿದರು.

ಕನಕದಾಸರು, ಹರಿದಾಸರು ಸೇರಿದಂತೆ ಇತರರು ಸಾಹಿತ್ಯದಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಇದರಿಂದಲೇ ದಾಸ ಸಾಹಿತ್ಯ ಇಂದು ಎಲ್ಲಾ ಭಾಷೆ ಹಾಗೂ ಪ್ರದೇಶ ಮೀರಿ ಜನರನ್ನು ತಲುಪುತ್ತಿದೆ ಎಂದು ತಿಳಿಸಿದರು.

ದಾಸ ಸಾಹಿತ್ಯದ ಸಂಗೀತ ಅರಿಯುವುದು ಸುಲಭ. ಅದನ್ನು ಅರ್ಥ ಮಾಡಿಕೊಳ್ಳಲು ಕನ್ನಡ ಭಾಷೆಯ ಪ್ರತಿಯೊಂದು ವ್ಯಾಕರಣವನ್ನು ಅರಿತಿರಬೇಕು ಎಂಬ ಗಡಿ ಇಲ್ಲ. ಸಂಗೀತದ ಮೇಲೆ ಆಸಕ್ತಿ ಮತ್ತು ಭಕ್ತಿ ಇರುವವರಿಗೆ ಇದು ಅರ್ಥವಾಗುತ್ತದೆ. ಅರ್ಥಪೂರ್ಣ ವಿವರಗಳಿರುವ ದಾಸ ಸಾಹಿತ್ಯ ಎಂದೆಂದಿಗೂ ಪ್ರಸ್ತುತವಾಗಿದೆ ಎಂದು ನಿರ್ಮಲಾ ಅಭಿಪ್ರಾಯಪಟ್ಟರು. ಸಮ ಸಮಾಜ ನಿರ್ಮಾಣಕ್ಕೆ ದಾಸರು ಹಾಗೂ ಬಸವಣ್ಣನವರು ಶ್ರಮಿಸಿದರು. ಮೈಸೂರಿನ ಹಲವು ಸಂಗೀತ ದಿಗ್ಗಜರು ವಿಶ್ವಾದ್ಯಂತ ಪ್ರಖ್ಯಾತಿ ಪಡೆದಿದ್ದಾರೆ. ಇಂತಹ ಸಂಗೀತ ಪರಂಪರೆ ಹೊಂದಿರುವ ಮೈಸೂರಿನಲ್ಲಿ ಈ ಕಾರ್ಯಕ್ರಮ ನಡೆಸುತ್ತಿರುವುದು ಹೆಮ್ಮೆಯ ಸಂಗತಿ. ಈ ಕಾರ್ಯಕ್ರಮ ವಿಶ್ವದ ಪ್ರತಿಯೊಬ್ಬರನ್ನು ತಲುಪ ಬೇಕು ಎಂದು ಸೀತಾರಾಮನ್ ಹೇಳಿದರು. ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ವೇದಿಕೆಯಲ್ಲಿದ್ದ ಪ್ರತಿಯೊಬ್ಬ ಗಣ್ಯರಿಗೂ ಪುರಂದರ ದಾಸರ ಭಾವಚಿತ್ರ ಹಾಗೂ ಅತ್ಯಾಕರ್ಷಕ ವೀಣೆಯನ್ನು ನೆನಪಿನ ಕಾಣಿಕೆಯಾಗಿ ನೀಡಲಾಯಿತು.

ಕೇಂದ್ರ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಪ್ರವಾಸೋದ್ಯಮ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಸುಮನ್ ಬಿರ್ಲಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಶುಕ್ರವಾರ ನಡೆದ ಮೈಸೂರು ಸಂಗೀತ ಸುಗಂಧ ಕಾರ್ಯಕ್ರಮವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಉದ್ಘಾಟಿಸಿದರು.

ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ...

ನಿರ್ಮಲಾರ ಸುಶ್ರಾವ್ಯ ರಾಗ...!


ಮೈಸೂರು, ನ.8– ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪುರಂದರ ದಾಸರ ಕೀರ್ತನೆ ಸಾಲುಗಳನ್ನು ಕನ್ನಡದಲ್ಲೇ ಹಾಡುವ ಮೂಲಕ ನೆರೆದಿದ್ದವರ ಗಮನ ಸೆಳೆದರು. **'ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ, ಯೋಗ್ಯರಾಗಿ ಭೋಗ್ಯ ರಾಗಿ ಭಾಗ್ಯವಂತರಾಗಿ ನೀವು, ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ'** ಪಲ್ಲವಿ ಜೊತೆಗೆ **'ಅನ್ನದಾನವ ಮಾಡುವರಾಗಿ...'** ಹಾಗೂ **'ಗುರು ಕಾರುಣ್ಯವ ಪಡೆದವರಾಗಿ...'** ಚರಣಗಳನ್ನು ಹೇಳಿದರದಲ್ಲದೆ, ಒಂದೊಂದು ಸಾಲಿನ ಅರ್ಥವನ್ನೂ ಇಂಗ್ಲಿಷ್‌ನಲ್ಲಿ ವಿವರಿಸಿದರು. ಈ ಕೀರ್ತನೆಯಲ್ಲಿ ರಾಗಿಯ ಮಹತ್ವದ ಜೊತೆಗೆ ಭಿಕ್ಷೆ ನೀಡುವ ವ್ಯಕ್ತಿಯ ಘನತೆಯನ್ನೂ ಮನೋಜ್ಞವಾಗಿ ತಿಳಿಸಲಾಗಿದೆ. ಒಂದೊಂದು ಪದವೂ ಸಂಗೀತದಂತೆ ಹೃದಯ ಮುಟ್ಟುತ್ತವೆ. ಕನ್ನಡದ ಕಂಪು ಮನಸ್ಸು ತುಂಬು ತ್ತದೆ ಎಂದು ಬಣ್ಣಿಸಿದರು. ಕೆಲ ಪದಗಳು ತಪ್ಪಾದರೂ ಕನ್ನಡದಲ್ಲೇ ಕನ್ನಡವನ್ನು ಕೊಂಡಾಡಿದ ನಿರ್ಮಲಾ ಸೀತಾರಾಮನ್ ಅವರನ್ನು ನೆರೆದಿದ್ದವರು ಕರತಾಡನದ ಮೂಲಕ ಪ್ರಶಂಸಿಸಿದರು.

ಮೈಸೂರು ಕರ್ನಾಟಕ ಸಂಗೀತ ಪರಂಪರೆಯ ಗೂಡು

ಕೇಂದ್ರ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ಅಭಿಮತ

ಮೈಸೂರು, ನ.8(ಬಿಎಲ್‌ಯು)– ಮೈಸೂರು ಕರ್ನಾಟಕ ಸಂಗೀತ ಪರಂಪರೆಯ ಗೂಡಾಗಿದ್ದು, ಇಲ್ಲಿನ ಸಂಗೀತ, ನೃತ್ಯ, ಜಾನಪದ ಹಾಗೂ ಪ್ರದರ್ಶಕ ಕಲೆಗಳು ದೇಶ–ವಿದೇಶದ ಪ್ರವಾಸಿಗರನ್ನು ಅತ್ಯಾಕರ್ಷಿಸುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ, ನೈಸರ್ಗಿಕ ಅನಿಲ ಮತ್ತು ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಇಂದು ನಡೆದ ಮೈಸೂರು ಸಂಗೀತ ಸುಗಂಧ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ಸಂಗೀತದ ಪ್ರಖ್ಯಾತಿಯೊಂದಿಗೆ ಹಲವು ಆಕರ್ಷಕ ಪ್ರವಾಸಿ ತಾಣವನ್ನು ಕೂಡ ಹೊಂದಿದೆ ಎಂದರು. ಮೈಸೂರಿಗೆ ಸಂಗೀತ ಸುಗಂಧದ ಜೊತೆಗೆ ಚಂದನದ ಸುಗಂಧ ಹೆಸರಿದೆ. ವಿದೇಶಿ ಪ್ರವಾಸಿಗರನ್ನು ಪ್ರಮುಖವಾಗಿ ಆಕರ್ಷಿಸಲು ಇಲ್ಲಿನ ಪ್ರವಾಸಿ ತಾಣಗಳ ಜೊತೆಗೆ ಸಂಗೀತವು ಬಹಳ ಮುಖ್ಯವಾಗಿದೆ. ಈ ಮೂಲಕ ಸಂಗೀತಕ್ಕಿರುವ ಮಹತ್ವ ಎಂಥದ್ದು ಎಂದು ತಿಳಿಯಬಹುದು ಎಂದು ಸುರೇಶ್ ಗೋಪಿ ಹೇಳಿದರು.



ಕಳೆದ ವರ್ಷ ಆಂಧ್ರ ಪ್ರದೇಶದಲ್ಲಿ ನಡೆದ ಈ ಕಾರ್ಯಕ್ರಮ ಇಂದು ಕರ್ನಾಟಕದ ಮೈಸೂರಿನಲ್ಲಿ ನಡೆಯುತ್ತಿದೆ. ಇದಕ್ಕೆ ಕಾರಣ ಮೈಸೂರಿನ ಸಂಗೀತ ಪರಂಪರೆಯ ಕೊಡುಗೆ ಮುಖ್ಯವಾಗಿದೆ. ಕರ್ನಾಟಕ ದಾಸ ಸಾಹಿತ್ಯ ದೇಶದಲ್ಲಿ ಮಾತ್ರವಲ್ಲದೆ ವಿದೇಶದಲ್ಲಿ ಕೂಡ ಪ್ರಖ್ಯಾತಿ ಪಡೆದಿದೆ ಎಂದು ತಿಳಿಸಿದರು.

ಮಧ್ಯಪ್ರದೇಶ, ಅರುಣಾಚಲ ಪ್ರದೇಶ ಸೇರಿದಂತೆ ಭಾರತದ ಹಲವು ರಾಜ್ಯಗಳು ವಿಶಿಷ್ಟವಾದ ಸಂಗೀತ ಹಬ್ಬಗಳನ್ನು ಆಚರಿಸುತ್ತವೆ. ಅದರಂತೆ ಮೈಸೂರಿನಲ್ಲಿ ಸಂಗೀತಕ್ಕಿರುವ ಮಹತ್ವದ ಕಾರಣ ಇಲ್ಲಿ ಸಂಗೀತದ ಹಬ್ಬ ನಡೆಯುತ್ತಿದೆ ಎಂದು ಅಭಿಪ್ರಾಯಪಟ್ಟರು. ಭಾರತದ ಚಿತ್ರರಂಗದಲ್ಲಿ ಕರ್ನಾಟಕ ಸಂಗೀತ ಮಹತ್ವದ ಕೊಡುಗೆ ನೀಡಿದೆ. ಸಂಗೀತದ ಅರಿವೆ ಇಲ್ಲದ ಎಸ್.ಪಿ.ಬಾಲಸುಬ್ರಹ್ಮಣ್ಯಂ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಅವಿಸ್ಮರಣೀಯ ಸಾಧನೆ ಮಾಡಿದರು. ಅಷ್ಟೆ ಅಲ್ಲದೆ ಎಸ್.ಜಾನಕಿ, ಪಿ.ಸುಶೀಲ, ಸೇರಿದಂತೆ ಹಲವು ಸಂಗೀತ ದಿಗ್ಗಜರು ಕರ್ನಾಟಕ ಸಂಗೀತದಲ್ಲಿ ಪರಿಣಿತರಾಗಿದ್ದರು. ಮಲೆಯಾಳಂ ಸಿನಿಮಾದಲ್ಲಿ ಕೂಡ ಕರ್ನಾಟಕ ಸಂಗೀತ ಒಂದು ಅಲೆಯನ್ನೆ ಸೃಷ್ಟಿಸಿತ್ತು ಎಂದು ಸುರೇಶ್ ಗೋಪಿ ಹೇಳಿದರು. ಈ ವೇಳೆ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಧರ್ಮ ಮತ್ತು ಜಾತಿಯನ್ನು ಮೀರಿದ ಸಂಗೀತ ಜನರ ಮನಸು ತಲುಪುತ್ತದೆ ಎಂದರು.

ವಿಜಯನಗರ ಸಾಮ್ರಾಜ್ಯದಲ್ಲಿ ಸಂಗೀತ–ಕಲೆ ಉತ್ಕೃಷ್ಟವಾಗಿತ್ತು. ಪುರಂದರದಾಸರು ಕರ್ನಾಟಕದಲ್ಲಿ ದಾಸ ಸಾಹಿತ್ಯವನ್ನು ಬೆಳಕಿಗೆ ತಂದರು. ನಂತರ ಕನಕದಾಸರು ಸೇರಿದಂತೆ ಹಲವರು ಕೀರ್ತನೆಗಳನ್ನು ರಚಿಸಿದ ಕಾರಣ ಕರ್ನಾಟಕ ಸಂಗೀತ ಮತ್ತಷ್ಟು ಪ್ರಖ್ಯಾತಿ ಪಡೆಯಿತು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮೈಸೂರು, ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪುರಂದರದಾಸರು 4.75 ಲಕ್ಷ ಕೀರ್ತನೆಗಳನ್ನು ರಚಿಸಿದರು.

ಇದು ಸುಲಭದ ಮಾತಲ್ಲ. ಈ ಮೂಲಕ ಪುರಂದರ ದಾಸರು ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ ಎಂದರು. ಮೈಸೂರಿನಲ್ಲಿ ಸಂಗೀತದ ವಾತಾವರಣವಿದೆ. ಈ ಊರಿನ ಯಾವುದೇ ಸ್ಥಳ ನೋಡಿದರೂ ಅಲ್ಲಿ ಸಂಗೀತದ ಗಂಧವಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆ ಹೆಸರಿನಲ್ಲಿ ಬರೀ ಲೂಟಿ ನಡೆಯುತ್ತಿದೆ...!

ನೀವು ಮಾತ್ರ ಮಹಾರಾಷ್ಟ್ರದಲ್ಲಿ ಗ್ಯಾರಂಟಿ ಘೋಷಿಸಬೇಡಿ; ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ನಾಗರಿಕನ ಕಳಕಳಿಯ ಮನವಿ

ಮೈಸೂರು, ನ.8(ಬಿಎಲ್‌ಯು)– ಕರ್ನಾಟಕದಲ್ಲಿ ಲೂಟಿಯಾಗುತ್ತಿರುವ ಗ್ಯಾರಂಟಿ ಯೋಜನೆಯನ್ನು ಮಹಾರಾಷ್ಟ್ರದ ಚುನಾವಣೆಯಲ್ಲಿ ಘೋಷಣೆ ಮಾಡಬೇಡಿ ಎಂದು ಹೋಟೆಲ್ ಕಾರ್ಮಿಕನೊಬ್ಬ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬಹಿರಂಗವಾಗಿ ಸಲಹೆ ನೀಡಿದ ಘಟನೆ ಇಂದು ನಡೆಯಿತು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಇಂದು ನಡೆದ ಮೈಸೂರು ಸಂಗೀತ ಸುಗಂಧ' ಕಾರ್ಯಕ್ರಮದಲ್ಲಿ ಭಾಷಣ ಮುಗಿಸಿ ನಿರ್ಮಲಾ ಸೀತಾರಾಮನ್ ಆಸೀನರಾದ ವೇಳೆ, ವೇದಿಕೆ ಮುಂಭಾಗ ದಿಢೀರ್ ಆಗಮಿಸಿದ ಮೈಸೂರಿನ ಕೆ.ಆರ್.ನಗರ ತಾಲೂಕು ಸುಗ್ಗನಹಳ್ಳಿಯ ರವಿ ಎಂಬಾತ ಮೊದಲು ಕನ್ನಡದಲ್ಲೆ ತನ್ನ ಪರಿಚಯ ಮಾಡಿಕೊಂಡು, ತರುವಾಯ ಹಿಂದಿ ಭಾಷೆಯಲ್ಲಿ ಕರ್ನಾಟಕದ ಗ್ಯಾರಂಟಿ ಯೋಜನೆಯ ಅವ್ಯವಸ್ಥೆಯನ್ನು ಬಿಚ್ಚಿಟ್ಟರು. ಗ್ಯಾರಂಟಿ ಯೋಜನೆ ಹೆಸರಿನಲ್ಲಿ ಕರ್ನಾಟಕದಲ್ಲಿ ಲೂಟಿಯಾಗುತ್ತಿದೆ. ಯಾವುದೇ ಕಾರಣಕ್ಕೂ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆ ನೀಡುತ್ತೇವೆ ಎಂದು ನೀವು ಘೋಷಣೆ ಮಾಡಬೇಡಿ ಎಂದು ಸಲಹೆ ನೀಡಿದರು. ಈ ವೇಳೆ ಪೊಲೀಸರು ರವಿಯನ್ನು ಬಲವಂತವಾಗಿ ಕರೆದೊಯ್ಯುತ್ತಿದ್ದರು. ತರುವಾಯ ಅವರನ್ನು ಏನು ಮಾಡಬೇಡಿ, ಬಿಟ್ಟು ಬಿಡಿ ಎಂದು ನಿರ್ಮಲಾ ಸೀತಾರಾಮನ್ ಅವರೇ ಪೊಲೀಸರಿಗೆ ಸೂಚಿಸಿದರು. ನಂತರ ಸಭಾಂಗಣದಿಂದ ಹೊರಗೆ ಕರೆದೊಯ್ದು ಪೊಲೀಸರು ಆತನ ಬಗ್ಗೆ ಮಾಹಿತಿ ಪಡೆದು, ಬಿಟ್ಟು ಕಳುಹಿಸಿದರು.


ಸುಗ್ಗನಹಳ್ಳಿ ರವಿ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ವಿರುದ್ಧ ರವಿ ಆರೋಪ ಮಾಡುವಾಗ ವೇದಿಕೆಯಲ್ಲಿದ್ದ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತೀವ್ರ ಮುಜುಗರಕ್ಕೀಡಾದರು.

ಶ್ರೀ ಹೊಂಬಾಳೇಶ್ವರಿ ದೇವಸ್ಥಾನ ಉದ್ಘಾಟನೆ


ಮೈಸೂರು ತಾಲೂಕು ಕೇರ್ಗಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಹೊಂಬಾಳೇಶ್ವರಿ ದೇವಸ್ಥಾನವನ್ನು ಶಾಸಕರಾದ ಜಿ ಟಿ ದೇವೇಗೌಡ, ರವಿಶಂಕರ್, ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಉದ್ಘಾಟಿಸಿದರು ಟ್ರಸ್ಟ್ ಅಧ್ಯಕ್ಷ ಎಂ.ಕೆಂಚಪ್ಪ, ಕೇರ್ಗಳ್ಳಿ ಬಸವೇಗೌಡ, ಪ್ರಭುಸ್ವಾಮಿ, ರವಿ, ರಾಜು, ಸಿದ್ದೇಗೌಡ, ಚಿಕ್ಕಣ್ಣಗೌಡ, ಹುಚ್ಚಪ್ಪ, ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು,ನ.08– ಹೂಟಗಳ್ಳಿ ಉಪವಿಭಾಗ ವ್ಯಾಪ್ತಿಯ 11 ಕೆವಿ ಎನ್.ಜೆವೈ ಯಾಚೇಗೌಡನ ಹಳ್ಳಿ ಮತ್ತು 11 ಕೆ.ವಿ ಎಡ್ಡೆಹಳ್ಳಿ ಲಿಫ್ಟ್‌ಇರಿಗೇಷನ್ ವಿದ್ಯುತ್ ಮಾರ್ಗಗಳಲ್ಲಿ ಲಿಂಕ್ ಲೈನ್ ಕೆಲಸದ ನಿಮಿತ್ತ ನವೆಂಬರ್ 9, 11, 13, 15, 17, 19, 21, 23, 25, 27 ಹಾಗೂ 29 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಗುಂಗ್ರಾಲ್‌ಛತ್ರ, ಯಡ್ಡಹಳ್ಳಿ, ಯಾಚೇಗೌಡನಹಳ್ಳಿ, ಹೊಸಕೋಟೆ, ದಡದಕಲ್ಲಹಳ್ಳಿ, ಛತ್ರದಕೊಪ್ಪಲು, ರಾಮೇನಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು, ಮೀನಾಕ್ಷಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ, ಸಾರ್ವಜನಿಕರು ಸಹಕರಿಸಬೇಕು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜಗತ್ತಿನ ಯಾವ ಶಕ್ತಿಯಿಂದಲೂ ಆರ್ಟಿಕಲ್ 370 ಮರುಸ್ಥಾಪನೆ ಸಾಧ್ಯವಿಲ್ಲ

ಮುಂಬೈ, ನ.8– ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಜಮ್ಮು–ಕಾಶ್ಮೀರದಿಂದ ಭಾರತದ ಸಂವಿಧಾನವನ್ನು ತೆಗೆದು ಹಾಕಲು ಬಯಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದು, ಜಗತ್ತಿನ ಯಾವುದೇ ಶಕ್ತಿಯಿಂದಲೂ ಆರ್ಟಿಕಲ್ 370 ಮರುಸ್ಥಾಪನೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.



ನ. 20 ರಂದು ಮತದಾನ ನಡೆಯಲಿರುವ ಮಹಾರಾಷ್ಟ್ರದ ವಿಧಾನಸಭಾ ಕ್ಷೇತ್ರಗಳಲ್ಲಿ ಇಂದು ಪ್ರಚಾರ ನಡೆಸಿ ಮಾತನಾಡಿದ ಅವರು, ಒಂದು ಜಾತಿಯ ವಿರುದ್ಧ ಮತ್ತೊಂದು ಜಾತಿಯನ್ನು ಎತ್ತಿಕಟ್ಟುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ಆರೋಪಿಸಿದ್ದು, ಜನರಿಗೆ ಒಗ್ಗಟ್ಟಾಗಿರಲು ಕರೆ ನೀಡಿದ್ದಾರೆ.

ಜಮ್ಮು–ಕಾಶ್ಮೀರ ವಿಧಾನಸಭೆಯಲ್ಲಿ 370ನೇ ವಿಧಿಯನ್ನು ವಾಪಸ್ ತರುವ ಕುರಿತು ಹೇಗೆ ನಿರ್ಣಯ ಮಂಡಿಸಲಾಯಿತು ಮತ್ತು ಬಿಜೆಪಿ ಶಾಸಕರು ಪ್ರತಿಭಟಿಸಿದಾಗ ಅವರನ್ನು ಹೊರಹಾಕಲಾಯಿತು ಎಂಬುದನ್ನು ನೀವು ಟಿವಿಯಲ್ಲಿ ನೋಡಿದ್ದೀರಿ. ಇದನ್ನು ದೇಶ ಮತ್ತು ಮಹಾರಾಷ್ಟ್ರ ಅರ್ಥಮಾಡಿಕೊಳ್ಳಬೇಕು ಎಂದು ಮೋದಿ ಹೇಳಿದರು.

ಜಾತಿ ಮತ್ತು ಸಮುದಾಯಗಳನ್ನು ವಿಭಜಿಸುವ ಅಪಾಯಕಾರಿ ಆಟವನ್ನು ಕಾಂಗ್ರೆಸ್ ಆಡುತ್ತಿದೆ ಎಂದು ಆರೋಪಿಸಿರುವ ಅವರು, ಎಸ್‌ಟಿ (ಪರಿಶಿಷ್ಟ ಪಂಗಡಗಳು), ಎಸ್‌ಸಿ (ಪರಿಶಿಷ್ಟ ಜಾತಿಗಳು) ಮತ್ತು ಒಬಿಸಿಗಳು (ಇತರ ಹಿಂದುಳಿದ ವರ್ಗಗಳು) ಒಗ್ಗಟ್ಟಾಗಿ ಉಳಿದರೆ, ಕಾಂಗ್ರೆಸ್ ರಾಜಕೀಯ ಕೊನೆಗೊಳ್ಳುತ್ತದೆ. ಕಾಂಗ್ರೆಸ್ ಒಂದು ಜಾತಿಯನ್ನು ಮತ್ತೊಂದು ಜಾತಿಯ ವಿರುದ್ಧ ಎತ್ತಿಕಟ್ಟಲು ಯತ್ನಿಸುತ್ತಿದೆ ಮತ್ತು ಎಸ್‌ಸಿಯ ಒಗ್ಗಟ್ಟನ್ನು ದುರ್ಬಲಗೊಳಿಸಲು ಬಯಸುತ್ತದೆ ಎಂದು ಆರೋಪಿಸಿದ್ದಾರೆ. ನೆಹರೂ ಕಾಲದಿಂದಲೂ ಕಾಂಗ್ರೆಸ್ ಮತ್ತು ಅವರ ಕುಟುಂಬ ಮೀಸಲಾತಿಯನ್ನು ವಿರೋಧಿಸಿತು ಮತ್ತು ಈಗ ಅವರ ನಾಲ್ಕನೇ ತಲೆಮಾರಿನ 'ಯುವರಾಜ' ಜಾತಿ ವಿಭಜನೆಗಾಗಿ ಕೆಲಸ ಮಾಡುತ್ತಿದ್ದಾರೆ. ಏಕ್ ಹೈ ತೋ ಸೇಫ್ ಹೈ' (ನಾವು ಒಗ್ಗಟ್ಟಾಗಿದ್ದರೆ ನಾವು ಸುರಕ್ಷಿತವಾಗಿರುತ್ತೇವೆ) ಎಂದು ಮೋದಿ ಹೇಳಿದ್ದಾರೆ.

ರಾಜ್ಯ ಮಟ್ಟದ ಕ್ರಿಕೆಟ್‌ನಲ್ಲಿ ಮೈಸೂರು ಚಾಂಪಿಯನ್

ಮೈಸೂರು, ನ.8(ಎಸ್‌ಬಿಡಿ)– ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ಅಂಡರ್ 17 ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ತಂಡ ಚಾಂಪಿಯನ್ ಆಗಿದ್ದು, ತಂಡದಲ್ಲಿದ್ದ ವಿಜಯ ವಿಠ್ಠಲ ಶಾಲೆಯ ಇಬ್ಬರು ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.


ವಿಜಯ ವಿಠ್ಠಲ ಶಾಲೆಯ ನಿಶ್ಚಯ್ ಮತ್ತು ಚಿರು

ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿಗಳಾದ ಆರ್.ನಿಶ್ಚಯ್ ಹಾಗೂ ಬಿ.ಪಿ.ಚಿರು ಕೃಷ್ಣ ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ಗಮನಾರ್ಹ ಪ್ರದರ್ಶನ ನೀಡುವ ಮೂಲಕ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದು, ಜಮ್ಮು–ಕಾಶ್ಮೀರದಲ್ಲಿ ನಡೆಯಲಿರುವ ಪಂದ್ಯಾವಳಿಯಲ್ಲಿ ಕರ್ನಾಟಕ ತಂಡದಲ್ಲಿ ಆಡಲಿದ್ದಾರೆ.

ಅಯೋಧ್ಯೆಯಲ್ಲಿ 121 ಅಡಿ ಎತ್ತರದ ಅಗರಬತ್ತಿ ಬೆಳಗುವ ಮೂಲಕ ಇತಿಹಾಸ ನಿರ್ಮಿಸಿದ ಸೈಕಲ್ ಪ್ಯೂರ್ ಅಗರಬತ್ತಿ

ಮೈಸೂರು, ನ. 8–ಪೂಜಾ ಸಾಮಾಗ್ರಿಗಳನ್ನು ಒದಗಿಸುವ ಭಾರತದ ಪ್ರಮುಖ ಬ್ರಾಂಡ್ ಆಗಿರುವ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ರಘುಕುಲ ಫೌಂಡೇಶನ್ ಸಹಭಾಗಿತ್ವದಲ್ಲಿ ಅಯೋಧ್ಯೆಯ ಭರತಕುಂಡ ಮಹೋತ್ಸವದಲ್ಲಿ 121 ಅಡಿ ಎತ್ತರದ ಬೃಹದಾಕಾರದ ಅಗರುಬತ್ತಿ ಬೆಳಗುವ ಮೂಲಕ ಇತಿಹಾಸ ನಿರ್ಮಿಸಿದೆ. ಆ ಮೂಲಕ ಕನ್ನಡ ಹೆಮ್ಮೆಯ ಅಗರಬತ್ತಿ ಸಂಸ್ಥೆಯು ಅಯೋಧ್ಯೆಯಲ್ಲಿ ಸಂಸ್ಕೃತಿ, ಸಂಪ್ರದಾಯದ ಕಂಪನ್ನು ಹರಡಿದೆ.

ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ ಅಶೋಕ್ ಕುಮಾರ್ ಸೈನಿ ಮತ್ತು ಅಯೋಧ್ಯೆಯ ಕಮಾಂಡೋ ಆಫೀಸರ್ ಅಶುತೋಷ್ ತಿವಾರಿ ಅವರು ಏಳು ದಿನ ನಡೆಯಲಿರುವ ಕಾರ್ಯಕ್ರಮದ ಉದ್ಘಾಟನೆಯನ್ನು ಈ ಅಗರಬತ್ತಿ ಬೆಳಗುವ ಮೂಲಕ ನೆರವೇರಿಸಿದರು. ಈ ವರ್ಷದ ಆರಂಭದಲ್ಲಿ ನಡೆದ ಅಯೋಧ್ಯೆ ರಾಮ ಮಂದಿರದ ಉದ್ಘಾಟನಾ ಸಂದರ್ಭದಲ್ಲಿ ಮಂದಿರದ ಪ್ರಾಣ ಪ್ರತಿಷ್ಠೆ ಸಂಭ್ರಮಾಚರಣೆಗಾಗಿ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ಮೈಸೂರಿನಲ್ಲಿ 111 ಅಡಿ ಎತ್ತರದ ಅಗರಬತ್ತಿಯನ್ನು ರಚಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಆ ಅಗರಬತ್ತಿಯನ್ನು ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಶ್ರೀಮತಿ ಸರಸ್ವತಿ ಬೆಳಗಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅಯೋಧ್ಯೆಯ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಶ್ರೀ ಅಶೋಕ್ ಕುಮಾರ್ ಸೈನಿ, ಭರತಕುಂಡ ಮಹೋತ್ಸವದಲ್ಲಿ ಪಾಲ್ಗೊಂಡಿದ್ದು ಸಂತೋಷ ತಂದಿದೆ. ಸೈಕಲ್ ಪ್ಯೂರ್ ಅಗರಬತ್ತಿ ಮತ್ತು ರಘುಕುಲ ಫೌಂಡೇಶನ್ ಸಹಭಾಗಿತ್ವದಲ್ಲಿ ಸಿದ್ಧಗೊಂಡಿರುವ ಈ 121 ಅಡಿ ಎತ್ತರದ ಅಗರಬತ್ತಿಯು ನಮ್ಮ ಭಕ್ತಿ ಮತ್ತು ಏಕತೆಯ ಸಂಕೇತವಾಗಿದೆ. ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಇಂಥಾ ಮಹತ್ವದ ಕಾರ್ಯಕ್ಕೆ ಜೊತೆಯಾಗಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.



ಸೈಕಲ್ ಪ್ಯೂರ್ ಅಗರಬತ್ತಿಯ ಎಂಡಿ ಅರ್ಜುನ್ ರಂಗಾ ಮಾತನಾಡಿ, ಆಧ್ಯಾತ್ಮಿಕತೆಯನ್ನು ಮೂಲವಾಗಿಟ್ಟುಕೊಂಡು ನಾವು ಕಲಾವಿದರನ್ನು ಬೆಳೆಸುವ, ಜನರ ಬದುಕಿನಲ್ಲಿ ಭರವಸೆ ಮೂಡಿಸುವ ನಿಟ್ಟಿನಲ್ಲಿ ಸಾಗಲು ಬದ್ಧರಾಗಿದ್ದೇವೆ. ಈ 121 ಅಡಿ ಎತ್ತರದ ಅಗರಬತ್ತಿಯು ಪರಿಮಳದ ಮೂಲಕ ಸಂತೋಷವನ್ನು ಒದಗಿಸುವ, ಕರಕುಶಲತೆಯನ್ನು ಸಂಭ್ರಮಿಸುವ, ಬೆಂಬಲ ಹಾಗೂ ಸ್ಫೂರ್ತಿ ಒದಗಿಸುವ ನಮ್ಮ ಪ್ರಯತ್ನದ ಭಾಗವಾಗಿ ಮೂಡಿ ಬಂದಿದೆ ಎಂದು ಹೇಳಿದರು. 121 ಅಡಿ ಎತ್ತರದ ಅಗರಬತ್ತಿಯನ್ನು 18 ಮಂದಿಯ ತಂಡವು 23 ದಿನಗಳ ಕಾಲ ಶ್ರಮವಹಿಸಿ ತಯಾರಿಸಿದೆ. ಈ ಅರಬತ್ತಿಯನ್ನು ಜೇನುತುಪ್ಪ, ಕೊನ್ನೇರಿ ಗೆಡ್ಡೆ, ತುಪ್ಪ, ಶ್ರೀಗಂಧದ ಪುಡಿ, ಗುಗ್ಗುಲ, ಅಗರು, ಸಾಂಬ್ರಾಣಿ, ದೇವದಾರು, ಲೋಬನ ಮತ್ತು ಬಿಳಿ ಸಾಸಿವೆ ಜೊತೆಗೆ ಇದ್ದಿಲು, ಜಿಗಟ್ ಮತ್ತು ಬೆಲ್ಲ ಮುಂತಾದ ಅಂಶಗಳನ್ನು ಬಳಸಿ ತಯಾರಿಸಲಾಗಿದ್ದು, ಸೈಕಲ್ ಪ್ಯೂರ್ ಸಂಸ್ಥೆಯ ವಿಶೇಷ ತಂಡವು ರೂಪಿಸಿರುವ ವಿಶಿಷ್ಟ ತಂತ್ರಜ್ಞಾನವನ್ನು ಬಳಸಿ ಸಿದ್ಧಗೊಳಿಸಲಾಗಿದೆ.

ಮೈಸೂರು ಮಿತ್ರ ಶನಿವಾರ 9 ನವೆಂಬರ್ 2024

ನಾನು ನಟ ದರ್ಶನ್ ಪರ, ತಾಯಿಯಾಗಿ ಏನು ಹೇಳಬೇಕೋ ಅದನ್ನು ವೈಯಕ್ತಿಕವಾಗಿ ಹೇಳುವೆ

ಚನ್ನಪಟ್ಟಣ ಉಪಚುನಾವಣಾ ಪ್ರಚಾರಕ್ಕೆ ಕರೆದಿಲ್ಲ, ಬಿಜೆಪಿಯಲ್ಲಿ ನಾನು ಸೈಡ್‌ಲೈನ್ ಆಗಿಲ್ಲ: ಸುಮಲತಾ ಸ್ಪಷ್ಟನೆ



ಮಂಡ್ಯ, ಅ.8– ನಟ ದರ್ಶನ್ ವಿಚಾರದಲ್ಲಿ ಎಲ್ಲರಿಗೂ ನೋವಾಗಿದ್ದು, ಅದರಂತೆ ನನಗೂ ಸಹ ನೋವಿದೆ. ದರ್ಶನ್ ಬಗ್ಗೆ ನನಗೆ ಗೊತ್ತು. ಒಳ್ಳೇ ಗುಣಗಳು ಇರುವ ವ್ಯಕ್ತಿಯಾಗಿರುವ ಅವರನ್ನು ದೇವರು ಕಾಪಾಡುತ್ತಾನೆ. ದರ್ಶನ್ ಕೂಡ ನೋವು ಅನುಭವಿಸುತ್ತಿದ್ದು, ತಾಯಿಯಾಗಿ ನಾನು ಏನು ಹೇಳಬೇಕೋ ಅದನ್ನು ವೈಯಕ್ತಿಕವಾಗಿ ಹೇಳುತ್ತೇನೆ. ನಾನು ದರ್ಶನ್ ಪರ ಇದ್ದೇನೆ ಎಂದು ಮಾಜಿ ಸಂಸದೆ ಸುಮಲತಾ ಸ್ಪಷ್ಟಪಡಿಸಿದರು.

ಶುಕ್ರವಾರ ಮಂಡ್ಯದ ಚಾಮುಂಡೇಶ್ವರಿ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ದರ್ಶನ್ ಅವರ ಪತ್ನಿ ಜೊತೆ ನಿರಂತರ ಸಂಪರ್ಕದಲ್ಲಿ ಇದ್ದೇನೆ. ದರ್ಶನ್ ಅವರಿಗೆ ಇನ್ನು ಚಿಕಿತ್ಸೆ ಅವಶ್ಯಕತೆ ಇದೆ. ಅವರು ಆರೋಗ್ಯ ಸರಿಪಡಿಸಿಕೊಳ್ಳಬೇಕು. ಸದ್ಯ ಜಾಮೀನಿನ ಮೇಲೆ ಬಂದಿರುವ ಅವರು, ಕಾನೂನು ತೊಡಕು ಸರಿಪಡಿಸಿಕೊಂಡು ಹೊರಗಡೆ ಬರುತ್ತಾರೆ ಎಂಬ ಆಸೆ ಇಟ್ಟುಕೊಂಡಿದ್ದೇವೆ. ಅದು ಶೀಘ್ರವೇ ನಿಜವಾಗಲಿ ಎಂದರು.

ದರ್ಶನ್ ವಿಚಾರದಲ್ಲಿ ನನ್ನ ಸ್ಟಾಂಡ್ ಏನು ಎಂಬುದನ್ನು ಈಗಾಗಲೇ ತಿಳಿಸಿದ್ದೇನೆ. ನಮ್ಮ ಸಂಬಂಧ ಏನಿದೆ ಅದು ಹಾಗೆ ಇರಲಿದ್ದು, ನನ್ನ ಜೀವನ ಇರುವವರೆಗೂ ದರ್ಶನ್ ನನ್ನ ಮಗನೇ ಆಗಿರುತ್ತಾರೆ. ಅವರು ನಿರಾಪರಾಧಿ ಅಂತಾ ಸಾಬೀತು ಆಗಲಿ ಎಂಬುದು ನನ್ನ ಆಸೆ. ಅವರ ವಕೀಲರು ನಿಜಾಂಶವನ್ನು ಬಯಲಿಗೆಳೆಯುತ್ತಾರೆ. ನಾನು ಅದನ್ನೇ ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದರ್ಶನ್ ಹೊರಗೆ ಬರಬೇಕೆಂಬುದೇ ನನ್ನ ಮಹದಾಸೆ ಎಂದು ತಿಳಿಸಿದರು.

ದರ್ಶನ್ ಹೊರಗೆ ಬರಬೇಕೆಂದು ಅವರ ಪತ್ನಿ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದ್ದಾರೆ. ದರ್ಶನ್‌ಗೆ ಸದ್ಯ ಬೆನ್ನು ನೋವು ತುಂಬಾ ಇದೆ. ಸರ್ಜರಿ ಮಾಡಿಸಿ ಕೊಳ್ಳಲು ಅವರಿಗೆ ಇಷ್ಟ ಇಲ್ಲ. ಸರ್ಜರಿ ಮಾಡಿದರೆ ವಿಶ್ರಾಂತಿ ಪಡೆಯಲು ಸಾಕಷ್ಟು ದಿನ ಬೇಕಾಗಿದ್ದು, ದರ್ಶನ್ ಅವರ ಸಿನಿಮಾ ಶೂಟಿಂಗ್ ಕೂಡ ಅರ್ಧಕ್ಕೆ ನಿಂತಿದೆ. ಸಿನಿಮಾ ರಂಗ ಕೂಡ ತುಂಬಾ ನಷ್ಟ ಅನುಭವಿಸುತ್ತಿದ್ದು, ನನ್ನ ಪುತ್ರ ಅಭಿಷೇಕ್, ದರ್ಶನ್‌ರನ್ನು ಜೈಲಿನಲ್ಲಿ ಭೇಟಿ ಮಾಡಿ ಬಂದಿದ್ದಾನೆ. ದರ್ಶನ್ ಈ ವಿಚಾರದಲ್ಲಿ ಗೆದ್ದು ಬರಬೇಕು ಎಂದರು.

ಸೈಡ್‌ಲೈನ್ ಆಗಿಲ್ಲ: ಬಿಜೆಪಿಯಲ್ಲಿ ಸುಮಲತಾ ಸೈಡ್ ಲೈನ್ ಆದ್ರಾ ಎಂಬ ವಿಚಾರದ ಬಗ್ಗೆ ಮಾತನಾಡಿ, ನಾನು ಬಿಜೆಪಿಯಲ್ಲಿ ಸೈಡ್‌ಲೈನ್ ಆಗಿಲ್ಲ ಐದು ವರ್ಷದಲ್ಲಿ ಸಾಕಷ್ಟು ಹಳ್ಳಿಗಳಿಗೆ ಹೋಗಿದ್ದೆ. ಆದ್ದರಿಂದ ಸ್ವಲ್ಪ ವಿಶ್ರಾಂತಿ ಪಡೆಯುತ್ತಿದ್ದೇನೆ. ನರೇಂದ್ರ ಮೋದಿ ಅವರ ಮಾತಿಗೆ ಬೆಲೆಕೊಟ್ಟು ಕ್ಷೇತ್ರ ತ್ಯಾಗ ಮಾಡಿದೆ. ನಾನೆಂದು ಕ್ಷೇತ್ರ ಬಿಡುವುದಿಲ್ಲ. ಮಂಡ್ಯದಲ್ಲೇ ಓಡಾಡಲಿದ್ದು, ಜನವರಿ ತಿಂಗಳಿಂದ ಸಕ್ರೀಯವಾಗಿ ಮಂಡ್ಯದಲ್ಲಿ ಓಡಾಡುತ್ತೇನೆ. ಬಿಜೆಪಿ ಅವರು ನನ್ನನ್ನು ಚುನಾವಣಾ ಪ್ರಚಾರಕ್ಕೆ ಕರೆಯದೇ ಇರುವ ಬಗ್ಗೆ ಅಷ್ಟಾಗಿ ನಾನು ಗಮನ ಕೊಟ್ಟಿಲ್ಲ. ನನ್ನ ಅಗತ್ಯ ಎಲ್ಲಿದೆ ಅಂತಾ ಅನಿಸುತ್ತೆ ಅಲ್ಲಿಗೆ ಕರೆಯುತ್ತಾರೆ ಎಂದು ಸ್ಪಷ್ಟಪಡಿಸಿದರು.

ಮಹದೇವಪುರ, ಚಂದಗಾಲು, ಹೆಬ್ಬಾಡಿಹುಂಡಿ ಬಳಿಕ ಮಂಡ್ಯದ ಮತ್ತೊಂದು ಗ್ರಾಮದಲ್ಲಿ ಮೂರು ಎಕರೆ ಜಾಗ ವಕ್ಫ್ ಬೋರ್ಡ್‌ಗೆ ಖಾತೆ ಆರೋಪಿಸಿ ಸಚ್ಚಿದಾನಂದ ನೇತೃತ್ವದಲ್ಲಿ

ಕೊತ್ತತ್ತಿ ಗ್ರಾಮಸ್ಥರಿಂದ ಬೃಹತ್ ಪ್ರತಿಭಟನೆ



ಜಮೀನು ವಕ್ಫ್ ಬೋರ್ಡ್‌ಗೆ ಖಾತೆಯಾಗಿರುವ ಆರೋಪ ಹಿನ್ನೆಲೆ ಇಂಡವಾಳು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಮಂಡ್ಯ, ಅ.8– ತಾಲೂಕಿನ ಕೊತ್ತತ್ತಿ ಗ್ರಾಮದ ಸರ್ವೆ ನಂಬರ್ 237ರಲ್ಲಿ ಸರಕಾರಿ ಗುಂಡು ತೋಪು ಹಾಗೂ ರೈತರೊಬ್ಬರಿಗೆ ಸೇರಿದ ಒಟ್ಟು ಮೂರು ಎಕರೆ ಜಮೀನು ವಕ್ಫ್ ಬೋರ್ಡ್‌ಗೆ ಖಾತೆಯಾಗಿರುವ ಆರೋಪ ಕೇಳಿ ಬಂದಿದ್ದು, ಈ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ನೇತೃತ್ವದಲ್ಲಿ ಗ್ರಾಮಸ್ಥರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಶ್ರೀರಂಗಪಟ್ಟಣ ತಾಲೂಕು ಮಹದೇವಪುರ, ಚಂದಗಾಲು ಹಾಗೂ ಹೆಬ್ಬಾಡಿಹುಂಡಿ ಗ್ರಾಮದಲ್ಲಿ ದೇವಾಲಯ, ಸರ್ಕಾರಿ ಶಾಲೆ ಹಾಗೂ ಖಾಸಗಿ ಜಮೀನು ವಕ್ಫ್ ಬೋರ್ಡ್‌ಗೆ ಖಾತೆಯಾಗಿದ್ದ ಬೆನ್ನಲ್ಲೇ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕು ಕೊತ್ತತ್ತಿ ಗ್ರಾಮದಲ್ಲೂ ಸರ್ಕಾರಿ ಆಸ್ತಿ ಮತ್ತು ರೈತರ ಖಾಸಗಿ ಕೃಷಿ ಭೂಮಿ ವಕ್ಫ್ ಬೋರ್ಡ್‌ಗೆ ಖಾತೆಯಾಗಿರುವ ಬಗ್ಗೆ ಆರೋಪ ಕೇಳಿ ಬಂದಿದೆ.

ಈ ಹಿನ್ನೆಲೆಯಲ್ಲಿ ಸ್ಥಳೀಯ ಗ್ರಾಮಸ್ಥರು ನೀಡಿದ ಮಾಹಿತಿ ಆಧರಿಸಿ ಸಚ್ಚಿದಾನಂದ ಅವರು ಗ್ರಾಮಕ್ಕೆ ತೆರಳಿ ಗ್ರಾಮದ ರೈತರು ಹಾಗೂ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದರು. ಜೊತೆಗೆ ಇದೆ ವೇಳೆ ವಕ್ಫ್ ಬೋರ್ಡ್‌ಗೆ ಖಾತೆಯಾಗಿದೆ ಎನ್ನಲಾದ ಜಮೀನಿನ ಸ್ಥಳಕ್ಕೂ ತೆರಳಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಗ್ರಾಮದ ಕೆರೆಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿಕೊಂಡು ಕೆಲವು ಮುಸ್ಲಿಂ ವ್ಯಕ್ತಿಗಳು ಸಣ್ಣದಾದ ದರ್ಗಾ ನಿರ್ಮಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ವೆ ನಂಬರ್ 237ರಲ್ಲಿ 3 ಎಕರೆ ಜಮೀನನ್ನು ವಕ್ಫ್ ಬೋರ್ಡ್‌ಗೆ ಅಕ್ರಮವಾಗಿ ಖಾತೆ ಮಾಡಿಸಿಕೊಳ್ಳಲಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದರು.

ಖಾತೆ ನಂಬರ್ 1224ರಲ್ಲಿ ಒಂದು ಎಕರೆ ಸರಕಾರಿ ಗುಂಪುತೋಪು, ಖಾತೆ ನಂಬರ್ 774ರಲ್ಲಿ ಕೆ.ಪಿಸೋಮಶೇಖರ್ ಬಿನ್ ಪುಟ್ಟೇಗೌಡ ಅವರಿಗೆ ಸೇರಿದ ಎರಡು ಎಕರೆ ಸಂಪೂರ್ಣ ಜಮೀನು ವಕ್ಫ್ ಬೋರ್ಡ್‌ಗೆ ಖಾತೆಯಾಗಿದೆ. ನೂರಾರು ವರ್ಷಗಳಿಂದಲೂ ಈ ಜಾಗ ಸೋಮಶೇಖರ್ ಅವರಿಗೆ ಪಿತ್ರಾರ್ಜಿತ ಆಸ್ತಿಯಾಗಿ ಬಂದಿದೆ. ಜೊತೆಗೆ ಆರು ವರ್ಷಗಳ ಹಿಂದೆಯೇ ರಚನೆಯಾಗಿರುವ ಈ ಗ್ರಾಮದಲ್ಲಿ ಶ್ರೀಭ್ಯಾಲಕಮ್ಮ ದೇವಿ ದೇವಾಲಯವಿದೆ. ಹೀಗಿರುವಾಗ ಈ ಜಾಗವು ವಕ್ಫ್ ಬೋರ್ಡ್‌ಗೆ ಖಾತೆಯಾಗಿದ್ದಾದರೂ ಹೇಗೆ ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ರೈತರು ಭ್ಯಾಲಕಮ್ಮ ದೇವಾಲಯದ ಆವರಣದಲ್ಲಿ ಜಮಾವಣೆಗೊಂಡು ಪ್ರತಿಭಟನೆ ನಡೆಸಿದರು. ಅವರಿಗೆ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಅವರು ಬೆಂಬಲ ಸೂಚಿಸಿ ಪ್ರತಿಭಟನೆಯಲ್ಲಿ ಭಾಗಿಯಾದರು. ಇದೇ ಸಂದರ್ಭದಲ್ಲಿ ಸಚ್ಚಿದಾನಂದ ಅವರು ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ಫೋನ್ ಮಾಡಿ ಸರ್ಕಾರಿ ಜಾಗ ಹಾಗೂ ರೈತರ ಖಾಸಗಿ ಜಮೀನು ಅತಿಕ್ರಮವಾಗಿ ವಕ್ಫ್ ಬೋರ್ಡ್‌ಗೆ ಖಾತೆಯಾಗಿರುವುದನ್ನು ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕುಮಾರ ಅವರು, ಈ ವಿಷಯ ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ. ಬಗ್ಗೆ ಪರಿಶೀಲನೆ ನಡೆಸಿ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಆಗ ಸಚ್ಚಿದಾನಂದ ಅವರು, ಗ್ರಾಮಕ್ಕೆ ಖುದ್ದಾಗಿ ನೀವೇ ಉಪವಿಭಾಗಾಧಿಕಾರಿ, ತಹಸೀಲ್ದಾರ್ ವಿ., ಆರ್‌ಐ ಹಾಗೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಸಮಾಲೋಚನೆ ನಡೆಸಿ ಸಮಸ್ಯೆಯನ್ನು ಬಗೆಹರಿಸಿಕೊಡಬೇಕು. ಗ್ರಾಮಸ್ಥರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡಬೇಕೆಂದು ಮನವಿ ಮಾಡಿದರು. ಇದಕ್ಕೆ ಜಿಲ್ಲಾಧಿಕಾರಿ ಒಪ್ಪಿಗೆ ನೀಡಿದರು.

ಈ ವಿಚಾರವನ್ನು ಗ್ರಾಮಸ್ಥರಿಗೆ ತಿಳಿಸಿದ ಸಚ್ಚಿದಾನಂದ ಅವರು, ಚುನಾವಣೆ ಸಂದರ್ಭದಲ್ಲಿ ಮಾತ್ರ ರಾಜಕಾರಣ ಮಾಡೋಣ. ಉಳಿದಂತೆ ಯಾವುದೇ ರಾಜಕೀಯ ಬೇಡ. ಗ್ರಾಮದ ರೈತ ಸೋಮಶೇಖರ್ ಹಾಗೂ ಗ್ರಾಮಕ್ಕೆ ಆಗಿರುವ ಅನ್ಯಾಯದ ಬಗ್ಗೆ ಈಗ ಎಲ್ಲರೂ ಒಟ್ಟಾಗಿ. ಪಕ್ಷಾತೀತ, ಜಾತ್ಯಾತೀತವಾಗಿ ಒಂದಾಗಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಮೀನು ಮಾಲೀಕ ಸೋಮಶೇಖರ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಯೋಗೇಶ್, ಗ್ರಾಪಂ ಮಾಜಿ ಅಧ್ಯಕ್ಷ ಜವರೇಗೌಡ, ಸದಸ್ಯ ಚೇತನ್, ಉದ್ಯಮಿ ಮಹೇಶ್, ಭಾಸ್ಕರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಬೇವಿನಹಳ್ಳಿ ಮಹೇಶ್, ಸುಖೇಂದ್ರ, ಪ್ರದೀಪ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ನೂತನ ಕನ್ವೆನ್ಷನ್ ಹಾಲ್ ಉದ್ಘಾಟಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ



ರುತ್ವಿ ಅಕ್ಷಯ್ ಕನ್ವೆನ್‌ಷನ್ ಹಾಲ್‌ನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಶುಕ್ರವಾರ ಲೋಕಾರ್ಪಣೆಗೊಳಿಸಿದರು. ಸಿ.ಎಸ್.ಪುಟ್ಟರಾಜು, ಚಲುವರಾಜ್ ಇದ್ದಾರೆ.

ಪಾಂಡವಪುರ, ನ.8– ತಾಲೂಕಿನ ಎಲೆಕೆರೆ ಹ್ಯಾಂಡ್ ಪೋಸ್ಟ್‌ನಲ್ಲಿ ಜೆಡಿಎಸ್ ಮುಖಂಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಚಲುವರಾಜು, ಸಿವಿಲ್ ಎಂಜಿನಿಯರ್ ಅಕ್ಷಯ್ ಅವರು ಹೊಸದಾಗಿ ನಿರ್ಮಿಸಿರುವ ರುತ್ವಿ ಅಕ್ಷಯ್ ಕನ್ವೆನ್‌ಷನ್ ಹಾಲ್ ಅನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಶುಕ್ರವಾರ ಲೋಕಾರ್ಪಣೆಗೊಳಿಸಿದರು.

ಬೆಳಗ್ಗೆ 10 ಗಂಟೆಗೆ ಆಗಮಿಸಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಮೊದಲು ಕಲ್ಯಾಣ ಮಂಟಪದ ಆವರಣದಲ್ಲಿ ನಿರ್ಮಿಸಿರುವ ಶ್ರೀ ಗಣಪತಿ ದೇವಸ್ಥಾನ ಹಾಗೂ ಕಲ್ಯಾಣಿ ಕೊಳವನ್ನು ಉದ್ಘಾಟಿಸಿದರು. ಬಳಿಕ ರುತ್ವಿ ಅಕ್ಷಯ್ ಕನ್ವೆನ್‌ಷನ್ ಹಾಲ್ ಅನ್ನು ಉದ್ಘಾಟಿಸಿದರು. ಬಳಿಕ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವರಿಗೆ ಪೂಜೆ ಸಲ್ಲಿಸಿದರು.

ಕಲ್ಯಾಣ ಮಂಟಪದ ಆವರಣದಲ್ಲಿ ಅಭಿಮಾನದಿಂದ ನಿರ್ಮಿಸಿರುವ ತಮ್ಮ ಪ್ರತಿಮೆಯನ್ನು ಕಂಡ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಅಭಿಮಾನ ವ್ಯಕ್ತಪಡಿಸಿದರು. ಬಳಿಕ ಮಾತನಾಡಿದ ಎಚ್.ಡಿ.ದೇವೇಗೌಡ, ಎಲೆಕೆರೆ ಹ್ಯಾಂಡ್ ಪೋಸ್ಟ್‌ನಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಚಲುವರಾಜು ಅವರು ವ್ಯವಸ್ಥಿತವಾದ ಕಲ್ಯಾಣ ಮಂಟಪ ನಿರ್ಮಿಸಿದ್ದಾರೆ. ಅಲ್ಲದೆ ಆವರಣದಲ್ಲಿಯೇ ಸ್ಫೂರ್ತಿದಾಯಕವಾಗಿ ನನ್ನ ಪ್ರತಿಮೆಯನ್ನು ನಿರ್ಮಿಸುವ ಮೂಲಕ ಅಭಿಮಾನ ಮೆರೆದಿದ್ದಾರೆ. ಅವರ ಅಭಿಮಾನ, ಪ್ರೀತಿಗೆ ನಾನು ಚಿರ ಋಣಿಯಾಗಿದ್ದೇನೆ ಎಂದರು. ಇದೇ ವೇಳೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಜೆಡಿಎಸ್ ಮುಖಂಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಚಲುವರಾಜು, ಸಿವಿಲ್ ಎಂಜಿನಿಯರ್ ಅಕ್ಷಯ್ ದಂಪತಿ ಅಭಿನಂದಿಸಿದರು.

ಸಂದರ್ಭದಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಜೆಡಿಎಸ್ ಮುಖಂಡ, ಜೆಡಿಎಸ್ ಅಧ್ಯಕ್ಷ ಎಸ್.ಎ. ಮಲ್ಲೇಶ್, ಗುರುಸ್ವಾಮಿ, ವಿ.ಎಸ್. ನಿಂಗೇಗೌಡ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ಪರಿಹಾರ ವಿತರಿಸಿದ ಕೃಷಿ ಸಚಿವ ಚೆಲುವರಾಯಸ್ವಾಮಿ

ನಾಗಮಂಗಲ, ನ.8– ತಾಲೂಕಿನ ಬಿಂಡಿಗನವಿಲೆ ಹೋಬಳಿ ಅಣೆ ಚನ್ನಾಪುರ ಗ್ರಾಮದ ಬಳಿ ಭಾರೀ ಮಳೆಯಿಂದಾಗಿ ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿದ್ದ ಕಂಬದಹಳ್ಳಿ ಗ್ರಾಮದ ರಾಮಚಂದ್ರಗೌಡರ ಕುಟುಂಬಕ್ಕೆ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಪರಿಹಾರ ವಿತರಿಸಿದರು.

ಮೃತರ ಮನೆಗೆ ಭೇಟಿ ನೀಡಿ ಸ್ವಾಂತನ ಹೇಳಿ ಸರ್ಕಾರದಿಂದ ಪರಿಹಾರವನ್ನು ಕೊಡಿಸುವುದಾಗಿ ಸಚಿವರು ಭರವಸೆ ನೀಡಿದ್ದರು. ಸರ್ಕಾರದ ವತಿಯಿಂದ ಮೃತ ರಾಮಚಂದ್ರಗೌಡರ ಪತ್ನಿ ಭಾಗ್ಯಮ್ಮ ಅವರಿಗೆ ಸಚಿವ ಚೆಲುವರಾಯಸ್ವಾಮಿ ಸರ್ಕಾರದ ವತಿಯಿಂದ 5 ಲಕ್ಷ ಪರಿಹಾರ ಮುಂಜೂರಾತಿ ಪತ್ರವನ್ನು ಶುಕ್ರವಾರ ಬೆಳಗ್ಗೆ ವಿತರಿಸಿದರು. ಸ್ಥಳದಲ್ಲಿ ನಾಗಮಂಗಲ ತಹಸಿಲ್ದಾರ್ ಡಾ. ಆದರ್ಶ.ಜಿ ಹಾಗೂ ಕಂದಾಯ ಇಲಾಖೆ ಅಧಿಕಾರಿ ಮಧುಸೂದನ್ ಉಪಸ್ಥಿತರಿದ್ದರು.

ಮೇಲುಕೋಟೆ ಚೆಲುವನಿಗೆ ರಾಜಮುಡಿ ಕಿರೀಟಧಾರಣೆ



ಮೇಲುಕೋಟೆ, ನ.8– ಚೆಲುವನಾರಾಯಣ ಸ್ವಾಮಿಗೆ ನಾಳೆ (ನ.9) ರಾತ್ರಿ ವಜ್ರಖಚಿತ ರಾಜಮುಡಿ ಕಿರೀಟಧಾರಣ ಮಹೋತ್ಸವ ನಡೆಯಲಿದೆ. ಕಾರ್ತಿಕ ಮಾಸದ ರಾಜಮುಡಿ ಬ್ರಹ್ಮೋತ್ಸವದ 4ನೇ ತಿರುನಾಳ್ ದಿನವಾದ ಶನಿವಾರ ರಾತ್ರಿ ಮೈಸೂರು ಮಹಾರಾಜರಾಗಿದ್ದ ರಾಜ ಒಡೆಯರ್ ಭಕ್ತಿಪೂರ್ವಕವಾಗಿ ಸಮರ್ಪಿಸಿದ ಸಿಂಹ ಲಾಂಛನವಿರುವ ಅಪರೂಪದ ವಜ್ರಗಳಿಂದ ಕೂಡಿದ ರಾಜಮುಡಿ ಕಿರೀಟ, ರಾಜ ಲಾಂಛನ ಗಂಡುಭೇರುಂಡ ಪದಕ, ಹನ್ನೆರಡು ಆಳ್ವಾರುಗಳನ್ನು ಒಳಗೊಂಡ ಪದ್ಮಪೀಠ, ಶಂಕ, ಚಕ್ರ, ಗದೆ, ಶಿರಚ್ಚಕ್ರ, ಅಭಯಹಸ್ತ, ಪಾದಜೋಡಿ ಕರ್ಣಕುಂಡಲ ಸೇರಿದಂತೆ 16 ಬಗೆಯ ವಜ್ರ, ಪಚ್ಚೆ, ರತ್ನ ಮುತ್ತುಗಳಿಂದ ಕೂಡಿದ ಐತಿಹಾಸಿಕ ಆಭರಣಗಳನ್ನು ತೊಡಿಸಿ ಉತ್ಸವ ನೆರವೇರಿಸಲಾಗುತ್ತದೆ.

ಸರಳ ಜಾತ್ರಾ ಮಹೋತ್ಸವ: ಮೈಸೂರು ಅರಸರ ಕುಲದೈವ ಮೇಲುಕೋಟೆ ಚೆಲುವನಾರಾಯಣಸ್ವಾಮಿಗೆ 600 ವರ್ಷಗಳಿಂದ ನಡೆಯುತ್ತಾ ಬಂದಿರುವ ರಾಜಮುಡಿ ಬ್ರಹ್ಮೋತ್ಸವಕ್ಕೆ ಮೇಲುಕೋಟೆ ದೇವಾಲಯದಲ್ಲಿ ಅಗತ್ಯ ಅನುದಾನವೇ ಇಲ್ಲ. ಕಾರ್ಯನಿರ್ವಾಹಕ ಅಧಿಕಾರಿಗಳು ಉತ್ಸವದ ಆಕರ್ಷಣೆ ಹೆಚ್ಚಿಸಿ ಭಕ್ತರನ್ನು ಆಕರ್ಷಿಸಲು ಕನಿಷ್ಠ ವ್ಯವಸ್ಥೆಗಾದರೂ ಅಗತ್ಯ ಅನುದಾನ ಕೋರಿ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿ ಧಾರ್ಮಿಕದತ್ತಿ ಇಲಾಖೆಯಿಂದ ಅನುಮೋದನೆ ಪಡೆಯದೆ ಮತ್ತು ದಾನಿಗಳಿಗೂ ಅವಕಾಶನೀಡದ ಕಾರಣ ಮಹಾರಾಜರ ಸಂಕಲ್ಪದ ಹತ್ತುದಿನಗಳ ರಾಜಮುಡಿ ಬ್ರಹ್ಮೋತ್ಸವ ಅತ್ಯಂತ ಸರಳ ಹಾಗೂ ಸಾಂಕೇತಿಕವಾಗಿ ನಡೆಯುತ್ತಿದೆ. ಪ್ರಚಾರದ ಕೊರತೆಯಿಂದಾಗಿ ಉತ್ಸವದಲ್ಲಿ ಪಾಲ್ಗೊಳ್ಳುವ ಭಕ್ತರ ಸಂಖ್ಯೆಯೂ ಸಹ ತೀರ ವಿರಳವಾಗಿರುತ್ತದೆ.

ಒಂದನೇ ಪುಟದಿಂದ

ಲೋಕಾರ್ಪಣೆ

ತಾರಾಯುವಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನಗಳೊಂದಿಗೆ ನಿರ್ಮಿಸಲಾಗುತ್ತಿದೆ. ಜಪಾನ್ ಹಾಗೂ ಫ್ರಾನ್ಸ್‌ಗಳಿಂದ ಅಗತ್ಯ ಬಿಡಿಭಾಗಗಳನ್ನು ತರಿಸಿಕೊಳ್ಳಲಾಗಿದೆ. 8ಕೆ ರೆಸಲ್ಯೂಶನ್ (8 ಸಾವಿರ ಪಿಕ್ಸೆಲ್ ಅಗಲ) ಹೊಂದಿರುವ ಅತ್ಯಾಧುನಿಕ 15 ಮೀಟರ್ ಎಲ್‌ಇಡಿ ಗುಮ್ಮಟದ ಮೂಲಕ ಆಗಸವನ್ನು ವೀಕ್ಷಿಸಬಹುದಾಗಿದೆ. ಯೂರೋಪ್ ನಲ್ಲಿ ಇದೇ ಮಾದರಿಯ ಎರಡು ತಾರಾಲಯ ಕಾಮಗಾರಿ ನಡೆಯುತ್ತಿದ್ದು, ಅವುಗಳಿಗಿಂತ ಮೊದಲು ನಮ್ಮ ಮೈಸೂರಿನ ತಾರಾಲಯದ ಕಾಮಗಾರಿ ಪೂರ್ಣಗೊಳ್ಳಲಿದೆ. ಹಾಗಾಗಿ ಇದು ವಿಶ್ವದ ಮೊದಲ ಗುಮ್ಮಟ ಮಾದರಿ ತಾರಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯ ನಿರ್ದೇಶಕಿ ಪ್ರೊ.ಅನ್ನಪೂರ್ಣಿ ಸುಬ್ರಹ್ಮಣಿ ನೇತೃತ್ವದ ತಂಡ ಶ್ರಮಿಸುತ್ತಿದ್ದು, ಇದರಲ್ಲಿ ನನ್ನದು ಸಣ್ಣ ಪಾತ್ರ ಎಂದರು.

ಕನ್ನಡದಲ್ಲಿ ಮಾಹಿತಿ: ಈ ಅತ್ಯಾಧುನಿಕ ತಾರಾಲಯದಲ್ಲಿ ಸಂಪೂರ್ಣ ವಿವರಣೆಯನ್ನು ಕನ್ನಡದಲ್ಲಿ ಒದಗಿಸಲಾಗುತ್ತದೆ ಎಂಬುದು ಅತ್ಯಂತ ಮಹತ್ವದ ಸಂಗತಿ. ಹೊರಗಿನಿಂದ ಬರುವವರ ಅನುಕೂಲಕ್ಕಾಗಿ ಇಂಗ್ಲಿಷ್‌ನಲ್ಲೂ ವಿವರಣೆ ನೀಡಲಾಗುತ್ತದೆ. ಆಕಾಶ ಹೇಗಿದೆ? ವಿಜ್ಞಾನದ ಮಹತ್ವವೇನು? ಭೌತಶಾಸ್ತ್ರದ ಕಾರ್ಯವೇನು? ಹೀಗೆ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನೂ ಸ್ಥಳೀಯ ಭಾಷೆಯಲ್ಲಿ ಅರಿಯಬಹುದಾಗಿದೆ. ಈಗಾಗಲೇ ತಾರಾಮಂಡಲ ಹಾಗೂ ವಿಜ್ಞಾನದ ಬಗ್ಗೆ ಮಕ್ಕಳಿಗೆ ಕನ್ನಡದಲ್ಲಿ ಮಾಹಿತಿ ನೀಡುವ ಶಿಕ್ಷಕರ ತಂಡ ಜಿಲ್ಲೆಯಲ್ಲಿ ಇದೆ ಎಂದರು.

ಎಲ್ಲರೂ ಭೇಟಿ ನೀಡಿ: ಈ ತಾರಾಲಯ ಪ್ಲೇಬ್ಯಾಕ್ ಎಂಜಿನ್, ತರಗತಿ ಹಾಗೂ ತರಬೇತಿ ಕೊಠಡಿಗಳನ್ನು ಹೊಂದಿರುವುದರಿಂದ ಶಾಲಾ ಶಿಕ್ಷಕರಿಗೆ ತರಬೇತಿ ನೀಡಲು ಅನುಕೂಲಕರವಾಗಿದೆ. ಖಗೋಳ ವಿಜ್ಞಾನದ ವ್ಯವಸ್ಥಿತ ದಾಖಲಾತಿಯೊಂದಿಗೆ ದತ್ತಾಂಶ ಕೋಡಿಂಗ್, ಪ್ರಾಯೋಗಿಕ ಅನುಭವವನ್ನು ಸಂಸ್ಕರಿಸುವ ಕುರಿತು ತರಬೇತಿಯನ್ನೂ ಇಲ್ಲಿ ನೀಡಲಾಗುವುದು. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಚಾಮುಂಡೇಶ್ವರಿ ದರ್ಶನಕ್ಕೆ ಬರುವವರು ಎಲ್ಲರೂ ಒಮ್ಮೆ ತಾರಾಲಯಕ್ಕೂ ಭೇಟಿ ನೀಡಿ ಎಂದು ಮನವಿ ಮಾಡಿದರು. ಇದಕ್ಕೂ ಮುನ್ನ ತಾರಾಲಯ ನಿರ್ಮಾಣದ ಪ್ರಗತಿ ಬಗ್ಗೆ ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯ ನಿರ್ದೇಶಕಿ ಪ್ರೊ.ಅನ್ನಪೂರ್ಣಿ ಸುಬ್ರಹ್ಮಣಿ ಅವರು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ವಿವರಣೆ ನೀಡಿದರು. ಈ ವೇಳೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಮುಂದಿನ ಸಿಎಂ ಡಿಕೆಶಿ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇಂದು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆ ಅಖಾಡದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ ಪರವಾಗಿ ಪ್ರಚಾರಕ್ಕೆ ತೆರಳಿದ್ದರು. ಚನ್ನಪಟ್ಟಣ ಕ್ಷೇತ್ರದ ಚೆಕ್ಕೆರೆಯಲ್ಲಿ ಡಿ.ಕೆ.ಶಿವಕುಮಾರ್ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಿದ್ದಾಗ ಅವರ ಬೆಂಬಲಿಗರು 'ಮುಂದಿನ ಸಿಎಂ ಡಿ.ಕೆ.ಶಿವಕುಮಾರ್' ಎಂದು ಘೋಷಣೆ ಕೂಗಿದ್ದಾರೆ. ಈ ವೇಳೆ ಡಿಕೆ ಶಿವಕುಮಾರ್ ಮಾತು ನಿಲ್ಲಿಸಿ ಬೆಂಬಲಿಗರಿಂದ ದೂರ ನಡೆದರು.

ಆದರೂ ಸುಮ್ಮನಾಗದ ಬೆಂಬಲಿಗರು ಮುಂದಿನ 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಜೈ' ಎಂದು ಘೋಷಣೆ ಕೂಗಿದರು. ಅಲ್ಲದೆ ವೇದಿಕೆ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಭಾಷಣಕ್ಕೆ ಆಹ್ವಾನಿಸಿದ ವೇಳೆ ಕಾಂಗ್ರೆಸ್ ಮುಖಂಡ ಪ್ರಮೋದ್ 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್' ಮಾತನಾಡಲು ಆಗಮಿಸುತ್ತಿದ್ದಾರೆ ಎಂದು ಹೇಳಿದರು.

ಒಕ್ಕಲಿಗ ಕಾಂಗ್ರೆಸ್ ನಾಯಕರು ಚನ್ನಪಟ್ಟಣದಲ್ಲಿ ಯೋಗೇಶ್ವರ್ ಗೆದ್ದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳುತ್ತಿದ್ದಾರೆ. ಚನ್ನಪಟ್ಟಣ ಅಖಾಡದಲ್ಲಿ ಪ್ರಚಾರ ನಡೆಸುತ್ತಿರುವ ಬಹುತೇಕ ಒಕ್ಕಲಿಗ ನಾಯಕರು ಡಿ.ಕೆ. ಶಿವಕುಮಾರ್ ಮುಂದಿನ ಮುಖ್ಯಮಂತ್ರಿಯಾಗುತ್ತಾರೆ. ಇದಕ್ಕೆ ಈ ಉಪಚುನಾವಣೆಯೇ ಭೂಮಿಕೆ ಎನ್ನುತ್ತಿದ್ದಾರೆ.

ಒಟ್ಟಿನಲ್ಲಿ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಲು ಕರ್ನಾಟಕ ಕಾಂಗ್ರೆಸ್‌ನಲ್ಲಿ ಪೈಪೋಟಿ ಜೋರಾಗಿದೆ. ಸರ್ಕಾರ ರಚನೆಯಾದ ಮೊದಲ ದಿನದಿಂದಲೂ ಮುಖ್ಯಮಂತ್ರಿ ಕುರ್ಚಿ ಮೇಲೆ ಹಲವರು ಕಣ್ಣಿಟ್ಟಿದ್ದಾರೆ. ಮುಖ್ಯಮಂತ್ರಿ ಆಗುವ ಅಭಿಲಾಶೆ ಹೊಂದಿದ್ದರುವ ಡಿ.ಕೆ.ಶಿವಕುಮಾರ್ ಇದೇ ಅವಧಿಯಲ್ಲಿ ಸಿಎಂ ಆಗುವ ಕನಸು ಹೊಂದಿದ್ದಾರೆ ಎನ್ನಲಾಗಿದೆ. ಆದರೆ, ಸಿದ್ದರಾಮಯ್ಯ ಅವರ ಮುಂದಿನ ಮೂರೂವರೆ ವರ್ಷ ನಾನೇ ಮುಖ್ಯಮಂತ್ರಿ ಎಂಬರ್ಥದ ಹೇಳಿಕೆ ಪಕ್ಷದಲ್ಲಿ ಭಿನ್ನಾಭಿಪ್ರಾಯ ಮೂಡಿರುವುದಕ್ಕೆ ಸಾಕ್ಷಿಯಾಗಿದೆ.

ಇಂತಹ ಕೆಟ್ಟ ಸರ್ಕಾರ ಕಂಡಿಲ್ಲ

ಕಾಮಗಾರಿಗೆ 24 ಗಂಟೆಯೊಳಗೆ ಎನ್‌ಓಸಿ ಮಾಡಿಸಿದರು. ಆದರೂ ಎಚ್‌ಡಿಕೆಯನ್ನು ಸೋಲಿಸಲಾಗ ಲಿಲ್ಲ, ಮಂಡ್ಯ ಜಿಲ್ಲೆಯ ಮಹಾಜನತೆಯನ್ನು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಮೋದಿಗೆ ಸರಿಸಾಟಿ ಯಾರಿಲ್ಲ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸರಿಸಾಟಿಯಾಗುವ ನಾಯಕ ಇಂಡಿಯಾ ಒಕ್ಕೂಟದಲ್ಲಿ ಒಬ್ಬ ನಾಯಕನಿಲ್ಲ.

ದೇಶದ ಪ್ರಗತಿಗಾಗಿ ಎನ್‌ಡಿಎ ಜತೆಗೆ ಮೈತ್ರಿ ಮಾಡಿಕೊಂಡಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸರಿಸಾಟಿಯಾಗುವ ನಾಯಕ ಇಂಡಿಯಾ ಒಕ್ಕೂಟದಲ್ಲಿ ಒಬ್ಬರು ಇಲ್ಲ. ಮೋದಿಯನ್ನು ಎದುರಿಸುತ್ತೇನೆ ಎನುವ ನಾಯಕನಿಲ್ಲ. ಅಮೆರಿಕಾ ಶ್ರೇಯೋಭಿವೃದ್ಧಿಗಾಗಿ ಟ್ರಂಪ್ ಗೆದ್ದಿದ್ದಾರೆ. ಟ್ರಂಪ್ ಅವರೊಂದಿಗೆ ಮೋದಿ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಇದು ನಮ್ಮ ಶತ್ರುಗಳನ್ನು ಸಮರ್ಥವಾಗಿ ಎದುರಿಸಲು ಬಲಬಂದಂತಾಗಿದೆ ಎಂದರು.

ಚುನಾವಣೆಯ ಪ್ರಚಾರದ ವೇಳೆ ನಿಖಿಲ್ ಕುಮಾರಸ್ವಾಮಿ ಭಾವುಕರಾದ ವಿಚಾರವಾಗಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಎಂದಾದರು ಕಣ್ಣೀರು ಹಾಕಿದ್ದಾರಾ? ರೌಡಿ ಕೊತ್ವಾಲ್ ರಾಮಚಂದ್ರನ ಹತ್ತಿರ ನೂರು ರೂಪಾಯಿಗೆ ಕೆಲಸ ಮಾಡುತ್ತಿದ್ದ ಡಿ.ಕೆ.ಶಿವಕುಮಾರ್ ಇವತ್ತು ನೆಹರು, ಇಂದಿರ ಗಾಂಧಿ ಆಳ್ವಿಕೆ ಮಾಡಿದ ಪಕ್ಷದ ಅಧ್ಯಕ್ಷರಾಗಿದ್ದಾರೆ. ದೇಶಕ್ಕೆ ಅನ್ನ ನೀಡುವ ರೈತನಿಗೆ ನೋವಾದಾಗ ಮರುಗಿ ನಮಗೆ ಕಣ್ಣೀರು ಬರುತ್ತಿದೆ. ರೈತನಿಗೆ ನೋವಾದರೆ ನಮ್ಮ ವಂಶ ಕಣ್ಣೀರು ಹಾಕುತ್ತದೆ. ನಾವು ಬಡತನವನ್ನು ಅನುಭವಿಸಿ ಬಂದಿದ್ದೇವೆ, ನಮಗೆ ಬಡವರ ಬಗ್ಗೆ ನೋವಿದೆ. ಕಣ್ಣೀರು ಹಾಕುವುದು ನಮ್ಮ ತಂದೆಯಿಂದಲೇ ಬಂದಿದೆ. ಡಿ.ಕೆ. ಶಿವಕುಮಾರ್ ಆರು ತಿಂಗಳಿಂದ ನಾನೇ ಅಭ್ಯರ್ಥಿ ಎಂದು ಓಡಾಡುತ್ತಿದ್ದರು. ಆದರೆ ಆಗಲಿಲ್ಲ ಅವರ ತಲೆಯಲ್ಲಿ ಇನ್ನೇನಿದೆಯೋ ಎಂದು ಹರಿಹಾಯ್ದರು.

ಸಿಎಸ್‌ಪಿ ಉತ್ತಮ ಸಂಘಟಕ: ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉತ್ತಮ ಸಂಘಟಕ, ಹೋರಾಟಗಾರ, ಹಿಡಿದ ಕೆಲಸವನ್ನು ಬಿಡದೆ ಮಾಡುವ ಛಲಗಾರ, ಜಿಲ್ಲೆಯಲ್ಲಿ ಪಕ್ಷದ ಅಸ್ತಿತ್ವವನ್ನು ಉಳಿಸಲು ಶಕ್ತಿಮೀರಿ ಹೋರಾಟ ಮಾಡುತ್ತಿರುವ ಹಲವು ನಾಯಕರಲ್ಲಿ ಸಿ.ಎಸ್.ಪುಟ್ಟರಾಜು ಅವರು ಒಬ್ಬರು, ಒಂದು ನಿಮಿಷವು ವಿಶ್ರಾಂತಿ ಪಡೆಯುವುದಿಲ್ಲ. ಸಿ.ಎಸ್. ಪುಟ್ಟರಾಜು ಅವರು ಇಷ್ಟೊಂದು ದೊಡ್ಡ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಲು ಅವರ ಶ್ರೀಮತಿಯ ಯೋಗ ಹಾಗೂ ಸ್ನೇಹಿತರ ಸಹಕಾರ ಹೆಚ್ಚಾಗಿದೆ ಎಂದರು.

ಮಂಡ್ಯ ಜಿಲ್ಲೆಯ ಜನತೆ ವಿಶೇಷವೇನೆಂದರೆ ಗೆಲ್ಲಿಸಿದರೆ ಏಳು ಕ್ಷೇತ್ರದ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಾರೆ, ಸೋಲಿಸಿದರೆ ಏಳು ಜನರನ್ನು ಸೋಲಿಸುತ್ತಾರೆ. ನಿಖಿಲ್ ಚುನಾವಣೆಯಲ್ಲೂ ಪ್ರಚಾರ ಮಾಡುತ್ತಿದ್ದು, ನಿಖಿಲ್ ಗೆದ್ದೇ ಗೆಲ್ಲುತ್ತಾರೆ. ಮುಂದೆ ಸಿ.ಎಸ್.ಪುಟ್ಟರಾಜು ಚುನಾವಣೆಗೂ ಪ್ರಚಾರ ಮಾಡಲು ಬರುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಹಾಗೂ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಿ.ಎಸ್. ಪುಟ್ಟರಾಜು, ಶಾಸಕ ಹೆಚ್.ಟಿ. ಮಂಜು, ರಾಜ್ಯಸಭಾ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ, ಜಿ.ಪಂ. ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಹಲವರು ಹಾಜರಿದ್ದರು.

ದೇವಸ್ಥಾನದ ಪ್ರಸಾದ

ಇರುವ ಯಾವುದೇ ದೇವಸ್ಥಾನ ಪ್ರಸಾದವನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡಿದರೆ ಮನೆ ಬಾಗಿಲಿಗೆ ಪ್ರಸಾದ ತಂದು ಕೊಡುವ ಯೋಜನೆ ಶೀಘ್ರವೇ ಜಾರಿಗೆ ತರಲು ಚಿಂತನೆ ನಡೆದಿದೆ. ಈ ಕುರಿತಾಗಿ ಅಂಚೆ ಇಲಾಖೆ ಮತ್ತು ಖಾಸಗಿ ಕಂಪನಿಗಳ ಜೊತೆ ಮಾತುಕತೆ ನಡೆಯುತ್ತಿದೆ. ಪ್ರಸಾದಕ್ಕೆ ಎಷ್ಟು ದರ ಇದೆಯೋ ಅದರ ಜೊತೆಗೆ ಡೆಲಿವರಿ ದರ ಸೇರಿಸಿ ಮನೆ ಬಾಗಿಲಿಗೆ ಪ್ರಸಾದ ನೀಡುವ ದರವನ್ನು ನಿಗದಿ ಮಾಡಲಾಗುತ್ತಿದೆ.

ಕರ್ನಾಟಕದ ದತ್ತಿ ಇಲಾಖೆಯ ದೇವಸ್ಥಾನಗಳಲ್ಲಿ ಕಡ್ಡಾಯವಾಗಿ ನಂದಿನಿ ತುಪ್ಪ ಬಳಕೆ ಮಾಡಬೇಕು ಎಂದು ಇತ್ತೀಚೆಗೆ ಆದೇಶ ಹೊರಡಿಸಲಾಗಿತ್ತು. ದೇವಸ್ಥಾನದ ಸೇವೆಗಳಿಗೆ, ದೀಪಗಳಿಗೆ, ಪ್ರಸಾದ ತಯಾರಿಕೆ ಮತ್ತು ದಾಸೋಹ ಭವನದಲ್ಲಿ ಕಡ್ಡಾಯವಾಗಿ ನಂದಿನಿ ತುಪ್ಪ ಬಳಸುವಂತೆ ಸೂಚನೆ ನೀಡಲಾಗಿತ್ತು.

ನ.18ರಂದು ಅರ್ಥಪೂರ್ಣವಾಗಿ ಶ್ರೀ ಕನಕದಾಸ ಜಯಂತಿ ಆಚರಣೆ



ಮೈಸೂರು,ನ.8– ಮೈಸೂರಿನ ಕಲಾಮಂದಿರದಲ್ಲಿ ನ.18ರಂದು ಮಧ್ಯಾಹ್ನ 12.30ಕ್ಕೆ 'ಸಂತ ಕವಿ ಶ್ರೀ ಕನಕದಾಸ ಜಯಂತಿ'ಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿಶಿವರಾಜು ತಿಳಿಸಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಸಂತ ಕವಿ ಶ್ರೀ ಕನಕದಾಸ ಜಯಂತಿಯ ಆಚರಣೆಯ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಡೀ ಜಗತ್ತಿಗೆ ಅವರ ಆದರ್ಶಗಳಿಂದ ಮಾದರಿಯಾಗಿರುವ ಮಹಾನ್ ಚೇತನರಾದ ಕನಕದಾಸರ ಜಯಂತಿಯನ್ನು ರಾಜ್ಯದ ಇತರ ಜಿಲ್ಲೆಗಳಿಗಿಂತ ವಿಜೃಂಭಣೆಯಾಗಿ ಆಚರಿಸುವುದು ನಮ್ಮ ಕರ್ತವ್ಯ ಹಾಗೂ ಪುಣ್ಯದ ಕೆಲಸ ಎಂದರು.

ಸರ್ಕಾರದ ಶಿಷ್ಟಾಚಾರದಂತೆ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಚತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ಕನಕದಾಸ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ, ಮಾಜಿ ಶಾಸಕ ಎಂ. ಕೆ.ಸೋಮಶೇಖರ್ ಮಾತನಾಡಿ, ಹಲವಾರು ವರ್ಷಗಳಿಂದ ಕನಕದಾಸ ಜಯಂತಿಯನ್ನು ಆಚರಿಸಲಾಗುತ್ತಿದೆ. ಅದರಲ್ಲಿಯೂ ಕಳೆದ 10 ವರ್ಷಗಳಿಂದ ಬಹಳ ವಿಜೃಂಭಣೆಯಿಂದ ನಮ್ಮ ಮೈಸೂರು ಜಿಲ್ಲೆಯಲ್ಲಿ ಆಚರಿಸಲಾಗುತ್ತಿದ್ದು, ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಲಾ ತಂಡಗಳಿಂದ ಪ್ರದರ್ಶನ ಹಾಗೂ ಟ್ಯಾಬ್ಲೋಗಳ ಮೆರವಣಿಗೆ ಮಾಡುವ ಮೂಲಕ ಜಯಂತಿ ಮೆರಗನ್ನು ಹೆಚ್ಚಿಸಲಾಗಿದೆ ಎಂದರು.

ಶ್ರೀ ಕನಕದಾಸ ಜಯಂತಿ ನ.18 ಮತ್ತು 19ರಂದು ಕಲಾಮಂದಿರದಲ್ಲಿ ನಡೆಯಲಿದ್ದು, ನ.18ರಂದು ಬೆಳಗ್ಗೆ 9:30 ಗಂಟೆಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಪ್ರಾರಂಭಗೊಳ್ಳಲಿದೆ. ಮೆರವಣಿಗೆಯಲ್ಲಿ 5 ಟ್ಯಾಬ್ಲೋಗಳ ಪ್ರದರ್ಶನ ಸೇರಿದಂತೆ 20 ಕಲಾ ತಂಡಗಳಿಂದ ವಿವಿಧ ಕಲೆಗಳ ಪ್ರದರ್ಶನ ನಡೆಯಲಿದೆ. ನ.19 ರಂದು ಸಂಜೆ ಕಲಾಮಂದಿರದಲ್ಲಿ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳಿಗೆ ಸನ್ಮಾನ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು. ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿ ಯವರು ಸಹಕರಿಸಬೇಕು ಎಂದು ತಿಳಿಸಿದರು.

ಇಂದು, ನಾಳೆ ಕೆ.ಜಿ.ಕೊಪ್ಪಲು ಮಾರಮ್ಮ ವಾರ್ಷಿಕ ಕುಂಭಾಭಿಷೇಕ



ಮೈಸೂರು, ನ.8(ಎಸ್‌ಬಿಡಿ)– ಮೈಸೂರಿನ ಕನ್ನೇಗೌಡನಕೊಪ್ಪಲು ಶ್ರೀ ಮಾರಮ್ಮ ದೇವಾಲಯದ 17ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ ಶನಿವಾರ ಹಾಗೂ ಭಾನುವಾರ ಜರುಗಲಿದೆ.

ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಸಂಸ್ಥಾಪಕರಾದ ಶ್ರೀ ಚಂದ್ರಶೇಖರ ಸ್ವಾಮೀಜಿ, ಶಿರಾದ ಸ್ಪಟಿಕಪುರಿ ಮಹಾಸಂಸ್ಥಾನ ಮಠದ ಶ್ರೀ ನಂಜಾವಧೂತ ಸ್ವಾಮೀಜಿ ಹಾಗೂ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಸಾನಿಧ್ಯದಲ್ಲಿ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನ ಶೈವಾಗಮ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಮಲ್ಲಣ್ಣ ನೇತೃತ್ವದಲ್ಲಿ ಆಗಮ ಹಾಗೂ ವೇದ ವಿದ್ವಾಂಸರು ಕುಂಭಾಭಿಷೇಕ ಕೈಂಕರ್ಯವನ್ನು ನೆರವೇರಿಸಲಿದ್ದಾರೆ. ಶನಿವಾರ(ನ.9) ಸಂಜೆ ಗೋಧೂಳಿ ಲಗ್ನದಲ್ಲಿ ಅನುಜ್ಞೆ, ಅಗ್ರ ತೀರ್ಥ ಸಂಗ್ರಹ ಸಮೇತ ಯಾಗಶಾಲೆ ಪ್ರವೇಶ, ಪ್ರವೇಶ ಬಲಿ, ಗಣಪತಿ ಪೂಜಾ ಪೂರ್ವಕ ಪುಣ್ಯಾಹ, ಪಂಚಗವ್ಯ ಸಾಧನ, ಪ್ರೋಕ್ಷಣೆ, ವಾಸ್ತು ಪೂಜೆ, ಗಣಹೋಮ, ನವಗ್ರಹ ಮೃತ್ಯುಂಜಯ ಪೂಜೆ ಹೋಮ ಹಾಗೂ ಪೂರ್ಣಾಹುತಿ, ಭಾನುವಾರ ಪ್ರಾತಃ ಪುಣ್ಯಾಹ, ಪ್ರಧಾನ ಕಳಸ ಸ್ಥಾಪನೆ, ಪೂಜೆ ಹಾಗೂ ದುರ್ಗಾ ಹೋಮ, ಸಪ್ತಮಾತೃಕಾ ಹೋಮ, ಪೂರ್ಣಾಹುತಿ, ಕಳಾಹೋಮ, ಕುಂಭಾಭಿಷೇಕ ಅಲಂಕಾರ, ಮಹಾ ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ. ಕನ್ನೇಗೌಡನ ಕೊಪ್ಪಲಿನ ಶ್ರೀ ಮಾರಮ್ಮ ದೇವಸ್ಥಾನ ಟ್ರಸ್ಟ್, ಕನ್ನೇಗೌಡನ ಕೊಪ್ಪಲು, ಜಯನಗರ ಚಿನ್ನಗಿರಿಕೊಪ್ಪಲು ಗರಡಿ ಗ್ರಾಮದ ಎಲ್ಲಾ ಯಜಮಾನರು, ಯುವಕರು, ಸಂಘ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು, ಮಹಿಳಾ ಸಂಘದ ಅಧ್ಯಕ್ಷರು, ಸದಸ್ಯರು ಸೇರಿದಂತೆ ಎಲ್ಲಾ ಭಕ್ತಾಧಿಕಾಗಳ ಸಹಕಾರದೊಂದಿಗೆ ನೆರವೇರಲಿರುವ ದೇವಸ್ಥಾನದ ಕುಂಭಾಭಿಷೇಕ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

ಇಂದು ಮೈಸೂರಲ್ಲಿ ಕಾವೇರಿನ ನಗರ ಕ್ಷೇಮಾಭಿವೃದ್ಧಿ ಸಮಿತಿ ಉದ್ಘಾಟನೆ

ಮೈಸೂರು, ನ.8(ಜಿಎ)– ಕಾವೇರಿ ನಗರ ಕ್ಷೇಮಾಭಿವೃದ್ಧಿ ಸಮಿತಿ ಉದ್ಘಾಟನೆ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನ.9ರಂದು ಮಧ್ಯಾಹ್ನ 2ಗಂಟೆಗೆ ಕಾವೇರಿ ನಗರದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಅಧ್ಯಕ್ಷ ಎಂ. ಪುಟ್ಟಸ್ವಾಮಿ ಈ ವಿಷಯ ತಿಳಿಸಿ, ಕಾವೇರಿ ನಗರವು ಅತ್ತ ಗ್ರಾಮವೂ ಅಲ್ಲ, ಇತ್ತ ನಗರ ಪ್ರದೇಶದ ವಾತಾವರಣವೂ ಇಲ್ಲ ಎಂಬ ಪರಿಸ್ಥಿತಿಯಲ್ಲಿದ್ದು, ಮೂಲ ಸೌಕರ್ಯ ವಂಚಿತವಾಗಿರುವ ನಿವಾಸಿಗಳ ಹಿತಾಸಕ್ತಿ ರಕ್ಷಿಸಲು ಕಾವೇರಿ ನಗರ ಕ್ಷೇಮಾಭಿವೃದ್ಧಿ ಸಮಿತಿ ರಚಿಸಿಕೊಳ್ಳಲಾಗಿದೆ. ಇದರ ಉದ್ಘಾಟನೆ ಹಾಗೂ ಕನ್ನಡ ರಾಜ್ಯೋತ್ಸವ ಆಚರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಶಾಸಕ ಶಾಸಕ ತನ್ವೀರ್‌ಸೇಠ್ ಕಾರ್ಯಕ್ರಮ ಉದ್ಘಾಟಿಸುವರು. ಕಾಂಗ್ರೆಸ್ ಮುಖಂಡರಾದ ಮಹಮ್ಮದ್ ಖಲೀಲ್ ಉರ್ ರೆಹಮಾನ್, ಅಕ್ಮಲ್ ಪಾಷ, ಸಯ್ಯದ್ ಇಕ್ಬಾಲ್ ಸೇರಿದಂತೆ ಇನ್ನಿತರರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ನಿಧನ



ದೇವಮ್ಮ

ಮೈಸೂರು, ನ.8– ಮೈಸೂರಿನ ಬಿ.ಎಂ.ಶ್ರೀನಗರ ನಿವಾಸಿ ದೇವಮ್ಮ(84) ಅವರು ಶುಕ್ರವಾರ ನಿಧನರಾದರು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೇಟಗಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಸುಂಧರಾದೇವಿ



ಮೈಸೂರು, ನ.8– ಮಾಜಿ ಮೇಯರ್ ಡಿ.ರಾಮಸ್ವಾಮಿ ಅವರ ಪುತ್ರಿ, ಪಡುವಾರಹಳ್ಳಿ ನಿವಾಸಿ ವಸುಂಧರಾದೇವಿ ಅವರು ಶುಕ್ರವಾರ ಆಸ್ಪತ್ರೆಯಲ್ಲಿ ನಿಧನರಾದರು. ಇವರು ತಾಯಿ, ಪತಿ, ಪುತ್ರ, ಸೊಸೆ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ವಸುಂಧರಾದೇವಿ ಇಚ್ಛೆಯಂತೆ ಅಂಗಾಂಗ ದಾನ ಮಾಡಲಾಗಿದ್ದು, ಶನಿವಾರ ಮಧ್ಯಾಹ್ನ 12ಕ್ಕೆ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ರಾಹುಲ್‌ಗಾಂಧಿ ಲೇಖನದಲ್ಲಿ ರಾಜಮನೆತನದ ಮೇಲೆ ಲಂಚ ಆರೋಪ

ಯದುವೀರ್ ಸೇರಿ ಹಲವು ರಾಜವಂಶಸ್ಥರ ಆಕ್ರೋಶ





ನವದೆಹಲಿ, ನ.8– ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಮೈಸೂರು ಸೇರಿದಂತೆ ದೇಶದ ವಿವಿಧ ಪ್ರಖ್ಯಾತ ರಾಜಮನೆತನಗಳ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಕೇಂದ್ರ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ, ಮೈಸೂರು ರಾಜ ಮನೆತನದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕೂಡ ರಾಹುಲ್ ಗಾಂಧಿ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯು ಭಾರತದ ರಾಜಮನೆತನವನ್ನು ಬೆದರಿಸಿ, ಲಂಚ ನೀಡಿ ಭಾರತವನ್ನು ಆಳಿತು ಎಂದು ರಾಹುಲ್ ಗಾಂಧಿ ತಮ್ಮ ಲೇಖನದಲ್ಲಿ ಬರೆದಿರುವುದೇ ಈ ವಿವಾದಕ್ಕೆ ಕಾರಣವಾಗಿದೆ. ಈಸ್ಟ್ ಇಂಡಿಯಾ ಕಂಪನಿ ಈಗ ಇಲ್ಲ. ಆದರೆ, ಅದು ಸೃಷ್ಟಿಸಿದ ಭಯ ಮತ್ತೆ ಕಾಣಿಸಿಕೊಳ್ಳಲು ಆರಂಭವಾಗಿದೆ. ಹೊಸ ಪೀಳಿಗೆಯಲ್ಲಿ ಕಾಣುತ್ತಿರುವ ಏಕಸ್ವಾಮ್ಯವು ಅದರ ಸ್ಥಾನವನ್ನು ಪಡೆದುಕೊಂಡಿದೆ ಎಂದು ಲೇಖನ ಬರೆದಿದ್ದರು. ಇದೇ ಬರಹ ಈಗ ದೇಶಾದ್ಯಂತ ರಾಜಮನೆತನಗಳ ಆಕ್ರೋಶಕ್ಕೆ ಕಾರಣವಾಗಿದೆ.

ಈ ಬಗ್ಗೆ ಸಂಸದರೂ ಆದ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರಾಹುಲ್ ಗಾಂಧಿ ಲೇಖನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ ಮಹಾರಾಜರು ತಮ್ಮ ಸ್ವಾಭಿಮಾನ ಮತ್ತು ದೇಶದ ಅಸ್ಮಿತೆಯೊಂದಿಗೆ ಎಂದಿಗೂ ರಾಜಿ ಮಾಡಿಕೊಂಡಿಲ್ಲ. ಯಾವ ರಾಜ ಲಂಚ ತೆಗೆದುಕೊಂಡಿದ್ದಾರೆ ಎಂಬುದನ್ನು ರಾಹುಲ್ ಗಾಂಧಿ ಸಾರ್ವಜನಿಕವಾಗಿ ಹೇಳಬೇಕು. ಇಲ್ಲದೇ ಇದ್ದಲ್ಲಿ ಅವರು ಸಾರ್ವಜನಿಕವಾಗಿ ತಮ್ಮ ಲೇಖನದ ಬಗ್ಗೆ ಕ್ಷಮೆ ಯಾಚಿಸಬೇಕು ಎಂದು ಹೇಳಿದ್ದಾರೆ.

ಗ್ವಾಲಿಯರ್ ಅನ್ನು ಆಳಿದ ರಾಜಮನೆತನದವರಾದ ಜ್ಯೋತಿರಾಧಿತ್ಯ ಸಿಂಧಿಯಾ, ರಾಹುಲ್ ಗಾಂಧಿಯವರ ಆಯ್ದ ವಿಸ್ಮೃತಿ, ತಮ್ಮ ವಂಶಾವಳಿಯಿಂದ ಅವರು ಅನುಭವಿಸಿದ ಸವಲತ್ತುಗಳನ್ನು ಮರೆತುಬಿಡುವಂತೆ ಮಾಡಿದೆ. ದ್ವೇಷ ಮಾರುವವರಿಗೆ ಭಾರತೀಯ ಹೆಮ್ಮೆ ಮತ್ತು ಇತಿಹಾಸದ ಬಗ್ಗೆ ಉಪನ್ಯಾಸ ನೀಡುವ ಹಕ್ಕಿಲ್ಲ. ಭಾರತದ ಶ್ರೀಮಂತ ಪರಂಪರೆಯ ಬಗ್ಗೆ ರಾಹುಲ್ ಗಾಂಧಿಯವರ ಅಜ್ಞಾನ ಮತ್ತು ಅವರ ವಸಾಹತುಶಾಹಿ ಮನಸ್ಥಿತಿ ಎಲ್ಲಾ ಮಿತಿಗಳನ್ನು ಮೀರಿದೆ ಎಂದು ಸಿಂಧಿಯಾ ಟ್ವೀಟ್ ಮಾಡಿದ್ದಾರೆ.

ಒಂದು ಕಾಲದಲ್ಲಿ ರಾಯ್ಬರೇಲಿ ಸಂಸದರ ಆಪ್ತ ವ್ಯಕ್ತಿ ಎನಿಸಿಕೊಂಡಿದ್ದ ಕೇಂದ್ರ ಸಚಿವರು, ಭಾರತದ ಪರಂಪರೆಯು 'ಗಾಂಧಿ' ಎಂಬ ಶೀರ್ಷಿಕೆಯೊಂದಿಗೆ ಪ್ರಾರಂಭವಾಗುವುದಿಲ್ಲ ಅಥವಾ ಕೊನೆಗೊಳ್ಳುವುದಿಲ್ಲ ಎಂದು ಹೇಳಿದರು. ನಿಮ್ಮ ಅಪಶ್ರುತಿಯು ಕಾಂಗ್ರೆಸ್‌ನ ಕಾರ್ಯಸೂಚಿಯನ್ನು ಮತ್ತಷ್ಟು ಬಹಿರಂಗಪಡಿಸುತ್ತದೆ. ರಾಹುಲ್ ಗಾಂಧಿ ಆತ್ಮನಿರ್ಭರ ಭಾರತ್‌ನ ಚಾಂಪಿಯನ್ ಅಲ್ಲ. ಅವರು ಕೇವಲ ಹಳತಾದ ಅರ್ಹತೆಯ ಉತ್ಪನ್ನ ಎಂದು ಸಿಂಧಿಯಾ ಟೀಕಿಸಿದ್ದಾರೆ.

ಜೈಪುರದ ಕೊನೆಯ ಮಹಾರಾಜರಾದ ಮಾನ್ ಸಿಂಗ್ ರ ಮೊಮ್ಮಗಳು ದಿಯಾ ಕುಮಾರಿ, ರಾಹುಲ್ ಗಾಂಧಿಯವರು ಭಾರತದ ಹಿಂದಿನ ರಾಜಮನೆತನಗಳನ್ನು ಕೆಡಿಸಲು ಮತ್ತು ಸಮಾಜವನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮೈಸೂರು ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ 'ಹಾಥ್ ಕರ್ಗ ಉತ್ಸವ್' ಕೈಮಗ್ಗ ವಸ್ತು ಪ್ರದರ್ಶನ; ಮಾರಾಟ

ನ.21ವರೆಗೆ ಶೇ.20ರ ರಿಯಾಯಿತಿಯಲ್ಲಿ ಖರೀದಿ ಅವಕಾಶ





ರಾಜ್ಯ ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ 'ಹಾಥ್ ಕರ್ಗ ಉತ್ಸವ್'ಕ್ಕೆ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ರಾಜ್ಯ ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದ ಮಳಿಗೆಗೆ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಸೇರಿದಂತೆ ಇತರರು ಭೇಟಿ ನೀಡಿದ್ದನ್ನು ಕಾಣಬಹುದು.

ಮೈಸೂರು, ನ.8(ಎಸ್‌ಪಿಎನ್)– ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಇಂದಿನಿಂದ (ಶುಕ್ರವಾರ) ನ.21ರವರೆಗೆ ಆಯೋಜಿಸಿರುವ ರಾಜ್ಯ ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ 'ಹಾಥ್ ಕರ್ಗ ಉತ್ಸವ್'ಕ್ಕೆ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್ ಚಾಲನೆ ನೀಡಿದರು.

ಮೈಸೂರು ಕೇಂದ್ರ ಜವಳಿ ಸಚಿವಾಲಯ, ಜೆಎಸ್‌ಎಸ್ ಅರ್ಬನ್ ಹಾತ್, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ ಕಾವೇರಿ ಹ್ಯಾಂಡ್ ಲೂಮ್ಸ್ ಹಾಗೂ ಕೈಮಗ್ಗ ಮತ್ತು ಜವಳಿ ಇಲಾಖೆ, ಜೆಎಸ್‌ಎಸ್ ಮಹಾವಿದ್ಯಾಪೀಠ ಸಹಯೋಗದೊಂದಿಗೆ 14 ದಿನಗಳ ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದ ಹಾಥ್ ಕರ್ಗ ಉತ್ಸವಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ನಾಡಿನ ಅನೇಕ ಕರಕುಶಲ ಕರ್ಮಿಗಳು ಉತ್ಸವದಲ್ಲಿ ಪಾಲ್ಗೊಂಡಿದ್ದಾರೆ. ದೇಶಿಯ ಉಡುಗೆ–ತೊಡುಗೆಗಳಿಗೆ ಹೆಚ್ಚು ಗ್ರಾಹಕರು ಖರೀದಿಸಿ ಸಹಕಾರ ನೀಡಬೇಕು. ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ನೇಕಾರರು, ನೇಕಾರ ಸಹಕಾರ ಸಂಘಗಳು ತಯಾರು ಮಾಡುತ್ತಿರುವ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆಯನ್ನು ಒದಗಿಸುವ ದೃಷ್ಟಿಯಿಂದ ಮತ್ತು ಕೈಮಗ್ಗ ಉತ್ಪನ್ನಗಳು ನಶಿಸಿ ಹೋಗದಂತೆ ಕಾಪಾಡಿಕೊಂಡು ಹೋಗಲು ಈ ಮೇಳವನ್ನು ಆಯೋಜನೆ ಮಾಡಿರುವುದು ಸರ್ಕಾರದ ಮೂಲ ಉದ್ದೇಶವಾಗಿದೆ ಎಂದರು.

ಈ ಕೈಮಗ್ಗ ಮೇಳದಲ್ಲಿ ದೇಶದ ಸುಮಾರು 75ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸಿರುವ ಉತ್ಪನ್ನಗಳು ಪ್ರದರ್ಶನ ಮತ್ತು ಮಾರಾಟಗೊಳ್ಳುತ್ತಿವೆ. ಮೈಸೂರಿನ ಜನತೆ ಇಂತಹ ಸದಾವಕಾಶವನ್ನು ಬಳಸಿಕೊಳ್ಳುವಂತೆ ಮನವಿ ಮಾಡಿದರಲ್ಲದೆ, ನಾನು ಕೂಡ ಹಲವು ವಿವಿಧ ಕೈಮಗ್ಗ ಸೀರೆಗಳನ್ನು ಕೊಳ್ಳುತ್ತಿದ್ದೇನೆ ಎಂದು ಹೇಳಿದರು.

> **ಉಚಿತ ಪ್ರವೇಶ**
> ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ರಾಜ್ಯ ಕೈಮಗ್ಗ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಶುಕ್ರವಾರದಿಂದ ಅ.21ರವರೆಗೆ ನಡೆಯಲಿದ್ದು, ಬೆಳಗ್ಗೆ 10ರಿಂದ ರಾತ್ರಿ 9ಗಂಟೆ ತನಕ ಗ್ರಾಹಕರಿಗೆ ಉಚಿತ ಪ್ರವೇಶ ಇರಲಿದೆ.

ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖೆ ನಿರ್ದೇಶಕಿ ಕೆ.ಜ್ಯೋತಿ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಜವಳಿ ಮಂತ್ರಾಲಯದ ವತಿಯಿಂದ ಮುಂದಿನ ಐದು ವರ್ಷದಲ್ಲಿ 5 ಲಕ್ಷ ಉದ್ಯೋಗ ಸೃಷ್ಟಿಸಲು ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದು, ಕಲಬುರಗಿಯಲ್ಲಿ ಅತೀ ದೊಡ್ಡ ಜವಳಿ ಪಾರ್ಕ್ ನಿರ್ಮಾಣವಾಗುತ್ತಿದೆ. ಚಾಮರಾಜನಗರದಲ್ಲೂ ಜವಳಿ ಪಾರ್ಕ್ ನಿರ್ಮಾಣಕ್ಕೆ ಒತ್ತು ನೀಡುತ್ತಿದ್ದು, ಮೈಸೂರು, ಮಂಡ್ಯ ಹಾಗೂ ಹಾಸನ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಜವಳಿ ಕಸ್ಟರ್‌ಗಳನ್ನು ಗುರುತಿಸಿ, ಕೈಮಗ್ಗ ನೇಕಾರರನ್ನು ಸರ್ಕಾರದಿಂದ ಪ್ರೋತ್ಸಾಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಮೇಳದಲ್ಲಿ ಕೈಮಗ್ಗ ನೇಕಾರರು, ಸಹಕಾರ ಸಂಘಗಳಿಂದ ಉತ್ಪಾದಿಸಿದ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರು ಶೇ.20ರ ರಿಯಾಯಿತಿ ದರದಲ್ಲಿ ಖರೀದಿಸಬಹುದು. ರೇಷ್ಮೆ ಸೀರೆ, ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ, ಕಾಟನ್ ಸೀರೆ, ಬೆಡ್‌ಶೀಟ್‌ಗಳು, ತಮಿಳುನಾಡು ರಾಜ್ಯದ ಪರಿಶುದ್ಧ ಕಾಂಜಿವರಂ ಸೀರೆ, ಕೇರಳದ ಕೈಮಗ್ಗ ಸೀರೆಗಳು, ಬಿಹಾರ ಮತ್ತು ಜಾರ್ಖಂಡ್ ರಾಜ್ಯದ ತಸ್ಸರ್ ಸೀರೆ, ಪಶ್ಚಿಮ ಬಂಗಾಲದ ಕಾಂತಾ ಸೀರೆ, ಬಲಚುರಿ ಸೀರೆ, ಭುಟಿಕ್ ಕಾಟನ್ ಸೀರೆ, ಉತ್ತರ ಪ್ರದೇಶದ ಬನಾರಸ್ ಸಿಲ್ಕ್, ಚಿಕನ್ ಎಂಬ್ರಾಡರಿ ಸೀರೆ, ಮಧ್ಯಪ್ರದೇಶದ ಚಂದೇರಿ, ಮಹೇಶ್ವರಿ ಸಿಲ್ಕ್ ಸೀರೆ, ಒರಿಸ್ಸಾ ಸಂಬಲ್ಪುರಿ ಸೀರೆ, ಇಕ್ಕತ್ ಸೀರೆ, ಬೋಂಕಾಯಿ ಸೀರೆ, ಕಾಶ್ಮೀರದ ಪಶ್ಮೀನಾ ಶಾಲ್, ಆಂಧ್ರಪ್ರದೇಶ ಗೊದ್ವಲ್, ಕಲಮ್ಕಾರಿ ಸೀರೆ, ಪೋಚಂಪಲ್ಲಿ ಸೀರೆ, ಗುಜರಾತ್ ಪಟೋಲಾ ಸೀರೆ ಸೇರಿದಂತೆ ನೆಲ ಹೊದಿಕೆ, ಬೆಡ್ ಶೀಟ್ ಮೊದಲಾದವು ಇಲ್ಲಿ ದೊರೆಯಲಿವೆ.

ಉದ್ಘಾಟನಾ ಸಂದರ್ಭದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಕುಲಪತಿ ಡಾ.ಎ.ಎನ್.ಸಂತೋಷ್ ಕುಮಾರ್, ಕಾವೇರಿ ಹ್ಯಾಂಡ್‌ಲೂಮ್ಸ್ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ ಮೂರ್ತಿ, ಕಾವೇರಿ ಹ್ಯಾಂಡ್‌ಲೂಮ್ಸ್ ಅಧ್ಯಕ್ಷ ಬಿ.ಜೆ.ಗಣೇಶ, ಕೇಂದ್ರ ಜವಳಿ ಮಂತ್ರಾಲಯದ ನೇಕಾರರ ಸೇವಾ ಕೇಂದ್ರದ ಸಹಾಯಕ ನಿರ್ದೇಶಕರಾದ ಮಾರಿಮುತ್ತು, ಉಪ ನಿರ್ದೇಶಕ ರಂಗಸ್ವಾಮಿ, ಯೋಜನಾಧಿಕಾರಿ ಎಂ.ಶಿವನಂಜಸ್ವಾಮಿ, ಸಂಯೋಜನಾಧಿಕಾರಿ ರಾಕೇಶ್ ರೈ ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ



ಮೈಸೂರಿನ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ನಗರಸಭಾ ನಾಮನಿರ್ದೇಶಿತ ಮಾಜಿ ಸದಸ್ಯ ಕೆ.ಎನ್.ಕುಮಾರ್, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಟಿ.ಸುರೇಶ್, ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆ ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ, ಪದಾಧಿಕಾರಿಗಳಾದ ಸಿದ್ದರಾಜು, ಲೋಕೇಶ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವಾರ್ಷಿಕೋತ್ಸವ

ಪ್ರತಿಭಾ ಪುರಸ್ಕಾರ, ಲಕ್ಷ್ಮಮ್ಮಣಿ ಪ್ರಶಸ್ತಿ ಪ್ರದಾನ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ವಾರ್ಷಿಕೋತ್ಸವ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಲಕ್ಷ್ಮಮ್ಮಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ನ.8(ಜಿಎ)–ಕಷ್ಟದ ಸಂದರ್ಭವನ್ನು ಆತ್ಮವಿಶ್ವಾಸದಿಂದ ಹೇಗೆ ಎದುರಿಸಬೇಕು ಎಂಬುದಕ್ಕೆ ಮಹಾರಾಣಿ ಲಕ್ಷ್ಮಮ್ಮಣಿ ನಿದರ್ಶನ ಎಂದು (ಮಾಜಿ ಸಂಸದ ದಿವಂಗತ ಶ್ರೀಕಂಠದತ್ತ ನರಸಿಂಹರಾಜಾ ಒಡೆಯರ್ ಸಹೋದರಿ) ರಾಜವಂಶಸ್ಥೆ ಕಾಮಾಕ್ಷಿ ದೇವಿ ಒಡೆಯರ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ ಆಯೋಜಿಸಿದ್ದ 3ನೇ ವರ್ಷದ ವಾರ್ಷಿಕೋತ್ಸವ ಸಂಭ್ರಮ, ಪ್ರತಿಭಾ ಪುರಸ್ಕಾರ ಹಾಗೂ ಲಕ್ಷ್ಮಮ್ಮಣಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಟಿಪ್ಪು ಸುಲ್ತಾನ್ ಮಹಾರಾಣಿ ಲಕ್ಷ್ಮಮ್ಮಣಿ ಅವರನ್ನು ಸೆರೆಮನೆಯಲ್ಲಿ ಇರಿಸಿದ್ದರೂ ಅವರು ಧೃತಿಗೆಡದೆ ಕಷ್ಟಗಳನ್ನು ಹೆದರಿಸಿ ರಾಜ್ಯವನ್ನು ಉಳಿಸಿಕೊಂಡಿರುವ ಅವರ ಆತ್ಮವಿಶ್ವಾಸವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯ ಮಾಡಬೇಕಿದೆ. ಲಕ್ಷ್ಮಮ್ಮಣಿ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಸಂತಸದ ಸಂಗತಿ. ಬಡ ಮಹಿಳೆಯರ ಜೀವನಕ್ಕೆ ದಾರಿ ತೋರುವ ಕೆಲಸವನ್ನು ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್‌ನ ಮಾಡುತ್ತಿದ್ದು, ಮಹಿಳಾ ಹಾಸ್ಟಲ್ ನಿರ್ಮಾಣ ಮಾಡುತ್ತಿರುವುದು ಶ್ಲಾಘನೀಯ. ಇವರ ಸೇವೆ ಮುಂದುವರೆಯಲ್ಲಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯೋದ್ಯಮಿ ಇಂದ್ರಮ್ಮಣ್ಣಿ ಅರಸ್, ಸಂಗೀತ ಕ್ಷೇತ್ರದ ಎಸ್.ಅನ್ನಪೂರ್ಣದೇವಿ, ವೈದ್ಯಕೀಯ ಕ್ಷೇತ್ರದಿಂದ ಡಾ.ವಿಜಯಲಕ್ಷ್ಮಿ ಅರಸ್, ಸಮಾಜ ಸೇವೆಗಾಗಿ ಸುನಂದ ಬಗ್ಲೇರ್ ಹಾಗೂ ಕಲಾ ವಿಭಾಗದ ಸಾಧನೆ ಗುರುತಿಸಿ ಪೂರ್ಣಿಮಾ ಕೃಷ್ಣ ಅರಸ್ ಅವರುಗಳಿಗೆ ಲಕ್ಷ್ಮಮ್ಮಣಿ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು. ಈ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರೀತಮ್ ಅರಸ್, ಎ.ಬಿಂದು, ಋಷಿ ಪಿ.ಅರಸ್, ಲಾವಣ್ಯ ಅರಸ್, ಪುಣ್ಯ ಅರಸ್, ಸಿಂಚನ ಅರಸ್, ಎಸ್.ಅಕ್ಷತಾ, ಪರಿಣಿತ ಅರಸ್, ತರುಣ್ ಅರಸ್ ಅವರಿಗೆ ಪತ್ರಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಜೆ.ಟಿ.ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸ್ಟಡೀಸ್‌ನ ಸಹಾಯಕ ಪ್ರಾಧ್ಯಾಪಕ ಸತ್ಯಪ್ರಕಾಶ್ ಅರಸ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ನಿವೃತ್ತ ಪ್ರಾಧ್ಯಾಪಕಿ ಡಾ.ಎಂ. ಸುಶೀಲಾ ಅರಸ್, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಂ.ಜಿ. ಆರ್.ಅರಸ್ ಉಪಸ್ಥಿತರಿದ್ದರು.

ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪೋಷಕರು ಆದ್ಯತೆ ನೀಡಬೇಕು

ಶಾಸಕ ಕೆ.ಹರೀಶ್‌ಗೌಡ ಸಲಹೆ





ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ನಾಲ್ಕು ತರಗತಿ ಕೊಠಡಿಗಳನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಮೈಸೂರು, ನ.8(ಎಂಟಿವೈ)– ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸರ್ಕಾರ ಹಲವು ಕಾರ್ಯಕ್ರಮ ರೂಪಿಸಿದ್ದು, ಪೋಷಕರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ನಾಲ್ಕು ತರಗತಿ ಕೊಠಡಿಗಳ ಉದ್ಘಾಟನೆ ಹಾಗೂ ನೂತನ ಶೌಚಾಲಯ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮೈಸೂರು ನಗರ ಮಾತ್ರವಲ್ಲದೆ, ಜಿಲ್ಲೆಯ ವಿವಿಧೆಡೆಯಿಂದ ಸಾವಿರಾರು ವಿದ್ಯಾರ್ಥಿನಿಯರು ಅವಲಂಭಿಸಿದ್ದಾರೆ. ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಾಲೇಜಿನಲ್ಲಿ ಕೊಠಡಿಗಳ ಕೊರತೆ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ 4 ತರಗತಿ ಕೊಠಡಿ ನಿರ್ಮಿಸಲಾಗಿದ್ದು, ಅವುಗಳನ್ನು ಇಂದು ವಿದ್ಯಾರ್ಥಿಗಳ ಕಲಿಕೆಗೆ ಸಮರ್ಪಿಸಲಾಗಿದೆ. 7.35 ಲಕ್ಷ ರೂ. ವೆಚ್ಚದಲ್ಲಿ ಹೊಸದಾಗಿ ಶೌಚಾಲಯ ನಿರ್ಮಿಸಲು ಚಾಲನೆ ನೀಡಲಾಗಿದೆ ಎಂದರು.

ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಬೇರೆ ಎಲ್ಲಾ ಕ್ಷೇತ್ರಗಳಿಗಿಂತ ಅತಿ ಹೆಚ್ಚು ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಿವೆ. ಎಲ್ಲಾ ಶಾಲಾ–ಕಾಲೇಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾತಿ ಆಗುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದ್ದು, ಈ ಹಿನ್ನೆಲೆಯಲ್ಲಿ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ಕೆಲಸವನ್ನು ಮಾಡುತ್ತೇನೆ. ಬಡ ಜನರು ಖಾಸಗಿ ಶಿಕ್ಷಣ ಸಂಸ್ಥೆಗಳ ಮೊರೆ ಹೋಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ಕ್ಷೇತ್ರದದಲ್ಲಿಯೂ ಪೈಪೋಟಿ ಹೆಚ್ಚಾಗುತ್ತಿದ್ದು, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲೂ ಗುಣಮಟ್ಟದ ಶಿಕ್ಷಣ ನೀಡುವ ಸವಾಲು ಎದುರಾಗಿದೆ ಎಂದು ಅಭಿಪ್ರಾಯಪಟ್ಟರು.

ಹೆಣ್ಣು ಮಕ್ಕಳು ಉತ್ತಮ ಶಿಕ್ಷಣ ಪಡೆದರೆ, ದೇಶ ಅಭಿವೃದ್ಧಿಯಾಗುತ್ತದೆ. ಸಮಾಜದಲ್ಲಿ ಸುಧಾರಣೆ ಸಾಧ್ಯವಾಗಲಿದೆ ಆದ್ದಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸರ್ಕಾರ ಒತ್ತು ನೀಡುತ್ತಿದೆ. ಸರ್ಕಾರ ನೀಡುವ ಸೌಲಭ್ಯವನ್ನು ಸದುಪಯೋಗ ಮಾಡಿಕೊಂಡು ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆಯುವ ಮೂಲಕ ಉತ್ತಮ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಸಲಹ ನೀಡಿದರು.

ಕಾರ್ಯಕ್ರಮದಲ್ಲಿ ಪದವಿ ಪೂರ್ವ ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮರಿಸ್ವಾಮಿ, ಮಹಾರಾಣಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸೋಮಣ್ಣ, ಕಾಲೇಜು ಅಭಿವೃದ್ಧಿ ಉಪಾಧ್ಯಕ್ಷ ರಾಜೀವ್, ಪಿಆರ್‌ಇಡಿ ಕಾರ್ಯಪಾಲಕ ಅಭಿಯಂತರರು, ಕಾಲೇಜಿನ ಅಧ್ಯಾಪಕರು, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಶ್ರೀ ಮಲೈಮಹದೇಶ್ವರ ಸ್ವಾಮಿಯ ಕಾರ್ತಿಕ ಮಾಸದ ಪೂಜೆ



ಮೈಸೂರಿನ ಲಷ್ಕರ್ ಮೊಹಲ್ಲಾದ ಗರಡಿಕೇರಿಯಲ್ಲಿರುವ ಶ್ರೀ ಮಲೈಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದ ಕಾರ್ತಿಕ ಮಾಸದ ಪೂಜೆಯಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಪಾಲಿಕೆ ಸದಸ್ಯ ಎಂ.ಶಿವಣ್ಣ , ಕಾಗಿನೆಲೆ ಮೈಸೂರು ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮಿಗಳು, ಮಹದೇಶ್ವರ ದೇವಸ್ಥಾನದ ಗುಡ್ಡಪ್ಪ ರವಿಕುಮಾರ್, ಕಾಂಗ್ರೆಸ್ ಮುಖಂಡರಾದ ಸುನೀಲ್ ನಾರಾಯಣ್, ರವಿ ನಾಯಕ್ ಉಪಸ್ಥಿತರಿದ್ದರು.

ದೇಶ - ವಿದೇಶ

ಸೂಸಿ ವೈಲ್ಸ್ ಶ್ವೇತಭವನ ಮುಖ್ಯಸ್ಥೆ




ವಾಷಿಂಗ್ಟನ್: ಅಮೆರಿಕದ ನೂತನ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ವರ್ಷ ತಮ್ಮ ಚುನಾವಣಾ ಪ್ರಚಾರ ಸಮಯದಲ್ಲಿ ಸಾಥ್ ನೀಡಿದ್ದ ಸೂಸಿ ವೈಲ್ಸ್ ಅವರನ್ನು ಶ್ವೇತಭವನದ ಮುಖ್ಯಸ್ಥರೆಂದು ಘೋಷಿಸಿದ್ದು, ಅಮೆರಿಕದಲ್ಲಿ ಈ ಪ್ರಭಾವಿ ಹುದ್ದೆ ಅಲಂಕರಿಸುತ್ತಿರುವ ಮೊದಲ ಮಹಿಳೆಯಾಗಿದ್ದಾರೆ.

ಟ್ರಂಪ್ ಅವರ ಚುನಾವಣಾ ಪ್ರಚಾರವನ್ನು ಅತ್ಯಂತ ಶಿಸ್ತುಬದ್ಧವಾಗಿ ಮತ್ತು ಉತ್ತಮವಾಗಿ ಕಾರ್ಯಗತಗೊಳಿಸಿದ್ದಕ್ಕಾಗಿ ವೈಲ್ಸ್ ಅವರ ಆಂತರಿಕ ವಲಯದ ಒಳಗೆ ಮತ್ತು ಹೊರಗೆ ವ್ಯಾಪಕವಾಗಿ ಮನ್ನಣೆ ಪಡೆದಿದ್ದಾರೆ. ಅಮೆರಿಕವನ್ನು ಮತ್ತಷ್ಟು ಹೊಸ ಎತ್ತರಕ್ಕೆ ಕೊಂಡೊಯ್ಯಲು ಸೂಸಿ ಅವಿರತ ಶ್ರಮಿಸುವುದನ್ನು ಮುಂದುವರಿಸುತ್ತಾರೆ.

ಯುನೈಟೆಡ್ ಸ್ಟೇಟ್ಸ್ ಇತಿಹಾಸದಲ್ಲಿ ಸೂಸಿ ಅವರು ಮೊದಲ ಮಹಿಳಾ ಮುಖ್ಯಸ್ಥರಾಗುತ್ತಿದ್ದಾರೆ. ಅವರು ನಮ್ಮ ದೇಶ ಹೆಮ್ಮೆಪಡುವಂತೆ ಕೆಲಸ ಮಾಡುತ್ತಾರೆ ಎಂಬುದರಲ್ಲಿ ನನಗೆ ಸಂದೇಹವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

ಅಮೆರಿಕದ ಇತಿಹಾಸದಲ್ಲಿ ಶ್ರೇಷ್ಠ ರಾಜಕೀಯ ಜಯ ಸಾಧಿಸಲು ಸೂಸಿ ವೈಲ್ಸ್ ನನಗೆ ಸಹಾಯ ಮಾಡಿದರು. ಅವರು ನನ್ನ 2016 ಮತ್ತು 2020ರ ಯಶಸ್ವಿ ಪ್ರಚಾರಗಳ ಅವಿಭಾಜ್ಯ ಅಂಗವಾಗಿದ್ದರು ಎಂದು ಟ್ರಂಪ್ ಹೇಳಿದ್ದಾರೆ.

ಜೈಶಂಕರ್ ಸಂದರ್ಶನ ಪ್ರಸಾರ ಮಾಡಿದ ಆಸ್ಟ್ರೇಲಿಯಾ ಚಾನೆಲ್ ನಿಷೇಧಿಸಿದ ಕೆನಡಾ




ಕೆನಡಾ: ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಸಂದರ್ಶನವನ್ನು ಪ್ರಸಾರ ಮಾಡಿದ ಆಸ್ಟ್ರೇಲಿಯಾದ ಸುದ್ದಿವಾಹಿನಿಯನ್ನು ಕೆನಡಾ ನಿಷೇಧಿಸಿದೆ. ಸಂದರ್ಶನದಲ್ಲಿ ಭಾರತ–ಕೆನಡಾ ರಾಜತಾಂತ್ರಿಕ ಬಿಕ್ಕಟ್ಟಿನ ಕುರಿತು ಜೈಶಂಕರ್ ಪ್ರತಿಕ್ರಿಯಿಸಿದ್ದರು. ಈ ಪತ್ರಿಕಾಗೋಷ್ಠಿಯನ್ನು ಆಸ್ಟ್ರೇಲಿಯಾ ಟುಡೆ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಿತ್ತು.

ಕೆನಡಾದಲ್ಲಿ ಭಾರತ ವಿರೋಧಿ ಶಕ್ತಿಗಳಿಗೆ ರಾಜಕೀಯವಾಗಿ ಅವಕಾಶ ನೀಡಲಾಗುತ್ತಿದೆ ಎಂದು ಒತ್ತಿ ಹೇಳಿದ್ದರು. ಸಚಿವರು ಕೆನಡಾವನ್ನು ಟೀಕಿಸಿದ್ದರಿಂದ ಆಸ್ಟ್ರೇಲಿಯಾ ಟುಡೇ ಚಾನೆಲ್ ಅನ್ನು ನಿರ್ಬಂಧಿಸಲಾಗಿದೆ. ಭಾರತವು ಈ ವಿಷಯದ ಬಗ್ಗೆ ಬಲವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದೆ. ಔಟ್ಲೆಟ್ ಅನ್ನು ನಿಷೇಧಿಸುವ ಕೆನಡಾದ ಕ್ರಮವು ಆಶ್ಚರ್ಯಕರವಾಗಿದೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಕೆನಡಾದ ಬೂಟಾಟಿಕೆಯನ್ನು ಬಹಿರಂಗಪಡಿಸುತ್ತದೆ ಎಂದು ಒತ್ತಿ ಹೇಳಲಾಗಿದೆ.

ಜೈಶಂಕರ್ ಅವರು ಮಾಧ್ಯಮಗಳೊಂದಿಗೆ ಮಾತನಾಡುವಾಗ ಕೆನಡಾ ಯಾವುದೇ ಆಧಾರವಿಲ್ಲದೆ ಭಾರತದ ಮೇಲೆ ಮಾಡಿರುವ ಆರೋಪಗಳ ಬಗ್ಗೆ ಮಾತನಾಡಿದ್ದಾರೆ. ಜತೆಗೆ ಭಾರತದ ರಾಜತಾಂತ್ರಿಕ ಅಧಿಕಾರಿಗಳು, ಕೆನಡಾದ ನಡೆ ಸ್ವೀಕಾರಾರ್ಹವಲ್ಲ ಎಂದಿದ್ದಾರೆ.

ಮುಖ್ಯಮಂತ್ರಿಯ ಸಮೋಸ ಮಂಗಮಾಯ: ಸಿಐಡಿ ತನಿಖೆ!



ಶಿಮ್ಲಾ: ಹಿಮಾಚಲ ಪ್ರದೇಶದಲ್ಲಿ ಸಮೋಸ ಮತ್ತು ಕೇಕ್‌ಗೆ ಸಂಬಂಧಿಸಿದ ಪ್ರಕರಣವೊಂದು ಹೊಸ ವಿವಾದವನ್ನು ಉಂಟುಮಾಡಿದೆ. ಈ ವಿವಾದ ಎಷ್ಟರ ಮಟ್ಟಿಗೆ ಸದ್ದು ಮಾಡಿದೆ ಎಂದರೆ ಸಮೋಸ ಕಾಣೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಆದೇಶ ನೀಡಿದೆ.

ಹಿಮಾಚಲಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರಿಗೆ ಆರ್ಡರ್ ಮಾಡಿದ್ದ ಸಮೋಸ ಮತ್ತು ಕೇಕ್ ಅನ್ನು ಅವರ ಭದ್ರತಾ ಸಿಬ್ಬಂದಿಗೆ ವಿತರಣೆ ಮಾಡಿರುವುದು ಈಗ ವಿವಾದಕ್ಕೆ ಕಾರಣವಾಗಿದೆ. ಈ ಪ್ರಕರಣದ ಬಗ್ಗೆ ಇದೀಗ ಸಿಐಡಿ ತನಿಖಾ ವರದಿಯೂ ಬಂದಿದೆ.

ರಾಜ್ಯದಲ್ಲಿನ ಸಿಎಂ ಸುಖ್ವಿಂದರ್ ಸುಖು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ವಿರೋಧ ಪಕ್ಷ ಬಿಜೆಪಿ, ಸಿಐಡಿ ತನಿಖೆಗೆ ಆದೇಶ ನೀಡಿರುವುದು ಕಾಂಗ್ರೆಸ್‌ಗೆ ಕೇವಲ ಸಮೋಸದ ಬಗ್ಗೆಯೇ ಕಾಳಜಿ ಇದೆಯೇ ಹೊರತು ರಾಜ್ಯದ ಅಭಿವೃದ್ಧಿಯ ಬಗ್ಗೆ ಅಲ್ಲ ಎಂದು ತೋರಿಸುತ್ತದೆ ಎಂದು ಟೀಕಿಸಿದೆ. 'ರಾಜ್ಯದ ಅಭಿವೃದ್ಧಿಯ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ, ಮುಖ್ಯಮಂತ್ರಿಗಳ ಸಮೋಸ ಬಗ್ಗೆ ಮಾತ್ರ ಕಾಳಜಿ ತೋರುತ್ತಿದೆ' ಎಂದು ಬಿಜೆಪಿ ಮುಖ್ಯ ವಕ್ತಾರ ರಣಧೀರ್ ಶರ್ಮಾ ಕಿಡಿಕಾರಿದ್ದಾರೆ.

ಟ್ರಂಪ್ ಜೊತೆ ಮಾತುಕತೆಗೆ ಸಿದ್ಧ: ರಷ್ಯಾ ಅಧ್ಯಕ್ಷ ಪುಟಿನ್



ಮಾಸ್ಕೋ: ಅಮೆರಿಕ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಡೊನಾಲ್ಡ್ ಟ್ರಂಪ್ ಅವರನ್ನು ಅಭಿನಂದಿಸಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಮುಂದಿನ ಧೈರ್ಯವಂತ ಅಧ್ಯಕ್ಷರೊಂದಿಗೆ ಮಾತನಾಡಲು ಸಿದ್ಧ ಎಂದು ಹೇಳಿದ್ದಾರೆ. ಯುಎಸ್ ಚುನಾವಣಾ ಫಲಿತಾಂಶದ ಬಗ್ಗೆ ಮೊದಲ ಬಾರಿಗೆ ಸಾರ್ವಜನಿಕವಾಗಿ ಪ್ರತಿಕ್ರಿಯೆ ನೀಡಿರುವ ರಷ್ಯಾ ನಾಯಕ ಪುಟಿನ್, ಯುಎಸ್–ರಷ್ಯಾ ಸಂಬಂಧಗಳನ್ನು ಪುನಃಸ್ಥಾಪಿಸುವ ಮತ್ತು ಉಕ್ರೇನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಅಗತ್ಯವಿದೆ ಎಂದು ಒತ್ತಿ ಹೇಳಿದರು.

ರಷ್ಯಾದ ಸೋಚಿಯಲ್ಲಿ ನಡೆದ ನೀತಿ ನಿಯಮಗಳ ಚರ್ಚಾಸಭೆಯಲ್ಲಿ ಪುಟಿನ್ ಈ ಹೇಳಿಕೆ ನೀಡಿದ್ದಾರೆ. ಸುದೀರ್ಘ ಭಾಷಣದ ಕೊನೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಿದ ಪುಟಿನ್, ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾದ ಟ್ರಂಪ್ ಅವರನ್ನು ಅಭಿನಂದಿಸಲು ಈ ಅವಕಾಶವನ್ನು ಬಳಸಿಕೊಳ್ಳಲು ಬಯಸುತ್ತೇನೆ ಎಂದು ಹೇಳಿದರು. ಟ್ರಂಪ್ ಅವರೊಂದಿಗೆ ಚರ್ಚೆಗೆ ಸಿದ್ಧರಿದ್ದೀರಾ ಎಂದು ಕೇಳಿದಾಗ, ನಾವು ಸಿದ್ಧರಿದ್ದೇವೆ ಎಂದು ಪುಟಿನ್ ಪ್ರತಿಕ್ರಿಯಿಸಿದರು.

ಆಲಿಘಡ ಮುಸ್ಲಿಂ ವಿಶ್ವವಿದ್ಯಾಲಯ ಅಲ್ಪಸಂಖ್ಯಾತ ಸ್ಥಾನಮಾನಕ್ಕೆ ಅರ್ಹ!

ನವದೆಹಲಿ: ಸುಪ್ರೀಂಕೋರ್ಟ್ ಶುಕ್ರವಾರ ನೀಡಿದ 4:3 ಅನುಪಾತದ ಬಹುಮತದ ತೀರ್ಪಿನಲ್ಲಿ ಆಲಿಘಡ ಮುಸ್ಲಿಂ ವಿಶ್ವವಿದ್ಯಾಲಯವು ಕಾನೂನಿನಿಂದ ರಚಿಸಲ್ಪಟ್ಟಿರುವುದರಿಂದ ಅಲ್ಪಸಂಖ್ಯಾತ ಸ್ಥಾನಮಾನವನ್ನು ಪಡೆಯಲು ಸಾಧ್ಯವಿಲ್ಲ ಎಂಬ ತನ್ನ 1967ರ ತೀರ್ಪನ್ನು ರದ್ದುಗೊಳಿಸಿದೆ. ಈ ಮೂಲಕ ಆಲಿಘಡ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ಸಿಕ್ಕಂತಾಗಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಏಳು ನ್ಯಾಯಾಧೀಶರನ್ನೊಳಗೊಂಡ ಸಂವಿಧಾನ ಪೀಠವು, ಆಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ಅಲ್ಪಸಂಖ್ಯಾತ ಸ್ಥಾನಮಾನದ ಸಮಸ್ಯೆ ಬಗ್ಗೆ ತೀರ್ಪು ನೀಡಿತು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಜೆಬಿ. ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರ ಪರವಾಗಿ ಬಹುಮತದ ತೀರ್ಪು ಬರೆದಿರುವ ಸಿಜೆಐ ಚಂದ್ರಚೂಡ್ ಅವರು ಅಜೀಜ್ ಬಾಷಾ ಅವರ ಹಿಂದಿನ ತೀರ್ಪನ್ನು ತಳ್ಳಿಹಾಕಲಾಗಿದೆ ಎಂದು ಹೇಳಿದ್ದಾರೆ. ಆಲಿಘಡ ಮುಸ್ಲಿಂ ವಿಶ್ವವಿದ್ಯಾಲಯದ ಅಲ್ಪಸಂಖ್ಯಾತ ಸ್ಥಾನಮಾನವನ್ನು ತೆಗೆದುಹಾಕಿದ ನಂತರ 2006 ರ ಅಲಹಾಬಾದ್ ಹೈಕೋರ್ಟ್ ತೀರ್ಪು ಮತ್ತು ಈ ಸಮಸ್ಯೆಯನ್ನು ನಿರ್ಧರಿಸಲು ನ್ಯಾಯಪೀಠದ ತೀರ್ಪನ್ನು ಮುಖ್ಯ ನ್ಯಾಯಮೂರ್ತಿಗಳ ಮುಂದೆ ಇರಿಸಲಾಗುವುದು.

ಮಗ್ಗುಲ, ಐಮಂಗಲದಲ್ಲಿ ಹುಲಿ ಪತ್ತೆ

ಗ್ರಾಮದ ತೋಟಗಳಲ್ಲಿ ಸೆರೆ ಕಾರ್ಯಾಚರಣೆ ಆರಂಭ



ಮಗ್ಗುಲ ಹಾಗೂ ಐಮಂಗಲ ಗ್ರಾಮದ ತೋಟಗಳಲ್ಲಿ ಡಿಸಿಎಫ್ ಜಗನ್ನಾಥ್, ಸಿಬ್ಬಂದಿ ಹುಲಿ ಹೆಜ್ಜೆ ಗುರುತು ಪತ್ತೆ ಕಾರ್ಯದಲ್ಲಿ ತೊಡಗಿದರು.

ಮಡಿಕೇರಿ, ನ.8–ವಿರಾಜಪೇಟೆ ಪಟ್ಟಣ ದಿಂದ 2 ಕಿಮೀ ದೂರದ ಮಗ್ಗುಲ ಹಾಗೂ ಐಮಂಗಲ ಗ್ರಾಮದಲ್ಲಿ ಹುಲಿ ಪತ್ತೆಯಾಗಿದ್ದು, ಗ್ರಾಮಸ್ಥರು ಭೀತಿಗೆ ಒಳಗಾಗಿದ್ದಾರೆ.

ಅಲ್ಲಿನ ನಿವಾಸಿಗಳು ಈ ಕುರಿತು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸುಕೇತ್ ಪೂವಯ್ಯ ಅವರ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಉನ್ನತಾಧಿಕಾರಿಗಳ ಜೊತೆ ಚರ್ಚಿಸಿ ಶುಕ್ರವಾರ ಬೆಳಗ್ಗೆ 6 ಗಂಟೆಗೆ ಹುಲಿ ಪತ್ತೆ ಕಾರ್ಯಾಚರಣೆ ಆರಂಭಿಸಲಾಯಿತು.

ಸುಮಾರು 2 ಗಂಟೆಗೂ ಹೆಚ್ಚು ಕಾಲ ಡಿಸಿಎಫ್ ಜಗನ್ನಾಥ್ ಅವರು ಖುದ್ದಾಗಿ ಅರಣ್ಯ ಇಲಾಖೆ ಸಿಬ್ಬಂದಿಯೊಂದಿಗೆ ಕಾಡು ಹಾಗೂ ತೋಟಗಳಲ್ಲಿ ಹುಲಿ ಪತ್ತೆ ಕಾರ್ಯದಲ್ಲಿ ತೊಡಗಿದರು.

ಕಾರ್ಯಾಚರಣೆ ಕುರಿತು ಮಾತನಾಡಿದ ಡಿಸಿಎಫ್ ಜಗನ್ನಾಥ್, ಈ ಪ್ರದೇಶದಲ್ಲಿ ಹುಲಿ ಪತ್ತೆಯಾಗಿದೆ. ಅದಕ್ಕೆ ಪೂರಕವಾಗಿ ಹುಲಿ ಹೆಜ್ಜೆ ಗುರುತುಗಳು ಸಿಕ್ಕಿವೆ. ಅಲ್ಲದೆ, ಬಂಡೆ ಕಲ್ಲು ಮೇಲೆ ಹುಲಿ ಓಡಾಟ ನಡೆಸಿದ್ದು, ತೋಟದಲ್ಲಿ ಹುಲಿ ಮಲಗಿದ ಕುರುಹು ಹಾಗೂ ಮೂತ್ರ ವಿಸರ್ಜನೆ ಮಾಡಿರುವುದು ಪತ್ತೆಯಾಗಿದೆ. ಹೆಜ್ಜೆಗಳನ್ನು ಗಮನಿಸಿದರೆ ಹುಲಿಗೆ ಸಾಕಷ್ಟು ವಯಸ್ಸಾಗಿರುವುದು ಪ್ರಾಥಮಿಕ ಪರೀಕ್ಷೆಯಲ್ಲಿ ಕಂಡು ಬರುತ್ತಿದೆ ಎಂದು ಹೇಳಿದರು.

ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಮಾತನಾಡಿ, ಅವಘಡ ಘಟಿಸುವ ಮುನ್ನ ಎಚ್ಚೆತ್ತುಕೊಳ್ಳುವ ಉದ್ದೇಶದಿಂದ ಹುಲಿ ಪತ್ತೆ ಕಾರ್ಯಾಚರಣೆ ಆರಂಭಿಸಲಾಗಿದೆ. ಡಿಸಿಎಫ್ ಜಗನ್ನಾಥ್ ತಕ್ಷಣ ಸ್ಪಂದಿಸಿ ಹುಲಿ ಇರುವಿಕೆಯನ್ನು ದೃಢಪಡಿಸಿದ್ದಾರೆ. ಹುಲಿ ಸೆರೆ ಹಿಡಿಯಲು ಅನುಮತಿ ಅವಶ್ಯಕವಿದ್ದು, ಹಿಡಿಯಲು ಅಧಿಕಾರಿಗಳು ತಯಾರಿ ನಡೆಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ವಲಯ ಅರಣ್ಯಾಧಿಕಾರಿ ಕೆವಿ.ಶಿವರಾಂ, ಉಪವಲಯ ಅರಣ್ಯಾಧಿಕಾರಿ ಟಿಎನ್.ಪ್ರಶಾಂತ್ ಕುಮಾರ್, ಅರಣ್ಯ ರಕ್ಷಕ ನಾಗರಾಜ್ ರಡರಟ್ಟಿ, ಗ್ರಾಮಸ್ಥರಾದ ಬಾಬು, ಅಜೇಯ ರಾವ್, ವಿ.ಎಸ್. ಪ್ರೀತಮ್, ಪ್ರಕಾಶ್, ಅಕ್ಷಯ್, ಆನೆ ಕಾರ್ಯಪಡೆ ಸಿಬ್ಬಂದಿ ಉಪಸ್ಥಿತರಿದ್ದರು.

ಇಂದು ಕವಲು ದಾರಿಯಲ್ಲಿ ಪತ್ರಿಕಾ ಕ್ಷೇತ್ರ

ಕೊಡಗು ಪತ್ರಿಕಾ ಭವನ ವಾರ್ಷಿಕೋತ್ಸವದಲ್ಲಿ ಎಂ.ಎಸ್.ಸಪ್ನಾ ಅಭಿಮತ

ಮಡಿಕೇರಿ, ನ.8–ತಾಂತ್ರಿಕ ಬದಲಾವಣೆಯ ಸೂಕ್ಷ್ಮ ಹಂತದ ಪತ್ರಿಕಾ ಕ್ಷೇತ್ರ ಇಂದು ಕವಲು ದಾರಿಯಲ್ಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಎಂ.ಎಸ್.ಸಪ್ನಾ ಅಭಿಪ್ರಾಯಪಟ್ಟರು.

ನಗರದ ಪತ್ರಿಕಾ ಭವನದಲ್ಲಿ ಆಯೋಜಿಸಿದ್ದ ಕೊಡಗು ಪತ್ರಿಕಾ ಭವನದ 23ನೇ ವಾರ್ಷಿಕೋತ್ಸವವ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಿಕಾ ಕ್ಷೇತ್ರದಲ್ಲಿ ಸೇವೆ ಎನ್ನುವುದು ಸಾಮಾಜಿಕ ಜವಾಬ್ದಾರಿಯೇ ಆಗಿದೆ. ವಕೀಲ, ವೈದ್ಯ ಸಮೂಹ ಸೇವೆಯಂತೆಯೆ ಪತ್ರಿಕಾ ಕ್ಷೇತ್ರದಲ್ಲಿ ದುಡಿಯುವವರು ಸಾಮಾಜಿಕ ಬದ್ಧತೆ ಮತ್ತು ಜವಾಬ್ದಾರಿ ಹೊಂದಿರುತ್ತಾರೆ ಎಂದರು.

ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯೊಂದಿಗೆ ತಾಂತ್ರಿಕವಾಗಿಯೂ ಸಾಕಷ್ಟು ಬದಲಾವಣೆಗಳನ್ನು ನಾವಿಂದು ಕಾಣುತ್ತಿದ್ದೇವೆ. ಈ ಬದಲಾವಣೆಗಳಿಗೆ ಪತ್ರಿಕಾ ಕ್ಷೇತ್ರದಲ್ಲಿರುವವರು ಹೊಂದಿಕೊಳ್ಳುವುದು ಅತ್ಯವಶ್ಯಕ. ತಾಂತ್ರಿಕ ಬದಲಾವಣೆಯ ಸೂಕ್ಷ್ಮ ಹಂತದ ಪತ್ರಿಕಾ ಕ್ಷೇತ್ರವಿಂದು ಕವಲು ದಾರಿಯಲ್ಲಿದೆ ಎಂದು ತಿಳಿಸಿದರು.



ಕೊಡಗು ಪತ್ರಿಕಾ ಭವನ ವಾರ್ಷಿಕೋತ್ಸವವನ್ನು ಎಂ.ಎಸ್.ಸಪ್ನಾ ಉದ್ಘಾಟಿಸಿದರು.

ಪತ್ರಕರ್ತರಾದವರು ವಿವಿಧ ವಿಚಾರ, ವಿಷಯಗಳ ಅರಿವಿನ ಪರಿಧಿ ತಿಳಿದಿರಬೇಕು. ಪೂರಕವಾದ ವಿವಿಧ ತಾಂತ್ರಿಕ ಕೌಶಲತೆ ಮೈಗೂಡಿಸಿಕೊಳ್ಳಬೇಕು ಮತ್ತು ಪ್ರಮುಖವಾಗಿ ನಾವು ಸಮಾಜವನ್ನು ನೋಡುವಂತೆಯೇ, ಸಮಾಜವೂ ನಮ್ಮನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ ಎನ್ನುವ ಅರಿವು ಇರಬೇಕು. ಪತ್ರಿಕೋದ್ಯಮ ಶಿಕ್ಷಣ ಎನ್ನುವುದು ಕೇವಲ ಪದವಿ ಗಳಿಕೆಗೆ ಸೀಮಿತವಾಗದೆ, ಅದನ್ನು ಮೀರಿ ಹೊಸ ವಿಚಾರಗಳತ್ತ ಚಿಂತನೆ ಹರಿಸಬೇಕು ಎಂದು ಹೇಳಿದರು.

ಸುಳ್ಯದ ಹಿರಿಯ ಪತ್ರಕರ್ತ ಎಂ.ಬಿ. ಸದಾಶಿವ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೌಲ್ಯಗಳನ್ನು ಉಳಿಸುವ ನಿಟ್ಟಿನ ಕಾರ್ಯಕ್ಕಾಗಿಯೇ 'ಪತ್ರಿಕಾ ಕ್ಷೇತ್ರ'ವನ್ನು ಪ್ರಜಾಪ್ರಭುತ್ವದ 4ನೇ ಅಂಗವಾಗಿ ಪರಿಗಣಿಸಲಾಗಿದೆ. ವಿಶ್ವ ಮಟ್ಟದ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ ಅತೀ ಕೆಳಗಿನ ಸ್ಥಾನದಲ್ಲಿದೆ ಎಂದು ವಿಷಾದಿಸಿದರು.

> ಬಹುತೇಕ ಪತ್ರಕರ್ತರಿಗೆ ಕಾನೂನು ಅರಿವಿಲ್ಲ. ಏನನ್ನು ವರದಿ ಮಾಡಬಹುದು, ಬರೆಯಬಹುದು ಎನ್ನುವ ಸ್ಪಷ್ಟ ಚಿಂತನೆ ಹಾಗೂ ಕಾನೂನಿನ ಅರಿವು ಪಡೆದುಕೊಳ್ಳುವುದು ಅವಶ್ಯಕ.
> –ಎಂ.ಎಸ್.ಸಪ್ನಾ
> ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ.

ಕೊಡಗು ಪತ್ರಿಕಾ ಭವನ ಸಂಸ್ಥಾಪಕ ಮ್ಯಾನೇಜಿಂಗ್ ಟ್ರಸ್ಟಿ ಟಿ.ಪಿ.ರಮೇಶ್, ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವ ಕಾಮತ್, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರಳೀಧರ್ ಮಾತನಾಡಿದರು. ಇದೇ ಸಂದರ್ಭ ಪತ್ರಿಕಾ ಭವನ ಟ್ರಸ್ಟ್ ವತಿಯಿಂದ ಎಂ.ಎಸ್‌ಸಪ್ನಾ ಮತ್ತು ಎಂ.ಬಿ. ಸದಾಶಿವ ಅವರನ್ನು ಸನ್ಮಾನಿಸಲಾಯಿತು.

ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಎಸ್.ಜಿ.ಉಮೇಶ್, ಖಜಾಂಚಿ ಕೆ.ತಿಮ್ಮಪ್ಪ, ಟ್ರಸ್ಟಿಗಳಾದ ಎಚ್.ಟಿ.ಅನಿಲ್, ಮಧೋಷ್ ಪೂವಯ್ಯ, ಶ್ರೀಧರ್ ಹೂವಲ್ಲಿ, ಪತ್ರಕರ್ತರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪ್ರಮುಖರು ಉಪಸ್ಥಿತರಿದ್ದರು.

ಇಂದು ಕೊಡವ ಅಂತರ ಕೇರಿ ಜಾನಪದ ಸಾಂಸ್ಕೃತಿಕ ಮೇಳ



ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ಮಾತನಾಡಿದರು.

ಮಡಿಕೇರಿ, ನ.8–ಕೊಡವ ಜಾನಪದ ಕಲೆಗಳಿಗೆ ಒತ್ತು ನೀಡುವ ಸಲುವಾಗಿ ನಗರದ ಸುಬ್ರಹ್ಮಣ್ಯ ಕೊಡವ ಕೇರಿಯ ನೇತೃತ್ವದಲ್ಲಿ ನ.9ರಂದು 7ನೇ 'ಕೊಡವ ಅಂತರ ಕೇರಿ ಜಾನಪದ ಸಾಂಸ್ಕೃತಿಕ ಮೇಳ' ಆಯೋಜಿಸಲಾಗಿದೆ ಎಂದು ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕೊಡವ ಸಮಾಜದ ಆವರಣದಲ್ಲಿ ಮಡಿಕೇರಿಯ 12 ಕೇರಿಯ ಕೊಡವ ಜನಾಂಗದವರು ಮೇಳದಲ್ಲಿ ಭಾಗವಹಿಸಲಿದ್ದಾರೆ. ಅಂದು ಬೆಳಗ್ಗೆ 8.45ಕ್ಕೆ ಕೊಡವ ಸಮಾಜದಲ್ಲಿ ದೇವರಿಗೆ ಪ್ರಾರ್ಥನೆ ಮತ್ತು ಧ್ವಜಾರೋಹಣ ನೆರವೇರಲಿದೆ ನಂತರ ಅಂತರ ಕೇರಿಗಳ ನಡುವೆ ಬೊಳಕಾಟ್, ಕೋಲಾಟ್, ಮಹಿಳೆಯರ ಉಮ್ಮತಾಟ್, ಕಪ್ಪೆಯಾಟ್, ಬಾಳೋಪಾಟ್, ತಾಲಿಪಾಟ್, ಸಮ್ಮಂದ ಅಡ್‌ಕುವೋ, ವಾಲಗತಾಟ್, ಕೊಡವ ಹಾಡು ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿವೆ. ಮಧ್ಯಾಹ್ನ 3.30ಕ್ಕೆ ಸಮಾರಂಭ ಹಾಗೂ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಮೇಳದ ಅಧ್ಯಕ್ಷ ನಾಳಿಯಂಡ ಎಂ. ನಾಣಯ್ಯ ಮಾತನಾಡಿ, ಮಡಿಕೇರಿಯ ಆಯಾ ವ್ಯಾಪ್ತಿಗೆ ಒಳಪಟ್ಟು ಒಂದೊಂದು ಕೇರಿಯನ್ನು ಹಲವು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ತರಲಾಗಿದೆ. ಆಯಾ ಕೇರಿಯ ಜನಾಂಗದವರು ಒಟ್ಟಿಗೆ ಸೇರಿ ಪರಸ್ಪರ ವಿಚಾರ ವಿನಿಮಯದೊಂದಿಗೆ ತಮ್ಮ ಜಾನಪದ ಕಲೆಗಳಿಗೂ ಒತ್ತು ನೀಡುವ ಚಿಂತನೆಯಲ್ಲಿ ಪ್ರತಿ 3 ವರ್ಷಗಳಿಗೊಮ್ಮೆ ಅಂತರ ಕೇರಿ ಮೇಳ ಆಚರಿಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸುಬ್ರಹ್ಮಣ್ಯ ಕೊಡವ ಕೇರಿ ಅಧ್ಯಕ್ಷ ಅರೆಯಡ ರಮೇಶ್, ಉಪಾಧ್ಯಕ್ಷ ಕೇಕಡ ಕಿರಣ್, ಸಂಚಾಲಕಿ ಬೊಪ್ಪಂಡ ಸರಳ ಕರುಂಬಯ್ಯ, ಖಜಾಂಚಿ ನಾಟೋಳಂಡ ಪ್ರಕಾಶ್ ಉಪಸ್ಥಿತರಿದ್ದರು.

ಬೇಟೋಳಿಯಲ್ಲಿ ಸಂಜೀವಿನಿ ಸಂತೆ



ಬೇಟೋಳಿ ಗ್ರಾಪಂ ಆವರಣದಲ್ಲಿ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಅಧ್ಯಕ್ಷ ಎ.ಎಂ.ಬೋಪಣ್ಣ ಚಾಲನೆ ನೀಡಿದರು.

ವಿರಾಜಪೇಟೆ, ನ.8–ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ–ಕರ್ನಾಟಕ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ವತಿಯಿಂದ ಬೇಟೋಳಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಸಂಜೀವಿನಿ ಮಾಸಿಕ ಸಂತೆ ಆಯೋಜಿಸಲಾಗಿತ್ತು.

ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಗ್ರಾಪಂ ಅಧ್ಯಕ್ಷ ಎ.ಎಂ.ಬೋಪಣ್ಣ, ಸಂಜೀವಿನಿ ಸಂಘಟನೆ ಮಹಿಳೆಯರು ಮನೆಯಲ್ಲೇ ತರಕಾರಿ ಮತ್ತು ಇತರ ಉತ್ಪನ್ನಗಳ ಬೆಳೆದು ಮೇಳ ನಡೆಸುತ್ತಿರುವುದು ಉತ್ತಮ ಕಾರ್ಯ. ಮುಂದೆ ಮೇಳ ಮತ್ತಷ್ಟು ಯಶಸ್ವಿಯಾಗಿ ನಡೆಯಲಿ ಎಂದರು.

ಈ ಸಂದರ್ಭ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಮಣಿ, ಕಾರ್ಯದರ್ಶಿ ಶಿವಕುಮಾರ್, ಸಂಜೀವಿನಿ ಒಕ್ಕೂಟದ ಸಮುದಾಯ ಸಂಪನ್ಮೂಲ ವ್ಯಕ್ತಿ ಕವಿತಾ, ಬರಹಗಾರ್ತಿ ವಿದ್ಯಾ ಸತೀಶ್, ಪಶು ಸಖಿ ಶೋಭಾ, ಮುತ್ತಮ್ಮ, ತುಳಸಿ ಭಾಸ್ಕರ್, ಆಲಿಡಿಸೋಜ ಮತ್ತು ಗ್ರಾಪಂ ಸದಸ್ಯರು ಹಾಜರಿದ್ದರು.

ಪೆರುಂಬಾಡಿಯಲ್ಲಿ ಆರೋಗ್ಯ ತಪಾಸಣೆ ಶಿಬಿರ

ವಿರಾಜಪೇಟೆ, ನ.8–ಮೈಸೂರಿನ ಓಡಿಪಿ ಸಂಸ್ಥೆ ಹಾಗೂ ಅಮ್ಮತ್ತಿ ಆರ್‌ಐಹೆಚ್‌ಪಿ ರೂರಲ್ ಇಂಡಿಯಾ ಹೆಲ್ತ್ ಪ್ರಾಜೆಕ್ಟ್ ಮತ್ತು ಆರ್ಜಿ ಗ್ರಾಮ ಪಂಚಾಯಿತಿ ಸಹಯೋಗದೊಂದಿಗೆ ಪೆರುಂಬಾಡಿ ಗ್ರಾಮದ ಭಜನಾ ಮಂದಿರ ಸಭಾಂಗಣದಲ್ಲಿ ಆರೋಗ್ಯ ತಪಾಸಣಾ ಉಚಿತ ಶಿಬಿರ ನಡೆಯಿತು.

ಅಮ್ಮತ್ತಿ ಆರ್‌ಐಹೆಚ್‌ಪಿ ಮುಖ್ಯ ವೈದ್ಯಾಧಿಕಾರಿ ಡಾ.ಸಿ.ಕೆ.ಎನ್.ಚಂದ್ರು ಶಿಬಿರಕ್ಕೆ ಚಾಲನೆ ನೀಡಿದರು. ಗ್ರಾಮಸ್ಥರು ಮತ್ತು ಮಹಿಳಾ ಸಂಘದ ಸದಸ್ಯರು ಸೇರಿದಂತೆ 70ಕ್ಕೂ ಹೆಚ್ಚು ಜನರು ತಪಾಸಣೆಗೊಳಪಟ್ಟರು. ಪಿಡಿಓ ಪ್ರಮೋದ್, ಡಾ.ಜಿ.ಕೃಷ್ಣ ಪ್ರಸಾದ್, ಡಾ.ಎಸ್.ನಿಶ್ಚಲ, ಮೇಲ್ವಿಚಾರಕಿ ಶುಭ, ಓಡಿಪಿ ಸಂಸ್ಥೆಯ ಜಿಲ್ಲಾ ಸಂಯೋಜಕ ಜಾಯ್ಸಿಮಿನೇಜಸ್, ಗ್ರಾಪಂ ಕಾರ್ಯದರ್ಶಿ ರಾಜನ್, ಸದಸ್ಯರಾದ ಉಪೇಂದ್ರ, ಜೋಸೆಫ್, ಸುನೀತಾ, ಓಡಿಪಿ ಸಂಸ್ಥೆ ಕಾರ್ಯಕರ್ತರಾದ ರೀಟಾ ಜೋಸೆಫ್, ಅನಿಲ್ ಕುಮಾರ್, ಆಕ್ಷೇಯ್ ಮತ್ತು ಮಹಿಳೋದಯ ಒಕ್ಕೂಟದ ಅಧ್ಯಕ್ಷೆ ಇಂದಿರಾವತಿ ಹಾಗೂ ಅಮ್ಮತ್ತಿ ಆರ್‌ಐಹೆಚ್‌ಪಿ ಸಿಬ್ಬಂದಿ, ಸಂಘದ ಸದಸ್ಯರು ಉಪಸ್ಥಿತರಿದ್ದರು.



ಪೆರುಂಬಾಡಿ ಭಜನಾ ಮಂದಿರದಲ್ಲಿ ನಡೆದ ಶಿಬಿರದಲ್ಲಿ ಆರೋಗ್ಯ ತಪಾಸಣೆ ನಡೆಯಿತು.

ಬಾಲಕಿಯರ ಪ್ರೌಢಶಾಲೆಗೆ ಜಿಪಂ ಸಿಇಓ ಭೇಟಿ

ಶಿಕ್ಷಕರು, ವಿದ್ಯಾರ್ಥಿಗಳೊಂದಿಗೆ ಮೋನಾ ರೋತ್ ಸಂವಾದ



ಚಾಮರಾಜನಗರ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ವಿಭಾಗದ ಪ್ರೌಢಶಾಲೆಗೆ ಭೇಟಿ ನೀಡಿದ ಜಿಪಂ ಸಿಇಓ ಮೋನಾ ರೋತ್ ವಿದ್ಯಾರ್ಥಿಗಳಿಗೆ ಪಾಠ ಮಾಡಿದರು.

ಚಾಮರಾಜನಗರ, ನ.8–ನಗರದ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ವಿಭಾಗದ ಪ್ರೌಢಶಾಲೆಗೆ ಜಿಪಂ ಸಿಇಓ ಮೋನಾ ರೋತ್ ಶುಕ್ರವಾರ ಭೇಟಿ ನೀಡಿ, ಶಿಕ್ಷಕರು ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳೊಂದಿಗೆ ಕಲಿಕಾ ವಿಷಯಗಳ ಕುರಿತು ಸಂವಾದ ನಡೆಸಿದರು.

ತಾಲೂಕು ಮಟ್ಟದ ಸಮಾಜ ವಿಜ್ಞಾನ ಪ್ರಶ್ನೆ ಪತ್ರಿಕೆ ರಚನಾ ಕಾರ್ಯಾಗಾರದಲ್ಲಿ ಭಾಗಿಯಾಗಿದ್ದ ಜಿಪಂ ಸಿಇಓ, ಶಿಕ್ಷಕರ ಬೋಧನಾ ವಿಧಾನ ಹಾಗೂ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಪರಿಶೀಲನೆ ನಡೆಸಿದರು. ಮೊದಲಿಗೆ ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿನಿಯರನ್ನು ಪರಿಚಯ ಮಾಡಿಕೊಂಡು, ಕಳೆದ ವಾರ್ಷಿಕ ಪರೀಕ್ಷೆಯಲ್ಲಿ ವಿವಿಧ ವಿಷಯಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರಶಂಸಿಸಿದರು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲೂ ಉತ್ತಮ ಸಾಧನೆ ಮಾಡಲು ಪ್ರೇರೇಪಿಸಿದರು.

ಪಠ್ಯ ವಿಷಯ ಕುರಿತು ವಿದ್ಯಾರ್ಥಿಗಳಿಗೆ ವಿವಿಧ ಪ್ರಶ್ನೆಗಳನ್ನು ಕೇಳಿದರು. ಕಲಿಕಾ ಪ್ರಕ್ರಿಯೆಯಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸದ ಮಕ್ಕಳಿಂದ ಸಮಸ್ಯೆ ವಿಚಾರಿಸಿ, ಮಾಹಿತಿ ಪಡೆದರು. ಮಕ್ಕಳಿಗೆ ವ್ಯಾಕರಣ, ಪತ್ರ ಬರೆಯುವುದು, ವ್ಯಾಸಂಗ ಪೇರಣಾರ್ಥಕ ಕ್ರಿಯೆಗಳ ಬಗ್ಗೆ ತಿಳಿ ಹೇಳಿದರು.

ವಿದ್ಯಾರ್ಥಿಗಳಿಗೆ ಕಠಿಣವಾದ ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಅರ್ಥೈಸಿಕೊಳ್ಳುವ ರೀತಿ ಪಾಠ–ಪ್ರವಚನ ಮಾಡಬೇಕು. ಪ್ರತಿ ವಿಷಯದಲ್ಲೂ ಮಾದರಿ ಪರೀಕ್ಷೆ ನಡೆಸಬೇಕು. ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಶ್ನೆಯನ್ನು ಕೇಳಬೇಕು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಬೇಕು. ಮಕ್ಕಳ ಮುಂದಿನ ಭವಿಷ್ಯ ರೂಪಿಸುವಲ್ಲಿ ಮುಂದಾಗುವಂತೆ ಶಿಕ್ಷಕರಿಗೆ ಸೂಚಿಸಿದರು.

ಬಳಿಕ ಸ್ವತಃ ಅವರೇ ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವ ಮಾದರಿಯಲ್ಲಿ ಸಮಾಜ ವಿಜ್ಞಾನ ಹಾಗೂ ಹಿಂದಿ ವಿಷಯಗಳ ಕುರಿತು ಪಾಠ ಮಾಡಿ ವಿದ್ಯಾರ್ಥಿಗಳ ಮನಗೆದ್ದರು. ಇದೇ ವೇಳೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಕಾಲೇಜಿನ ಉಪಪ್ರಾಂಶುಪಾಲ ನಂಜುಂಡಸ್ವಾಮಿ ಇತರರು ಇದ್ದರು.

ಜಗಜೀವನರಾಂ ಪುತ್ಥಳಿ ನಿರ್ಮಿಸುವಂತೆ ಮನವಿ...



ಚಾಮರಾಜನಗರ ಜಿಲ್ಲಾಡಳಿತ ಭವನದ ಎದುರು ಹಸಿರು ಕ್ರಾಂತಿ ಹರಿಕಾರ, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಪುತ್ಥಳಿ ನಿರ್ಮಿಸುವಂತೆ ಒತ್ತಾಯಿಸಿ ಡಾ.ಬಾಬು ಜಗಜೀವನರಾಂ ಕನ್ನಡ ಕಲಾ ಯುವಜನ ಸಂಘದ ವತಿಯಿಂದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು. ಸಂಘದ ಗೌರವಾಧ್ಯಕ್ಷ ಲಿಂಗರಾಜು, ಅಧ್ಯಕ್ಷ ಎನ್.ನಿಂಗರಾಜು ಜಗ್ಗ, ಕಾರ್ಯದರ್ಶಿ ಚಿನ್ನಸ್ವಾಮಿ, ಉಪಾಧ್ಯಕ್ಷರಾದ ಪೇಂಟರ್ ಮಹದೇವಸ್ವಾಮಿ, ದೇವರಾಜ್, ಖಜಾಂಚಿ ಶಿವಕುಮಾರ್, ಸಂಚಾಲಕರಾದ ಮಹದೇವಸ್ವಾಮಿ, ಕರವೇ ಅಧ್ಯಕ್ಷ ಚಾ.ಗು.ನಾಗರಾಜು, ಬಾಬು ಜಗಜೀವನರಾಂ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಆರ್.ಎನ್.ಶಿವಣ್ಣ, ಮುಖಂಡರಾದ ಸಿದ್ದಪ್ಪಾಜಿ, ಸಿ.ಚನ್ನಬಸವಯ್ಯ ಲಿಂಗರಾಜು ಇದ್ದರು.

ಚಾ.ನಗರಕ್ಕೆ ರಸಗೊಬ್ಬರ ತಂದ ರೈಲಿಗೆ ಪೂಜೆ

● ದೇಶದ ಆಹಾರ ಉತ್ಪಾದನೆಗೆ ಎಲ್ಲರ ಸಹಕಾರ ಅಗತ್ಯ ● ಕೃಷಿ ಜಂಟಿ ನಿರ್ದೇಶಕ ಆಬಿದ್ ಅಭಿಮತ

ಚಾಮರಾಜನಗರ, ನ.8–ತೂತುಕುಡಿಯಿಂದ ಚಾಮರಾಜನಗರಕ್ಕೆ ಮೊದಲ ಬಾರಿಗೆ ರಸಗೊಬ್ಬರ ಸಾಗಣೆ ಮಾಡಿದ ಗೂಡ್ಸ್ ರೈಲನ್ನು ಜಿಲ್ಲೆಯ ರಸಗೊಬ್ಬರ ಮಾರಾಟಗಾರರು ಸ್ವಾಗತಿಸಿ ಪೂಜೆ ಸಲ್ಲಿಸಿದರು. ನಗರದ ರೈಲ್ವೆ ನಿಲ್ದಾಣಕ್ಕೆ ತೂತುಕುಡಿಯಿಂದ 21 ಬೋಗಿಗಳಲ್ಲಿ ರಸಗೊಬ್ಬರ ತುಂಬಿಕೊಂಡು ಬಂದ ಗೂಡ್ಸ್ ರೈಲುಗೆ ಗೊಬ್ಬರ ಮಾರಾಟಗಾರರು ಪೂಜೆ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಜಂಟಿ ಕೃಷಿ ನಿರ್ದೇಶಕ ಆಬಿದ್, ಜಿಲ್ಲಾಧಿಕಾರಿ, ಕೇಂದ್ರ ಕಚೇರಿಯ ಉನ್ನತಾಧಿಕಾರಿಗಳ ಶ್ರಮದಿಂದ ತೂತುಕುಡಿಯಿಂದ ಚಾಮರಾಜನಗರಕ್ಕೆ ರೈಲಿನ 21 ಬೋಗಿಗಳಲ್ಲಿ ಸ್ಪಿಕ್ ಕಂಪನಿಯ ರಸಗೊಬ್ಬರ ತಂದಿರುವುದು ಶುಭ ಕಾರ್ಯದ ಲಕ್ಷಣಗಳಾಗಿದೆ. ರೈಲ್ವೆ ನಿಲ್ದಾಣದಿಂದ ನಗರದ ಮುಖ್ಯ ರಸ್ತೆವರೆಗೆ ಗುಣಮಟ್ಟದ ರಸ್ತೆ ಆಗಬೇಕಿದೆ. ಸ್ಪಿಕ್ ಕಂಪನಿಯು ಕೂಡ ನಮ್ಮ ಮನವಿಗೆ ಸ್ಪಂದಿಸಿ ರಸಗೊಬ್ಬರ ಕಳುಹಿಸಿದೆ. ಮುಂದಿನ ದಿನಗಳಲ್ಲಿ ಜಿಲ್ಲೆ ಹೆಚ್ಚಿನ ರಸಗೊಬ್ಬರ ಬರಲಿದ್ದು, ಜಿಲ್ಲೆಯಲ್ಲಿ ಯಾವುದೇ ರಸಗೊಬ್ಬರ ಕೊರತೆ ಆಗುವುದಿಲ್ಲ. ದೇಶದ ಆಹಾರ ಉತ್ಪಾದನೆಯಲ್ಲಿ ರೈತರು, ಕೃಷಿ ಇಲಾಖೆ ರಸಗೊಬ್ಬರ ಉತ್ಪಾದಕರು, ಮಾರಾಟಗಾರರು, ಕಾರ್ಮಿಕರು ಒಂದು ಸಂಬಂಧ ಇದ್ದಂಗೆ. ದೇಶದ ಆಹಾರ ಉತ್ಪಾದನೆಯಲ್ಲಿ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.



ತೂತುಕುಡಿಯಿಂದ ಚಾಮರಾಜನಗರಕ್ಕೆ ಪ್ರಥಮ ಬಾರಿಗೆ ರಸಗೊಬ್ಬರ ಸಾಗಣೆ ಮಾಡಿದ ಗೂಡ್ಸ್ ರೈಲಿಗೆ ಜಿಲ್ಲೆಯ ರೈತರು ಹಾಗೂ ರಸಗೊಬ್ಬರ ಮಾರಾಟಗಾರರು ಪೂಜೆ ಸಲ್ಲಿಸಿದರು.

ರೈಲ್ವೆ ಸಮಿತಿ ಸದಸ್ಯ ವಿ.ಪ್ರಭಾಕರ್ ಮಾತನಾಡಿ, ರೈಲ್ವೆ ವಿಭಾಗೀಯ ಅಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲೆಗೆ ಪಡಿತರ ಮಾತ್ರ ಸಾಗಿಸುತ್ತೀರಿ, ರಸಗೊಬ್ಬರ ಸಾಗಣೆ ಏಕೆ? ಮಾಡುತ್ತಿಲ್ಲ ಎಂದು ಗಮನ ಸೆಳೆದ ಪರಿಣಾಮದಿಂದ ಈಗಾಗಲೇ ಮಂಗಳೂರಿನಿಂದ 10 ಬೋಗಿಯಲ್ಲಿ ರಸಗೊಬ್ಬರ ಸಾಗಣೆ ಆಗಿದೆ. ಇಂದು ಕೂಡ ತೂತುಕುಡಿಯಿಂದ 21 ಬೋಗಿಯಲ್ಲಿ ರಸಗೊಬ್ಬರವನ್ನು ರೈಲು ಮೂಲಕ ತಂದಿರುವುದು ಜಿಲ್ಲೆಯ ಜನತೆಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಜನತೆಯ ಬೇಡಿಕೆಯಂತೆ ಲೋಡ್ ಲಾರಿಗಳ ಸಂಚಾರಕ್ಕೆ ಒಳ್ಳೆಯ ರಸ್ತೆ ನಿರ್ಮಾಣ ಹಾಗೂ ರಸಗೊಬ್ಬರವನ್ನು ಮಳೆಗಾಲದಲ್ಲಿ ಅನ್ ಲೋಡ್ ಮಾಡಲು ಸೂಕ್ತ ವ್ಯವಸ್ಥೆಗೆ ರೈಲ್ವೆ ಅಧಿಕಾರಿಗಳ ಸಭೆಯಲ್ಲಿ ಗಮನ ಸೆಳೆಯಲಾಗುವುದು ಎಂದರು.

ಸ್ಪಿಕ್ ಕಂಪನಿ ರಸಗೊಬ್ಬರ ಮಾರಾಟಗಾರ ರಘುಪತಿ ಮಾತನಾಡಿ, ಮೊದಲ ಬಾರಿಗೆ ತೂತುಕುಡಿಯಿಂದ ಚಾಮರಾಜನಗರಕ್ಕೆ ರೈಲು ಮೂಲಕ ರಸಗೊಬ್ಬರ ತಂದಿರುವುದು ಜಿಲ್ಲೆಯ ರೈತರು, ಮಾರಾಟಗಾರರು ಹಾಗೂ ಕಾರ್ಮಿಕರಿಗೆ ಹೆಚ್ಚು ಅನುಕೂಲವಾಗಿದೆ. ಹಿಂದೆ ಮೈಸೂರಿನಿಂದ ಲಾರಿಯಲ್ಲಿ ರಸಗೊಬ್ಬರ ತರಬೇಕಾಗಿತ್ತು. ಇದರಿಂದ ಸಾಗಣೆ ವೆಚ್ಚ, ಸಮಯ ವ್ಯಯವಾಗಿ ಮಾರಾಟಗಾರರಿಗೆ ಹೊರೆಯಾಗುತ್ತಿತ್ತು. ಜೊತೆಗೆ ರಸಗೊಬ್ಬರ ಕೊರತೆ ಎದುರಾಗುತ್ತಿತ್ತು. ಆದರೆ, ಈಗ ರಸಗೊಬ್ಬರ ಕೊರತೆ ಎದುರಾಗುವುದಿಲ್ಲ ಎಂದು ಹೇಳಿದರು.

ಈ ಸಂದರ್ಭ ಸ್ಪಿಕ್ ಗ್ರೀನ್ ಸ್ಟಾರ್ ಫರ್ಟಿಲೈಸರ್ ಕಂಪನಿ ಸಹಾಯಕ ವ್ಯವಸ್ಥಾಪಕ ವಿಜಯ್‌ಕುಮಾರ್ ನಾಯಕ, ಮಾರಾಟಗಾರರಾದ ರವಿ, ಕುಮಾರ್, ಮಹಮ್ಮದ್ ತಾಹಿರ್, ಹನೀಫ್, ಜಿತೇಂದ್ರ ಶಿವಕುಮಾರ್, ವೇಣುಗೋಪಾಲ್, ಮುತ್ತುರಾಜು, ಕಂಪನಿಯ ಮಾರುಕಟ್ಟೆ ಅಭಿವೃದ್ಧಿ ಅಧಿಕಾರಿ ಅಭಿಷೇಕ್ ಇದ್ದರು.

ಅಕ್ರಮವಾಗಿ ಬಂದೂಕು ಇಟ್ಟುಕೊಂಡಿದ್ದ ವ್ಯಕ್ತಿ ಬಂಧನ

ಹನೂರು, ನ.8–ತೋಟದ ಮನೆಯಲ್ಲಿ ಅಕ್ರಮವಾಗಿ ನಾಡಬಂದೂಕು ಇಟ್ಟುಕೊಂಡಿದ್ದ ವ್ಯಕ್ತಿಯನ್ನು ರಾಮಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಅಜ್ಜೀಪುರ ಗ್ರಾಮದ ಗೋವಿಂದರಾಜು(50) ಬಂಧಿತ ಆರೋಪಿ. ಈತ ಅಜ್ಜೀಪುರ ಗ್ರಾಮದ ಮೂಡಲಕಾಡು ಪ್ರದೇಶದಂಚಿನಲ್ಲಿ ಪುಟ್ಟಸ್ವಾಮಿಯ್ಯ ಅವರ ಜಮೀನನ್ನು ಗುತ್ತಿಗೆ ಪಡೆದು ಜಮೀನಿನಲ್ಲಿ ಅಕ್ರಮವಾಗಿ ನಾಡಬಂದೂಕು ಇಟ್ಟುಕೊಂಡಿದ್ದ. ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ಗೋವಿಂದರಾಜುನನ್ನು ಬಂಧಿಸಿ, ನಾಡಬಂದೂಕು ವಶಪಡಿಸಿಕೊಂಡು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನ.11, ಒನಕೆ ಓಬವ್ವ ಜಯಂತಿ

ಚಾ.ನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವೀರ ವನಿತೆ ಒನಕೆ ಓಬವ್ವ ಜಯಂತಿಯನ್ನು ನ.11ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಡಿಸಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.12ರಂದು ದತ್ತು ಮಾಸಾಚರಣೆ ಅರಿವು

ಚಾಮರಾಜನಗರ, ನ.8–ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಯೋಗದಲ್ಲಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ರಾಷ್ಟ್ರೀಯ ದತ್ತು ಮಾಸಾಚರಣೆ ಕುರಿತು ಅರಿವು ಕಾರ್ಯಕ್ರಮವನ್ನು ನ.12 ರಂದು ಬೆಳಗ್ಗೆ 10ಕ್ಕೆ ತಾಲೂಕಿನ ಮರಿಯಾಲ ಗ್ರಾಮದ ಬಸವರಾಜೇಂದ್ರ ನರ್ಸಿಂಗ್ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ.


ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬಸವರಾಜೇಂದ್ರ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಬಸವ ರಾಜೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ರಕ್ಷಣಾಧಿಕಾರಿ ಎನ್.ಚಲುವರಾಜ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ, ಬಸವ ರಾಜೇಂದ್ರ ಆಸ್ಪತ್ರೆ ಸ್ತ್ರೀರೋಗ ತಜ್ಞೆ ಡಾ.ಶ್ವೇತಾ ಶಶಿಧರ್, ಪ್ರಭಾರ ಪ್ರಾಂಶುಪಾಲೆ ಟಿ.ನದಿಯಾ, ಪ್ರಾಂಶುಪಾಲ ಎನ್.ಮಂಜುನಾಥ್, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಸರಸ್ವತಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಗೀರಥ ಪುತ್ಥಳಿ ನಿರ್ಮಾಣಕ್ಕೆ ಸಿಎಂ ಒಪ್ಪಿಗೆ; ಅಭಿನಂದನೆ

ಚಾಮರಾಜನಗರ, ನ.8–ನಗರದ ಜಿಲ್ಲಾಡಳಿತ ಭವನದ ಮುಂಭಾಗ ಮಹರ್ಷಿ ಶ್ರೀ ಭಗೀರಥರು, ವಾಲ್ಮೀಕಿ, ಕನಕದಾಸರ ಪುತ್ಥಳಿ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿರುವುದು ಸ್ವಾಗತಾರ್ಹವಾಗಿದ್ದು, ಸಮುದಾಯದ ಪರವಾಗಿ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದಾಗಿ ಹೊಸದುರ್ಗ ಭಗೀರಥ ಪೀಠದ ಶ್ರೀ ಡಾ.ಪುರುಷೋತ್ತಮಾನಂದಪುರಿ ಸ್ವಾಮೀಜಿ ಹೇಳಿದರು.

ತಾಲೂಕಿನ ದೊಡ್ಡಮೋಳೆ ಗ್ರಾಮ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳುತ್ತಿದ್ದಾಗ ನಗರದ ಬೈಪಾಸ್ ರಸ್ತೆಯಲ್ಲಿ ಜಿಲ್ಲಾ ಉಪ್ಪಾರ ಯುವಕರ ಸಂಘದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವಾಲ್ಮೀಕಿ, ಕನಕದಾಸರು ಹಾಗೂ ತಪಸ್ಸಿನ ಮೂಲಕ ಧರೆಗೆ ದೇವಗಂಗೆ ತಂದ ಮಹರ್ಷಿ ಭಗೀರಥರು ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ಪುತ್ಥಳಿಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಭಗೀರಥರ ಪುತ್ಥಳಿ ನಿರ್ಮಿಸುವುದು ಖುಷಿಯಾಗಿದೆ ಎಂದು ತಿಳಿಸಿದರು.

ಈ ಸಂಬಂಧ ನಾನು, ವಾಲ್ಮೀಕಿಶ್ರೀ, ಕನಕ ಪೀಠಶ್ರೀಗಳು ಚರ್ಚಿಸಲಾಗಿದ್ದು, ಪುತ್ಥಳಿಗಳ ನಿರ್ಮಾಣ ಶಂಕುಸ್ಥಾಪನೆಗೆ ಸರ್ಕಾರ ದಿನಾಂಕ ನಿಗದಿ ಮಾಡಿದರೆ, ಮುಖ್ಯಮಂತ್ರಿಗಳೊಂದಿಗೆ ಮೂರು ಸಮುದಾಯ ಸ್ವಾಮೀಜಿಗಳು ಒಟ್ಟಿಗೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇವೆ. ಇದಕ್ಕೆ ಸಮುದಾಯಗಳ ಸಹಕಾರ ಅಗತ್ಯವಾಗಿದೆ. ಇದೊಂದು ಸಾಮಾಜಿಕ ನ್ಯಾಯವಾಗಿದ್ದು, ಸಮಾಜದಲ್ಲಿ ಸಾಮರಸ್ಯ ಮೂಡಿಸುತ್ತದೆ ಎಂದರು.



ಚಾಮರಾಜನಗರದ ಬೈಪಾಸ್‌ನಲ್ಲಿ ಶ್ರೀ ಡಾ.ಪುರುಷೋತ್ತಮಾನಂದಪುರಿ ಸ್ವಾಮೀಜಿ ಅವರನ್ನು ಜಿಲ್ಲಾ ಉಪ್ಪಾರ ಯುವಕರ ಸಂಘದಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಉಪ್ಪಾರ ಯುವಕರ ಸಂಘದ ಜಿಲ್ಲಾಧ್ಯಕ್ಷ ಜಯಕುಮಾರ್, ಯಳಂದೂರು ಉಪ್ಪಾರ ಸಮಾಜದ ವೈ.ಕೆ.ರಾಜು, ಯರಿಯೂರು ದೊಡ್ಡರಾಜು ಹಾಜರಿದ್ದರು.

ಉಪಚುನಾವಣೆಯ ಖರ್ಚಿಗೆ 50 ಕೋಟಿ ಬೇಡಿಕೆ ಆರೋಪ

ಹೆಚ್‌ಡಿಕೆ ವಿರುದ್ಧದ ಕ್ರಮಕ್ಕೆ ಹೈಕೋರ್ಟ್ ತಡೆ



ಬೆಂಗಳೂರು: ಚನ್ನಪಟ್ಟಣ ವಿಧಾನ ಸಭಾ ಉಪಚುನಾವಣೆಯ ಖರ್ಚಿಗೆ 50 ಕೋಟಿ ಬೇಡಿಕೆ ಇರಿಸಿ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಸಂಬಂಧ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿರುವ ಅರ್ಜಿಯನ್ನು, ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎ.ವಿ.ನಿಶಾಂತ್, ಇದೇ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಜೆಡಿಎಸ್ ನಗರದ ಘಟಕದ ಅಧ್ಯಕ್ಷ ರಮೇಶ್ ಗೌಡ ವಿರುದ್ಧ ಯಾವುದೇ ಬಲವಂತ ಕ್ರಮ ಕೈಗೊಳ್ಳದಂತೆ ಹೈಕೋರ್ಟ್ ಈಗಾಗಲೇ ಆದೇಶಿಸಿದೆ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ಪ್ರಕರಣದ ಮತ್ತೊಬ್ಬ ಆರೋಪಿಯಾಗಿರುವ ಕುಮಾರಸ್ವಾಮಿ ಅವರಿಗೂ ಈ ಹಿಂದಿನ ಆದೇಶ ಅನ್ವಯವಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ವಿಜಯ್ ತಾತಾ ನೀಡಿದ್ದ ದೂರು ಆಧರಿಸಿ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಅಕ್ಟೋಬರ್ 3ರಂದು ರಮೇಶ್ ಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 308(2), 351(2), 3(5) ಅಡಿ ಎಫ್‌ಐಆರ್ ದಾಖಲಿಸಲಾಗಿದೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಏಕಲವ್ಯ ಮಾದರಿ ವಸತಿ ಶಾಲೆ ಮಕ್ಕಳಿಗೆ ಮೂಲ ಸೌಕರ್ಯ ಕಲ್ಪಿಸದ

ಪ್ರಾಂಶುಪಾಲರ ವಿರುದ್ಧ ಕ್ರಮಕ್ಕೆ ಮೇಲಧಿಕಾರಿಗಳಿಗೆ ಪತ್ರ

ಜಿಲ್ಲಾ ಗಿರಿಜನ ಸಮನ್ವಯ ಯೋಜನಾ ಅಧಿಕಾರಿ ಮಲ್ಲೇಶ್



ವಸತಿ ಶಾಲೆ ಮಕ್ಕಳಿಗೆ ಜಿಲ್ಲಾ ಗಿರಿಜನ ಯೋಜನಾ ಸಮನ್ವಯಾಧಿಕಾರಿ ಮಲ್ಲೇಶ್ ಸೋಪ್ ಕಿಟ್ ವಿತರಿಸಿದರು.

ಹೆಚ್.ಡಿ.ಕೋಟೆ, ನ.8– ವಸತಿ ಶಾಲೆ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಪ್ರಾಂಶುಪಾಲರಿಗೆ ಸ್ವಾತಂತ್ರ್ಯ ನೀಡಿದ್ದರೂ, ಅದನ್ನು ನಿಭಾಯಿಸಲು ವಿಫಲರಾಗಿದ್ದಾರೆ. ಹಾಗಾಗಿ ಪ್ರಾಂಶುಪಾಲ ರಾಕೇಶ್ ಚಂದ್ರವರ್ಮ ವಿರುದ್ಧ ಶಿಸ್ತು ಕ್ರಮಕ್ಕೆ ಇಲಾಖೆಯ ಮೇಲಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದು ಜಿಲ್ಲಾ ಗಿರಿಜನ ಸಮನ್ವಯ ಯೋಜನಾ ಅಧಿಕಾರಿ ಮಲ್ಲೇಶ್ ತಿಳಿಸಿದರು.

ಕಳೆದ 6 ತಿಂಗಳಿಂದ ಮಕ್ಕಳಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಿಲ್ಲವೆಂದು ಪೋಷಕರು ಆರೋಪಿಸಿದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಶ್ರೀನಿವಾಸ್ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ವಸತಿ ಶಾಲೆಗೆ ಭೇಟಿ ನೀಡಿ, ಮೂಲ ಸೌಕರ್ಯ ಒದಗಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ತಾಲೂಕಿನ ಸೊಳ್ಳೇಪುರ ಏಕಲವ್ಯ ಮಾದರಿ ವಸತಿ ಶಾಲೆಗೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಹೇಶ್ ಹಾಗೂ ಕಚೇರಿ ಅಧೀಕ್ಷಕ ನಾಗರಾಜು ಅವರೊಂದಿಗೆ ಶುಕ್ರವಾರ ಭೇಟಿ ನೀಡಿ ಪ್ರಾಂಶುಪಾಲ ರಾಕೇಶ್ ಚಂದ್ರವರ್ಮ ಅವರನ್ನು ತರಾಟೆ ತೆಗೆದುಕೊಂಡರು.

ವಸತಿ ಶಾಲೆಯ ಕಡತಗಳನ್ನು ಪರಿಶೀಲಿಸಿದ ಮಲ್ಲೇಶ್ ಅವರು ಆಗಸ್ಟ್‌ನಲ್ಲಿ ಏಕಲವ್ಯ ವಸತಿ ಶಾಲೆ ನಿರ್ವಹಣೆಗೆ 18 ಲಕ್ಷ ರೂ. ಅನುದಾನ ಬಂದಿದ್ದರೂ, ಮಕ್ಕಳಿಗೆ ಸೋಪು, ಪೇಸ್ಟ್, ಟೂಥ್ ಬ್ರಶ್ ಸೇರಿದಂತೆ ಇನ್ನಿತರ ಅಗತ್ಯ ಪರಿಕರಗಳನ್ನು ಏಕೆ ಖರೀದಿಸಿಲ್ಲ. 6 ತಿಂಗಳಿಂದ ಸಮಸ್ಯೆ ಇದ್ದರೂ, ಇಲಾಖೆ ಗಮನಕ್ಕೆ ಏಕೆ ತರಲಿಲ್ಲ. ಸಾಕಷ್ಟು ಹಣವಿದ್ದು, ಬಳಕೆ ಮಾಡಲು ಸ್ವತಂತ್ರ್ಯ ನೀಡಿದ್ದರೂ ನೀವು ಏಕೆ ಮಕ್ಕಳಿಗೆ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಪ್ರಾಂಶುಪಾಲರನ್ನು ತರಾಟೆಗೆ ತೆಗೆದುಕೊಂಡರು.

ಪ್ರಾಂಶುಪಾಲ ರಾಕೇಶ್ ಚಂದ್ರವರ್ಮ ಮಾತನಾಡಿ, ಇಲಾಖೆಯಿಂದ ಮಕ್ಕಳಿಗೆ ಅಗತ್ಯ ವಸ್ತುಗಳು ಸರಬರಾಜಾಗುತ್ತದೆ ಎಂಬ ಕಾರಣಕ್ಕೆ ನಾವು ಖರೀದಿ ಮಾಡಲಿಲ್ಲ. ಜೊತೆಗೆ ಸಹೋದ್ಯೋಗಿಗಳು ಕೂಡ ಸರಿಯಾದ ಮಾರ್ಗದರ್ಶನ ನೀಡಲಿಲ್ಲ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಯೋಜನಾ ಅಧಿಕಾರಿಗಳು ಇಷ್ಟಾದರೂ ಯಾಕೆ ಇಲಾಖೆ ಗಮನಕ್ಕೆ ತರಲಿಲ್ಲ. ನೀವು ಈ ಮೊದಲೇ ತಿಳಿಸಿದ್ದರೆ ಸಮಸ್ಯೆ ಬಗೆಹರಿಸಲು ಕ್ರಮ ವಹಿಸುತ್ತಿದ್ದೆವು. ಆದರೆ ನೀವು ಬೇಜವಾಬ್ದಾರಿಯಿಂದ ಕೆಲಸ ಮಾಡಿದ್ದೀರಾ. ನಿಮಗೆ ವಸತಿ ಶಾಲೆಯಲ್ಲಿ ಕೆಲಸ ಮಾಡುವ ಇಚ್ಛಾಶಕ್ತಿ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

> "ಕಳೆದ 6 ತಿಂಗಳಿಂದ ದಿನಬಳಕೆಯ ಸೋಪು, ಟೂಥ್ ಬ್ರಶ್, ಪೇಸ್ಟ್, ಹೆಣ್ಣು ಮಕ್ಕಳ ವೈಯಕ್ತಿಕ ಸ್ವಚ್ಛತಾ ಕಿಟ್ ವಿತರಿಸಿರಲಿಲ್ಲ. ಈ ವಿಷಯ 'ಮೈಸೂರು ಮಿತ್ರ'ದಲ್ಲಿ ವರದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಆಶ್ರಮ ಶಾಲೆಗೆ ಭೇಟಿ ನೀಡಿ ನಮಗೆ ಸೋಪ್ ಕಿಟ್‌ಗಳನ್ನು ವಿತರಿಸಿ, ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ಭರವಸೆ ನೀಡಿದ್ದಾರೆ. ಅದಕ್ಕೆ 'ಮೈಸೂರು ಮಿತ್ರ'ನಿಗೆ ಧನ್ಯವಾದ.
>
> – ವಿದ್ಯಾರ್ಥಿನಿಯರು, ಏಕಲವ್ಯ ಆಶ್ರಮ ಶಾಲೆ.

ಪೋಷಕರು ಮಾತನಾಡಿ, ವಸತಿ ಶಾಲೆ ಪ್ರಾಂಶುಪಾಲರು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡದೆ ನಿರ್ಲಕ್ಷ್ಯ ತೋರಿದ್ದಾರೆ. ಇದುವರೆಗೂ ಒಂದು ದಿನವೂ ಪೋಷಕರ ಸಭೆ ಕರೆದಿಲ್ಲ. ನೆಪ ಮಾತ್ರಕ್ಕೆ ಪೋಷಕರ ಸಮಿತಿ ಮಾಡಿದ್ದಾರೆ. ಪ್ರಾಂಶುಪಾಲರಿಗೆ ಕನ್ನಡ ಭಾಷೆ ಮಾತನಾಡಲು ಬಾರದಿರುವುದರಿಂದ ನಮ್ಮ ಜೊತೆ ಸರಿಯಾಗಿ ವರ್ತಿಸುತ್ತಿಲ್ಲ. ಇವರಿಂದ ನಮ್ಮ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಅಸಾಧ್ಯ. ಹಾಗಾಗಿ ಇವರ ಮೇಲೆ ಕ್ರಮ ಆಗಬೇಕು ಎಂದು ಒತ್ತಾಯಿಸಿದರು.

ನಂತರ ಮಾತನಾಡಿದ ಯೋಜನಾಧಿಕಾರಿಗಳು, ಪ್ರಾಂಶುಪಾಲರು ನೇರವಾಗಿ ಕೇಂದ್ರ ಸರ್ಕಾರದಿಂದ ಬಂದಿದ್ದೇವೆ ಎಂಬ ಅಹಂನಿಂದ ಈ ರೀತಿ ವರ್ತಿಸುತ್ತಿದ್ದಾರೆ. ಅದಕ್ಕೆ ಅವಕಾಶ ಇಲ್ಲ. ಇನ್ನು ಮುಂದೆ ಏಕಲವ್ಯ ವಸತಿ ಶಾಲೆ ಮೇಲುಸ್ತುವಾರಿಯನ್ನು ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ನೋಡಿಕೊಳ್ಳಲಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ಇಂತಹ ಸಮಸ್ಯೆ ಆಗದಂತೆ ನೋಡಿಕೊಳ್ಳುವುದಾಗಿ ಪೋಷಕರಿಗೆ ಭರವಸೆ ನೀಡಿದರು.

ಇದೇ ವೇಳೆ ವಸತಿ ಶಾಲೆ ಮಕ್ಕಳಿಗೆ ಸೋಪ್ ಕಿಟ್ ವಿತರಿಸಲಾಯಿತು. ನಂತರ ಅಡುಗೆ ಕೋಣೆಗೆ ತೆರಳಿ ಪರಿಶೀಲನೆ ನಡೆಸಿದರು. ಬಳಿಕ ಅಡುಗೆ ಸಿಬ್ಬಂದಿಗೆ ಸ್ವಚ್ಛತೆ ಕಾಪಾಡಲು ತಿಳಿಸಿದರು.

ಈ ವೇಳೆ ವಾರ್ಡನ್ ಆರತಿ, ಸಂತೋಷ್, ಸಿಬ್ಬಂದಿಗಳಾದ ಲೋಕೇಶ್, ರವೀಶ್, ಪೋಷಕರ ಸಮಿತಿ ಅಧ್ಯಕ್ಷ ಜಿ.ಸ್ವಾಮಿ, ಪೋಷಕರಾದ ನಟರಾಜು, ಶಿವರಾಜ ಇದ್ದರು.

ನ.23ಕ್ಕೆ, ಸರಗೂರು ಪಟ್ಟಣ ಪಂಚಾಯಿತಿ ಉಪ ಚುನಾವಣೆ

ಸರಗೂರು, ನ.8– ಇಲ್ಲಿನ ಪಟ್ಟಣ ಪಂಚಾಯಿತಿ 4ನೇ ವಾರ್ಡ್ ಸದಸ್ಯ ಎಸ್.ಎಲ್.ರಾಜಣ್ಣ ಅವರು ನಿಧನರಾದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಚುನಾವಣಾ ಆಯೋಗ ಉಪ ಚುನಾವಣೆ ಘೋಷಿಸಿದ್ದು, ನವೆಂಬರ್ 23ಕ್ಕೆ ಮತದಾನ ನಡೆಯಲಿದೆ.

ಪರಿಶಿಷ್ಟ ಜಾತಿಗೆ ಮೀಸಲಾದ ವಾರ್ಡ್ ನಂ.4ಕ್ಕೆ ಚುನಾವಣಾ ಆಯೋಗ ಉಪಚುನಾವಣೆ ದಿನಾಂಕ ಪ್ರಕಟಿಸಿದ್ದು, ಚುನಾವಣಾ ಅಧಿಸೂಚನೆ ಜಾರಿಗೆ ಬಂದಿದೆ. ನ.11ಕ್ಕೆ ನಾಮಪತ್ರ ಸಲ್ಲಿಸಲು ಕೊನೆ ದಿನ. ನ.12 ಪರಿಶೀಲನೆ, ನ.14 ನಾಮಪತ್ರ ಹಿಂಪಡೆಯಲು ಕೊನೆ ದಿನ. ನ.23 ರಂದು ಬೆಳಗ್ಗೆ 7ರಿಂದ 5ರವರೆಗೆ ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆ (ಪೂರ್ವ ಭಾಗ) ಯಲ್ಲಿ ಮತದಾನ ನಡೆಯಲಿದ್ದು, ನ.26 ರಂದು ಫಲಿತಾಂಶ ಪ್ರಕಟವಾಗಲಿದೆ ಎಂದು ಚುನಾವಣಾಧಿಕಾರಿ ಜಿ.ಪುರುಷೋತ್ತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರುಗಳ ನಡುವೆ ಡಿಕ್ಕಿ: ಓರ್ವ ಸಾವು



ಹುಣಸೂರು, ನ.8– ಕಾರುಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಸಾವನ್ನಪ್ಪಿ, ಮೂವರು ಗಾಯಗೊಂಡಿರುವ ಘಟನೆ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 275ರ ಬನ್ನಿಕುಪ್ಪೆ ಸಮೀಪದ ಮಧುಗಿರಿಕೊಪ್ಪಲು ಗ್ರಾಮದ ಗೇಟ್ ಬಳಿ ಶುಕ್ರವಾರ ಸಂಜೆ ನಡೆದಿದೆ.

ನಗರದ ಸರಸ್ವತಿಪುರಂ ಬಡಾವಣೆ ನಿವಾಸಿ ರಾಚಯ್ಯ ಅವರ ಪುತ್ರ ಸಂಜಯ್ ಉರುಫ್ ಸಂಜು(38) ಸಾವನ್ನಪ್ಪಿದವರು. ರಾಮಪಟ್ಟಣದ ರಾಮಣ್ಣ, ಕೆಂಚ ಹಾಗೂ ನಗರದ ಎನ್‌ಇಎಸ್ ಕಾಲೋನಿಯ ಲಿಂಗಪ್ಪ ಅವರ ಮಗ ನಿತಿನ್ ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಂದು ಸಂಜೆ ಸಂಜಯ್ ಕ್ರೇಟಾ (ಕೆಎ.09, ಎಂ.ಜಿ.9185) ಕಾರಿನಲ್ಲಿ ರಾಮಣ್ಣ ಹಾಗೂ ಕೆಂಚ ಅವರೊಂದಿಗೆ ಮೈಸೂರಿನಿಂದ ಹುಣಸೂರಿಗೆ ಬರುತ್ತಿದ್ದರು. ಈ ವೇಳೆ ಹುಣಸೂರಿನಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಇನ್ನೋವಾ(ಕೆಎ.03, ಎಕೆ.9585) ಕಾರು ವೇಗವಾಗಿ ಬಂದು ಡಿಕ್ಕಿ ಹೊಡೆದಿದೆ. ಪರಿಣಾಮ ಕ್ರೇಟಾ ಕಾರಿನಲ್ಲಿದ್ದ ಸಂಜಯ್ ಸ್ಥಳದಲ್ಲೇ ಸಾವನ್ನಪ್ಪಿದರೇ, ರಾಮಣ್ಣ ಹಾಗೂ ಕೆಂಚ ತೀವ್ರವಾಗಿ ಗಾಯಗೊಂಡಿದ್ದಾರೆ. ಇನ್ನೋವಾ ಕಾರು ಚಾಲನೆ ಮಾಡುತ್ತಿದ್ದ ನಿತಿನ್ ಕಾಲು ಮುರಿದಿದ್ದು, ಗಾಯಾಳುಗಳನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಲೋಲಾಕ್ಷಿ ಮತ್ತು ಸಿಬ್ಬಂದಿ ಪರಿಶೀಲನೆ ನಡೆಸಿ ವಾಹನಗಳನ್ನು ವಶಕ್ಕೆ ಪಡೆದು, ಶವವನ್ನು ಆಸ್ಪತ್ರೆಗೆ ರವಾನಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಪ್ರಧಾನ ಹಣ್ಣುಗಳ ಬೇಸಾಯ ಕುರಿತ ವಿಚಾರ ಸಂಕಿರಣ ಕಾರ್ಯಕ್ರಮ

ರೈತರು ಪರ್ಯಾಯ ಬೆಳೆ ಬೆಳೆದು ಹೆಚ್ಚು ಲಾಭ ಗಳಿಸಿ



ರೈತರಿಗೆ ಕೆ.ಪಿ.ಜಗದೀಶ್ ಅವರ ತೋಟದ ಬೆಳೆಗಳ ಬಗ್ಗೆ ಅಧಿಕಾರಿಗಳು ಪ್ರಾತ್ಯಕ್ಷಿಕೆ ನೀಡಿದರು.

ಕೆ.ಆರ್.ನಗರ, ನ.8– ರೈತರು ಆಹಾರ ಬೆಳೆಗಳನ್ನು ಬೆಳೆಯುವ ಜೊತೆಗೆ ಪರ್ಯಾಯ ಬೆಳೆಗಳನ್ನು ಬೆಳೆದು ಹೆಚ್ಚು ಲಾಭ ಗಳಿಸಬೇಕು ಎಂದು ಜಿಪಂ ಮಾಜಿ ಸದಸ್ಯ ಶಿವರಾಮು ಸಲಹೆ ನೀಡಿದರು.

ತಾಲೂಕಿನ ಕೆಂಪನಕೊಪ್ಪಲು ಗ್ರಾಮದ ಪ್ರಗತಿಪರ ರೈತ ಕೆ.ಪಿ.ಜಗದೀಶ್ ಅವರ ಕಾಳೇನಹಳ್ಳಿ ಗ್ರಾಮದ ಜಮೀನಿನಲ್ಲಿ ಶುಕ್ರವಾರ ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಮತ್ತು ಕೆ.ಆರ್. ನಗರ ತಾಲೂಕು ಅರ್ಕೇಶ್ವರಸ್ವಾಮಿ ರೈತ ಉತ್ಪಾದಕರ ಸಂಸ್ಥೆ ಸಹಯೋಗದಲ್ಲಿ ನಡೆದ ಅಪ್ರಧಾನ ಹಣ್ಣುಗಳ ಬೇಸಾಯ ಕುರಿತ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈತರು ವಾಣಿಜ್ಯ ಬೆಳೆಯಾಗಿ ಬೆಳೆಯುವ ಹಣ್ಣುಗಳನ್ನು ಅಪ್ರಧಾನ ಹಣ್ಣುಗಳು ಎಂದು ಕರೆಯಲಿದ್ದು, ಈ ವಿಚಾರದಲ್ಲಿ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸಲಹೆ ಮತ್ತು ಮಾರ್ಗದರ್ಶನ ಪಡೆದು ತಮ್ಮ ಜಮೀನಿನಲ್ಲಿ ಹೆಚ್ಚುವರಿಯಾಗಿ ಇವುಗಳನ್ನು ಬೆಳೆಯಬೇಕೆಂದು ಸಲಹೆ ನೀಡಿದರು.

ಕಡ್ಡಾಯವಾಗಿ ಮಣ್ಣಿನ ಪರೀಕ್ಷೆ ಮಾಡಿಸಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಬೆಳೆ ಬೆಳೆದರೆ ಲಾಭ ಗಳಿಸಲು ಸಾಧ್ಯವಾಗುವ ಜೊತೆಗೆ ಅನಗತ್ಯವಾಗಿ ರಾಸಾಯನಿಕ ಗೊಬ್ಬರಗಳ ಬಳಕೆ ತಪ್ಪಲಿದ್ದು, ಇದನ್ನು ಎಲ್ಲರೂ ಅರಿಯಬೇಕು ಎಂದರು.

ಮೈಸೂರು ತೋಟಗಾರಿಕೆ ಹಣ್ಣುಗಳ ವಿಭಾಗದ ಮಹಾ ವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಮನು ಕುಮಾರ್ ಮಾತನಾಡಿ, ಕರ್ನಾಟಕ ಹಣ್ಣುಗಳ ಉತ್ಪಾದನೆಯಲ್ಲಿ ದೇಶದಲ್ಲೇ 2ನೇ ಸ್ಥಾನದಲ್ಲಿದ್ದು, ಭವಿಷ್ಯದಲ್ಲಿ ಮೊದಲ ಸ್ಥಾನ ಗಳಿಸುವತ್ತ ದಾಪುಗಾಲು ಹಾಕುತ್ತಿದೆ. ಅದನ್ನು ಸಾಧಿಸದರೆ ರೈತರ ಆರ್ಥಿಕ ಸ್ಥಿತಿ ಗಣನೀಯವಾಗಿ ಏರಿಕೆಯಾಗಲಿದೆ ಎಂದರು. ವಿಶ್ವದ ಆಗ್ನೇಯ ಏಷ್ಯಾ, ಆಫ್ರಿಕಾ, ಅಮೆರಿಕಾದ ದಕ್ಷಿಣ, ಉತ್ತರ ಮತ್ತು ಮಧ್ಯ ಭಾಗಗಳಲ್ಲಿ ಡ್ರಾಗನ್ ಫ್ರೂಟ್ಸ್ ಅನ್ನು ಹೆಚ್ಚಾಗಿ ಬೆಳೆಯುತ್ತಿದ್ದು, ಅದು ಮನುಷ್ಯನ ಆರೋಗ್ಯಕ್ಕೆ ಅತ್ಯಂತ ಉತ್ತಮ ಎಂದು ಸಂಶೋಧನೆಯಿಂದ ತಿಳಿದು ಬಂದಿರುವುದರಿಂದ ಬೇಡಿಕೆ ಹೆಚ್ಚಾಗಿದ್ದು ರಾಜ್ಯದ ರೈತರು ಹವಮಾನಕ್ಕೆ ಅನುಗುಣವಾಗಿ ಇಲ್ಲಿಯೂ ಬೆಳೆಯಬೇಕೆಂದು ಹೇಳಿದರು.

ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಟಿ.ಎಸ್.ಭಾರತಿ ಮಾತನಾಡಿ, ಹಣ್ಣುಗಳಿಂದ ರೈತರಿಗೆ ಆಗುವ ಪ್ರಯೋಜನಗಳು ಮತ್ತು ಅವುಗಳನ್ನು ಬೆಳೆಯಲು ಇಲಾಖೆಯಿಂದ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಿಂದಲೂ ಸಹಾಯಧನ ಪಡೆಯಬಹುದು ಎಂದು ವಿವರಿಸಿದರು.

ದೊಡ್ಡೆಕೊಪ್ಪಲು ಗ್ರಾಪಂ ಅಧ್ಯಕ್ಷೆ ರಾಜೇಶ್ವರಿ, ಮಾಜಿ ಅಧ್ಯಕ್ಷೆ ಮಮತ, ನಂಜುಂಡ, ಅರ್ಕೇಶ್ವರ ಸ್ವಾಮಿ ರೈತ ಉತ್ಪಾದಕರ ಸಂಸ್ಥೆಯ ಕೆ.ಎಂ. ಶ್ರೀನಿವಾಸ್, ರೈತ ಮುಖಂಡರಾದ ಎಂ.ಎಸ್. ನಟರಾಜು, ಕೆಂಪೇಗೌಡ, ಮಹದೇವ್, ವೆಂಕಟೇಗೌಡ, ಬಲರಾಮು, ಸಣ್ಣಮಾಲೇಗೌಡ, ವೆಂಕಟರಾಮು, ರವಿ, ಜಗದೀಶ್, ಕೃಷ್ಣೇಗೌಡ, ಶಂಕರ್ ರಾವ್ ಬಾಂಗೆ, ಅಂಬರೀಶ್ ಸೇರಿದಂತೆ ನೂರಕ್ಕೂ ಅಧಿಕ ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಹೆಜ್ಜೇನು ದಾಳಿಗೆ ರೈತ ಸಾವು



ನಂಜನಗೂಡು, ನ.8– ಹೆಜ್ಜೇನು ದಾಳಿಯಿಂದ ರೈತ ಸಾವನ್ನಪ್ಪಿರುವ ಘಟನೆ ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ಮಾದನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹದೇವಸ್ವಾಮಿ(50) ಸಾವನ್ನಪ್ಪಿದವರು. ಈತ ಕಳೆದ 3 ದಿನಗಳ ಹಿಂದೆ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಎತ್ತುಗಳೊಂದಿಗೆ ಮನೆಗೆ ಬರುವ ಮಾರ್ಗ ಮಧ್ಯ ಹೆಜ್ಜೇನು ದಾಳಿ ನಡೆಸಿದೆ. ಈ ವೇಳೆ ಹೆಜ್ಜೇನು ದಾಳಿಯಿಂದ ತಪ್ಪಿಸಿಕೊಳ್ಳಲು ರೈತ ಮಹದೇವಸ್ವಾಮಿ ಪ್ರಯತ್ನಿಸಿದರೂ ಸಾಧ್ಯವಾಗದೇ ತೀವ್ರ ಅಸ್ವಸ್ಥಗೊಂಡ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿತ್ತು. ಆದರೆ ಸಾವು ಮತ್ತು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ಮಹದೇವಸ್ವಾಮಿ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಮುಂಜಾನೆ ಮೃತಪಟ್ಟಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಪಂ ಸದಸ್ಯ ಸ್ಥಾನಗಳಿಗೆ ಉಪಚುನಾವಣೆ

ಹಿರೀಕ್ಯಾತನಹಳ್ಳಿ, ನ.8– ಗಾವಡಗೆರೆ ಹೋಬಳಿಯ 2 ಗ್ರಾಪಂಗಳಲ್ಲಿ ತೆರವಾಗಿರುವ ಸದಸ್ಯರ ಸ್ಥಾನಕ್ಕೆ ನ.23ರಂದು ಉಪ ಚುನಾವಣೆ ನಡೆಯಲಿದೆ.

ಬಿಳಿಗೆರೆ ಗ್ರಾಪಂ ವ್ಯಾಪ್ತಿಯ ಮಾರಗೌಡನಹಳ್ಳಿ ಗ್ರಾಮದ ರುಕ್ಮಿಣಿ ಅವರ ಅಕಾಲಿಕ ಮರಣದಿಂದ ತೆರವಾದ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದು, ಮುಳ್ಳೂರು ಗ್ರಾಪಂ ವ್ಯಾಪ್ತಿಯ ಮಾಚಬಾಯನಹಳ್ಳಿ ಗ್ರಾಮದ ಶಿವಣ್ಣ ನಾಯಕ ಅವರ ನಿಧನದಿಂದ ತೆರವಾದ ಸ್ಥಾನ ಅನುಸೂಚಿತ ಪಂಗಡಕ್ಕೆ ಮೀಸಲಾಗಿದ್ದು, 2 ಗ್ರಾಪಂ ವ್ಯಾಪ್ತಿಯವರು ಆಯಾಯ ಗ್ರಾಪಂ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಬಹುದು.

ನ.12ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ನ.13ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ನ.15 ರಂದು ಉಮೇದುವಾರಿಕೆ ಹಿಂಪಡೆಯುವುದು. ನ.23ರಂದು ಅವಶ್ಯವಿದ್ದರೆ ಮತದಾನ. ನ.26ರಂದು ಹುಣಸೂರಿನ ತಾಲೂಕು ಕಚೇರಿಯಲ್ಲಿ ಮತ ಎಣಿಕೆ ನಡೆಯಲಿದ್ದು, ಬಿಳಿಗೆರೆ ಗ್ರಾಪಂ ಉಪಚುನಾವಣಾಧಿಕಾರಿಯಾಗಿ ಡಾ.ಚಂದ್ರು ಸಹಾಯಕ ಚುನಾವಣಾಧಿಕಾರಿಯಾಗಿ ಹರೀಶ್, ಮುಳ್ಳೂರು ಗ್ರಾಪಂ ಉಪ ಚುನಾವಣಾಧಿಕಾರಿಯಾಗಿ ಎಚ್.ಎಸ್.ಲೋಕೇಶ್, ಸಹಾಯಕ ಚುನಾವಣಾಧಿಕಾರಿಯಾಗಿ ಮಂಜುನಾಥ್ ಕರ್ತವ್ಯ ನಿರ್ವಹಿಸಲಿದ್ದಾರೆ.

ಆನ್‌ಲೈನ್ ಬೆಟ್ಟಿಂಗ್ ರದ್ದಿಗೆ ಆಗ್ರಹಿಸಿ ಪ್ರತಿಭಟನೆ



ಆನ್‌ಲೈನ್ ಬೆಟ್ಟಿಂಗ್ ದಂಧೆ ರದ್ದುಪಡಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ, ನ.8– ಆನ್‌ಲೈನ್ ಬೆಟ್ಟಿಂಗ್ ದಂಧೆ ರದ್ದುಪಡಿಸುವಂತೆ ಆಗ್ರಹಿಸಿ ನಮ್ಮ ಕರ್ನಾಟಕ ಸೇನೆ ಕಾರ್ಯಕರ್ತರು ಹಾಗೂ ಮುಖಂಡರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಆನ್‌ಲೈನ್ ಬೆಟ್ಟಿಂಗ್ ದಂಧೆ ವಿರುದ್ಧ ಧಿಕ್ಕಾರ ಕೂಗುತ್ತಾ ತಾಲೂಕು ಕಚೇರಿಗೆ ಆಗಮಿಸಿ ಕೆಲಕಾಲ ಪತ್ರಿಭಟನೆ ನಡೆಸಿ ಹಕ್ಕೋತ್ತಾಯದ ಮನವಿ ಪತ್ರವನ್ನು ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಸಲ್ಲಿಸಿದರು.

ಜಿಲ್ಲಾಧ್ಯಕ್ಷ ಜಿ.ಮುರುಗನ್ ಮಾತನಾಡಿ, ಆನ್‌ಲೈನ್ ಬೆಟ್ಟಿಂಗ್ ದಂಧೆಗೆ ಯುವಕರು ಹಾಗೂ ವಿದ್ಯಾರ್ಥಿಗಳು ಬಲಿಯಾಗಿ ಅರ್ಧಕ್ಕೆ ವಿದ್ಯಾಭ್ಯಾಸ ಮೊಟಕುಗೊಳಿಸಿಕೊಂಡು ತಮ್ಮ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕೂಲಿ ಮಾಡಿ ಜೀವನ ನಡೆಸುವ ಮಧ್ಯಮ ವರ್ಗ ಜನರು ಹಾಗೂ ಬಡ ಕೂಲಿ ಕಾರ್ಮಿಕರು ಕೂಡ ಬೆಟ್ಟಿಂಗ್ ಆಸೆಗೆ ದುಡಿದ ಹಣ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ ಬೆಟ್ಟಿಂಗ್ ದಂಧೆ ರದ್ದುಗೊಳಿಸಬೇಕು. ತಪ್ಪಿದ್ದಲ್ಲಿ ನಮ್ಮ ಕರ್ನಾಟಕ ಸೇನೆ ಹೋರಾಟ ತೀವ್ರಗೊಳಿಸಲಿದೆ ಎಂದು ಎಚ್ಚರಿಸಿದರು.

ತಾಲೂಕು ಮಹಿಳಾ ಅಧ್ಯಕ್ಷೆ ವಿ.ಮಂಜುಳಾ ಮಾತನಾಡಿ, ಬಹುತೇಕ ಮಂದಿ ಆನ್‌ಲೈನ್ ಬೆಟ್ಟಿಂಗ್ ಬಲೆಗೆ ಸಿಲುಕಿ ಹಣ ಕಳೆದುಕೊಳ್ಳುತ್ತಿರುವುದರಿಂದ ಅವರ ಮನೆಯವರು ಕಣ್ಣೀರಿಡುತ್ತಿದ್ದಾರೆ. ಯುವಕರ ಭವಿಷ್ಯ ಹಾಗೂ ಬಡವರ ಬದುಕು ಹಾಳಾಗುವುದನ್ನು ತಪ್ಪಿಸಲು ಆನ್‌ಲೈನ್ ದಂಧೆಯನ್ನು ಈಗಾಗಲೇ ನೆರೆಯ ತೆಲಂಗಾಣ, ಒರಿಸ್ಸಾ ಅಸ್ಸಾಂ ಹಾಗೂ ಇನ್ನೂ ಹಲವು ರಾಜ್ಯಗಳಲ್ಲಿ ರದ್ದು ಪಡಿಸಿದೆ. ಆದ್ದರಿಂದ ಸರ್ಕಾರ ರಾಜ್ಯದಲ್ಲೂ ಆನ್‌ಲೈನ್ ಬೆಟ್ಟಿಂಗ್ ಅನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಮಾದೇಶ್, ಗೌರವಾಧ್ಯಕ್ಷ ಅಂಬರೀಶ್, ಉಪಾಧ್ಯಕ್ಷ ಎಂ.ಗಣೇಶ್, ಪ್ರಚಾರ ಸಮಿತಿ ಅಧ್ಯಕ್ಷ ಬಸವರಾಜು, ಸಂಚಾಲಕ ರವಿ, ಜಂಟಿ ಕಾರ್ಯದರ್ಶಿ ಲಿಂಗರಾಜು, ಮುಖಂಡರಾದ ಪ್ರದೀಪ್, ಕೃಷ್ಣ, ಚೇತನ್, ಮಹದೇವ ನಾಯಕ, ನಾಗೇಂದ್ರ, ರಾಮು, ಸುಭಾಷ್, ವಿಕಾಸ, ವೆಂಕಟರಮಣ, ರಘು, ಮಂಜುನಾಥ ನಾಯಕ, ಶ್ರೀನಿವಾಸ, ಲೋಕೇಶ್, ನಾಗೇಂದ್ರ, ಮೂರ್ತಿ, ಕೃಷ್ಣಸ್ವಾಮಿ, ರಾಚಪ್ಪಾಜಿ, ಪುಟ್ಟಸ್ವಾಮಿ, ಮಣಿ, ಜೋಗಿ, ಲಕ್ಷ್ಮಿ, ಶೃತಿ, ಕೆ.ಶೋಭ, ಎಸ್. ಸುಮ, ಸವಿತಾ, ಹೇಮ, ಸುಶೀಲ, ಲಕ್ಷ್ಮಮ್ಮ, ಆಟೋ ಚಾಲಕರಾದ ಸುರೇಶ್, ರವಿ ಇತರರಿದ್ದರು.

ಶಾಸಕರಿಗೆ ಹುಟ್ಟುಹಬ್ಬದ ಶುಭಾಶಯ



ಅರಕಲಗೂಡು ಕ್ಷೇತ್ರದ ಶಾಸಕ ಎ.ಮಂಜು ಅವರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ಹೂಗುಚ್ಛ ನೀಡಿ ಹುಟ್ಟುಹಬ್ಬದ ಶುಭ ಕೋರಿದರು.

ತಾಯೂರು ಪ್ರಕಾಶ್‌ಗೆ ವಾಲ್ಮೀಕಿ ಸೇವಾರತ್ನ ಪ್ರಶಸ್ತಿ



ತಿ.ನರಸೀಪುರ, ನ.8– ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಅವರು ದೊಡ್ಡಬಳ್ಳಾಪುರದ ಮಹರ್ಷಿ ಶ್ರೀವಾಲ್ಮೀಕಿ ಗುರುಕುಲ ಪೀಠ ನೀಡುವ ರಾಜ್ಯ ಮಟ್ಟದ ವಾಲ್ಮೀಕಿ ಸೇವಾರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತಿದ್ದು, ನ.9ರಂದು ಬೆಂಗಳೂರಿನ ಮೆಜೆಸ್ಟಿಕ್ ಬಳಿಯ ಗಾಂಧಿನಗರದ ಬಾಪೂ ಸಭಾಂಗಣದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಗುರುಪೀಠ ಹಾಗೂ ಕರ್ನಾಟಕ ವಾಲ್ಮೀಕಿ ನೌಕರರ ಒಕ್ಕೂಟದಿಂದ ಹಮ್ಮಿಕೊಳ್ಳುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ನಡೆಯಲಿದ್ದು, ಕಾರ್ಯಕ್ರಮದ ಸಾನಿಧ್ಯವನ್ನು ದೊಡ್ಡಬಳ್ಳಾಪುರದ ಶ್ರೀವಾಲ್ಮೀಕಿ ಗುರುಪೀಠದ ಶ್ರೀವಾಲ್ಮೀಕಿ ಬ್ರಹ್ಮಾನಂದ ಗುರೂಜಿ ವಹಿಸಲಿದ್ದಾರೆ ಎಂದು ಸಂಘದ ರಾಜ್ಯಾಧ್ಯಕ್ಷ ಪಿ.ಮೋಹನ್ ಕಿಶೋರ್ ತಿಳಿಸಿದ್ದಾರೆ.

ತಾಯೂರು ಪ್ರಕಾಶ್ ಅವರಿಗೆ ಈ ಹಿಂದೆ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ನೀಡಲಾಗುವ ಕನ್ನಡ ವಿಕಾಸ ರತ್ನಪ್ರಶಸ್ತಿ, ಆದರ್ಶ ಪುರುಷ ರತ್ನ, ಬೆಂಗಳೂರಿನ ದಿವ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡುವ ಸಮಾಜ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ನಿಖಿಲ್ ಗೆಲುವು ಖಚಿತ: ಬಿ.ಹರ್ಷವರ್ಧನ್ ವಿಶ್ವಾಸ



ಮಲ್ಲುಂಡಿ, ನ.8– ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಉಪ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಗೆಲುವು ಖಚಿತ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಶೋಷಣೆ ಮಾಡಿ, ಅವರಿಗೆ ಮಾನಸಿಕ ಹಿಂಸೆ ನೀಡಿದ ಕಾಂಗ್ರೆಸ್ ಪಕ್ಷವನ್ನು ದಲಿತರು ತಿರಸ್ಕರಿಸಬೇಕು ಎಂದ ಅವರು ಬುಡಕಟ್ಟು ಸಮುದಾಯದ ಹೆಣ್ಣುಮಗಳು ಈ ಪುಣ್ಯಭೂಮಿಯ ರಾಷ್ಟ್ರಪತಿಯಾಗಿದ್ದಾರೆ ಎಂದರೆ ಅದು ಸಾಮಾನ್ಯ ವಿಚಾರ ವಲ್ಲ. ಪ್ರಪಂಚವೇ ಈ ವಿಚಾರವಾಗಿ ಪ್ರಧಾನಿ ಮೋದಿ ಅವರ ಸಂಸ್ಕಾರ ನೆನೆಯುತ್ತದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಗ್ಯಾರಂಟಿ ಹೆಸರಿನಲ್ಲಿ ರಾಜ್ಯದ ಜನತೆ ಮೇಲೆ ಸಾಲದ ಹೊರೆ ಹೊರಸಿದ್ದಾರೆ. ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಕಂಡು ಚನ್ನಪಟ್ಟಣದ ಜನತೆ ಈ ಬಾರಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ಅತೀ ಹೆಚ್ಚು ಮತಗಳಿಂದ ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನ.18ಕ್ಕೆ, ವಿಜೃಂಭಣೆಯ ಕನಕದಾಸ ಜಯಂತಿ

ಪೂರ್ವಭಾವಿ ಸಭೆಯಲ್ಲಿ ನಿರ್ಧಾರ



ತಿ.ನರಸೀಪುರ ತಾಪಂ ಸಭಾಂಗಣದಲ್ಲಿ ನಡೆದ ಕನಕದಾಸರ ಜಯಂತಿ ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿದರು.

ತಿ.ನರಸೀಪುರ, ನ.8– ಪಟ್ಟಣದಲ್ಲಿ ನ.18 ರಂದು ಸಂತ ಶ್ರೇಷ್ಠ ಕನಕದಾಸರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ತಾಲೂಕು ಆಡಳಿತ ಹಾಗೂ ಕುರುಬರ ಸಂಘದ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮದ ಯಶಸ್ಸಿಗೆ ಸಿದ್ಧತೆ ಕೈಗೊಂಡು ಪಟ್ಟಣದ ತಾಲೂಕು ಕಚೇರಿ ಮುಂಭಾಗದ ರಸ್ತೆಯಲ್ಲಿ ಜಯಂತಿ ಕಾರ್ಯಕ್ರಮಕ್ಕೆ ವೇದಿಕೆ ಹಾಕಿ, ಉತ್ಸವದ ಮೆರವಣಿಗೆ ಆಯೋಜಿಸುವುದು. ಮುಖ್ಯ ಭಾಷಣಕಾರರನ್ನು ಆಹ್ವಾನಿಸುವ ಬಗ್ಗೆ ಹಾಗೂ ಐವರು ಸಾಧಕರನ್ನು ಗುರುತಿಸಿ, ಸನ್ಮಾನಿಸಲು ಸದರಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ತಾಪಂ ಮಾಜಿ ಸದಸ್ಯ ಎಂ.ರಮೇಶ್ ಮಾತನಾಡಿ, ಸಾಮಾಜಿಕ ಅಸಮಾನತೆಯ ವಿರುದ್ಧ ಕೀರ್ತನೆಗಳ ಮೂಲಕ ಜಾಗೃತಿ ಮೂಡಿಸಿದ ಕನಕದಾಸರ ಜಯಂತಿ ಸಂಭ್ರಮದಲ್ಲಿ ಹಿಂದುಳಿದ ವರ್ಗಗಳ ತಳ ಸಮುದಾಯದ ಜನರು ಭಾಗಿಯಾಗಬೇಕು. ಅಂತಹವರನ್ನು ಗುರುತಿಸಿ, ಮುಖ್ಯವಾಹಿನಿಗೆ ತರುವ ಕೆಲಸವನ್ನು ತಾಲೂಕು ಆಡಳಿತ ಮಾಡಬೇಕು. ಕಾರ್ಯಕ್ರಮಕ್ಕೆ ಸಿಎಂ ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಹಾಗೂ ವಿಧಾನ ಪರಿಷತ್ ಸದಸ್ಯರನ್ನು ಆಹ್ವಾನಿಸಬೇಕು. ವಿದ್ಯೋದಯ ಕಾಲೇಜು ಆವರಣದಲ್ಲಿ ಸಮಾರಂಭದ ವೇದಿಕೆ ಹಾಕಬೇಕೆಂದು ಸಲಹೆ ನೀಡಿದರು. ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ವಿದ್ಯೋದಯ ಕಾಲೇಜು ಆವರಣದ ಬದಲು ತಾಲೂಕು ಕಚೇರಿ ಮುಂಭಾಗವೇ ಜಯಂತಿ ಸಮಾರಂಭ ಆಯೋಜಿಸಿ. ಸಂತ ಶ್ರೇಷ್ಠರ ಜಯಂತಿಯಲ್ಲಿ ಪ್ರಾಮಾಣಿಕ ಸಾಧಕರನ್ನು ಗುರುತಿಸಬೇಕು. ಕುರುಬರ ಸಂಘದ ಪ್ರಮುಖರು, ಸಿಎಂ ಸಿದ್ದರಾಮಯ್ಯ, ಸಚಿವ ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಪರಿಷತ್ ಸದಸ್ಯ ಡಾ. ಯತೀಂದ್ರ ಅವರನ್ನು ಭೇಟಿಯಾಗಿ ಕಾರ್ಯಕ್ರಮದ ಆಯೋಜನೆಗೆ ಸಹಕಾರ ನೀಡುವಂತೆ ಮನವಿ ಸಲ್ಲಿಸಬೇಕು. ಶಿಷ್ಟಾಚಾರದ ಪಾಲನೆಯ ಜವಾಬ್ದಾರಿಯನ್ನು ತಾಲೂಕು ಆಡಳಿತಕ್ಕೆ ಬಿಡಬೇಕೆಂದು ತಿಳಿಸಿದರು.

ಸಲಹೆಗಳನ್ನು ಆಲಿಸಿದ ತಹಸೀಲ್ದಾರ್ ಟಿ.ಜಿ. ಸುರೇಶ್ ಆಚಾರ್ ಮಾತನಾಡಿ, ಕುರುಬರ ಸಂಘದ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯ ಶಿಷ್ಟಾಚಾರದಂತೆ ಕನಕದಾಸರ ಜಯಂತಿಯನ್ನು ಸಾಂಪ್ರದಾಯಿಕವಾಗಿ ನಡೆಸಲಾಗುವುದು. ಸಿಎಂ ಆದಿಯಾಗಿ ಈ ಭಾಗದ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಕನಕದಾಸರ ಬಗ್ಗೆ ತಿಳಿದುರುವ ವಾಗ್ಮಿಯೊಬ್ಬರ ಹೆಸರನ್ನು ಸೂಚಿಸಿದರೆ ಭಾಷಣಕಾರರನ್ನಾಗಿ ಆಹ್ವಾನಿಸಲಾಗುವುದು. ಅರ್ಹ ಸಾಧಕರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು ಮಾತನಾಡಿದರು. ಕಾರ್ಯಾಧ್ಯಕ್ಷ ಪುಳ್ಳಾರಿ ಮಾದೇಶ್, ಪುರಸಭೆ ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ಬಾದಾಮಿ ಮಂಜು, ಉಪಾಧ್ಯಕ್ಷರಾದ ಕುಪ್ಯ ಭಾಗಮ್ಮ, ಎಂ.ವೆಂಕಟೇಶ್ (ವೆಂಕಿ), ಖಜಾಂಚಿ ಮಲ್ಲೇಶ, ನಿರ್ದೇಶಕರಾದ ಕೆ.ನಂಜುಂಡಸ್ವಾಮಿ, ಕೆ.ಅರುಣ್ ಗೌಡ, ಲೋಹಿತ್, ಅಶ್ವಿನ್ ಕುಮಾರ್, ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಸಂಚಾಲಕ ಬಿ.ಮನ್ಸೂರ್, ಸೆಸ್ಕ್ ಎಇಇ ವೀರೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಎಂ.ರಾಜಣ್ಣ, ತೋಟಗಾರಿಕೆ ಸಹಾಯಕ ನಿರ್ದೇಶಕಿ ಶಾಂತ, ಮುಖಂಡರಾದ ಚೌಹಳ್ಳಿ ಮಲ್ಲೇಶ, ಕೋಣಗನಹಳ್ಳಿ ನಾಗರಾಜು, ಗುರುಮಲ್ಲು, ಸಿದ್ದರಾಜು, ಮೂಗೂರು ಹರೀಶ್ ಕುಮಾರ್, ಸೋಮುದಾದಾ, ಮುದ್ದು ಬೀರನಹುಂಡಿ ಶ್ರೀಕಂಠ, ಮೂಗೂರು ಸತೀಶ ಹಾಗೂ ಇನ್ನಿತರರಿದ್ದರು.

ನಿಧನ

ಆರ್.ನಾರಾಯಣರಾವ್



ಪಿರಿಯಾಪಟ್ಟಣ, ನ.8– ಪಟ್ಟಣದ ಮುತ್ತಯ್ಯ ಬಡಾವಣೆ ನಿವಾಸಿ, ನಿವೃತ್ತ ಹೆಲ್ತ್ ಇನ್ಸ್‌ಪೆಕ್ಟರ್ ಆರ್.ನಾರಾಯಣರಾವ್ (90) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರ ಪತ್ರಕರ್ತ ಸಿ.ಎನ್.ವಿಜಯ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ನಾರಾಳಪುರದ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದಗಂಗಮ್ಮ



ಕೆ.ಆರ್.ನಗರ, ನ.8– ಪಟ್ಟಣದ ಆಂಜನೇಯ ಬಡಾವಣೆ ನಿವಾಸಿ, ಲೇ.ಶಂಕರಯ್ಯನವರ ಪತ್ನಿ ಸಿದ್ದಗಂಗಮ್ಮ(85) ಶುಕ್ರವಾರ ಸಂಜೆ ನಿಧನರಾದರು. ಮೃತರು ಮೂವರು ಪುತ್ರಿಯರು ಹಾಗೂ ಪುರಸಭೆ ಮಾಜಿ ಸದಸ್ಯರೂ ಆದ ಪತ್ರಕರ್ತ ಎಸ್.ಯೋಗಾನಂದ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜಯ್ ಕುಮಾರ್



ಹುಣಸೂರು, ನ.8– ಕೊಡಗಿನ ಬಿ.ಶೆಟ್ಟಿಗೇರಿ ಗ್ರಾಮದ ಕಾರ್ಯಪ್ಪ ಅವರ ಪುತ್ರ, ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಕಾರು ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ವಿಜಯಕುಮಾರ್ ಉರುಫ್ ಆಸ್ಪತ್ರೆ ವಿಜಿ(60) ಗುರುವಾರ ರಾತ್ರಿ ನಿಧನರಾದರು. ಮೃತರು ತಂದೆ, ತಾಯಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದಲ್ಲಿ ಶುಕ್ರವಾರ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ. 11ರಿಂದ ಐದು ದಿನ ಬಿ.ವಿ.ಕಾರಂತ ಕಾಲೇಜು ರಂಗೋತ್ಸವ

ಮೈಸೂರು, ನ8(ಎಂಟಿವೈ)– ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ನ.11ರಿಂದ 15ರವರೆಗೆ ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವ ಆಯೋಜಿಸಲಾಗಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ರಂಗಾಯಣದ ಆವರಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗ ತರಬೇತಿ ಶಿಬಿರದಲ್ಲಿ ಪಾಲ್ಗೊಂಡ ಕಾಲೇಜು ವಿದ್ಯಾರ್ಥಿಗಳಿಗೆ ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ರಂಗಾಯಣವು 2005ರಿಂದ ನಿರಂತರ ಕಾಲೇಜು ರಂಗೋತ್ಸವ ನಡೆಸುತ್ತಾ ಬಂದಿದೆ. ರಂಗಭೂಮಿ ಮೂಲಕ ವಿದ್ಯಾರ್ಥಿಗಳು ಸಾಹಿತ್ಯ, ಸಂಸ್ಕೃತಿ, ನೆಲ–ಜಲ, ಭಾಷೆ, ಪರಂಪರೆ ತಿಳಿಸುವ ನಿಟ್ಟಿನಲ್ಲಿ ಕಾರ್ಯಾಗಾರ ನಡೆಸಲಾಗುತ್ತಿದೆ. ಈ ಬಾರಿ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಬಿ.ವಿ.ಕಾರಂತ ಕಾಲೇಜು ರಂಗೋತ್ಸವದಲ್ಲಿ ವಿವಿಧ ನಾಟಕ ಪ್ರದರ್ಶಿಸಲಿದ್ದಾರೆ ಎಂದರು.



ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸ ಹಾಗೂ 'ಚೆಕ್‌ಮೇಟ್' ನಾಟಕದ 100ನೇ ಪ್ರದರ್ಶನದ ಪೋಸ್ಟರ್ ಅನ್ನು ಮೈಸೂರಿನ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಬಿಡುಗಡೆ ಮಾಡಿದರು.

ರಂಗೋತ್ಸವವನ್ನು ನ.11ರಂದು ಸಂಜೆ 5.30ಕ್ಕೆ ಕಲಾವಿದ ಬಾದಲ್ ನಂಜುಂಡಸ್ವಾಮಿ ಉದ್ಘಾಟಿಸಲಿದ್ದಾರೆ. ರಂಗಭೂಮಿ ಕಲಾವಿದೆ ಸುಷ್ಮಾ ನಾಣಯ್ಯ, ನಾಟಕಕಾರ ಡಾ.ರಾಜಪ್ಪ ದಳವಾಯಿ, ರಂಗಕರ್ಮಿ ಹೆಚ್.ಎಸ್.ಸುರೇಶ್ ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಭೂಮಿಗೀತ ರಂಗಮಂದಿರದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಾಟಕ ಪ್ರದರ್ಶನ ಆರಂಭವಾಗಲಿದೆ. ನ.11ರಂದು ರಂಗನಾಥ್ ವಿ ನಿರ್ದೇಶನದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಶೇಕ್ಸ್‌ಪಿಯರ್ ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ಆಧಾರಿತ 'ವಸಂತಯಾಮಿನಿ ಸ್ವಪ್ನ ಚಮತ್ಕಾರ' ನಾಟಕ ಅಭಿನಯಿಸಲಿದ್ದಾರೆ. ನ.12ರಂದು ಅರ್ಜುನ ಎಂ ರಚನೆ, ನಿರ್ದೇಶನದಲ್ಲಿ ಹುಣಸೂರಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ತಂಡದಿಂದ 'ಹೆಣ್ಮಕ್ಳು ಕಥೆ ಹೇಳ್ತಾರೆ' ನಾಟಕ, ನ.13ರಂದು ಚಾಂದಿನಿ ಪಿ ನಿರ್ದೇಶನದಲ್ಲಿ ಎಂಎಂಕೆ, ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಶೇಕ್ಸ್‌ಪಿಯರ್ ಮ್ಯಾಕ್‌ಬೆತ್ ಆಧಾರಿತ 'ಮಾರನಾಯಕ' ನಾಟಕ, ನ.14ರಂದು ಸುಭಾಷ್ ಎ.ಎಸ್ ನಿರ್ದೇಶನ ರಂಗರೂಪದಲ್ಲಿ ಮರದೂರು ಲಾ ಸಲೆಟ್ ಪದವಿ ಪೂರ್ವ ಕಾಲೇಜು ಕುವೆಂಪು ಕಥೆ ಆಧಾರಿತ 'ನಾಗಿ–ಕರಿಸಿದ್ದೆ' ನಾಟಕ, ನ.15ರಂದು ಕಾರ್ತಿಕ್ ಎಸ್ ನಿರ್ದೇಶನದಲ್ಲಿ ಅಮೃತಾ ವಿಶ್ವವಿದ್ಯಾಪೀಠಂ ಜಯಂತ್ ಕಾಯ್ಕಿಣಿ ರಚನೆಯ 'ಜತೆಗಿರುವನು ಚಂದಿರ' ನಾಟಕ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.

ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಕಾಲೇಜು ರಂಗೋತ್ಸವ 2024ರ ಸಂಚಾಲಕಿ ಕೆ.ಆರ್.ನಂದಿನಿ, ಹಿರಿಯ ಕಲಾವಿದರಾದ ಪ್ರಶಾಂತ್ ಹಿರೇಮಠ್, ಗೀತಾ ಎಂ.ಎಸ್, ಹುಲಗಪ್ಪ ಕಟ್ಟೀಮನಿ ಇದ್ದರು.

ರಂಗಾಯಣದಲ್ಲಿ 7 ವರ್ಷಗಳ ಬಳಿಕ 'ಚೆಕ್‌ಮೇಟ್' ನಾಟಕ ಪ್ರದರ್ಶನ

ಮೈಸೂರು,ನ8(ಎಂಟಿವೈ)– ರಂಗಾಸಕ್ತರ ಮೆಚ್ಚುಗೆಗೆ ಪಾತ್ರವಾಗಿದ್ದ ಮೋಸ, ವಂಚನೆ, ಕೊಲೆ ಮತ್ತು ಸಮರ್ಥ ಪೊಲೀಸ್ ತನಿಖೆಯ ಪತ್ತೆದಾರಿ ನಾಟಕ 'ಚೆಕ್‌ಮೇಟ್' ಏಳು ವರ್ಷಗಳ ನಂತರ ಮತ್ತೆ ರಂಗ ಪ್ರದರ್ಶನಕ್ಕೆ ಸಜ್ಜುಗೊಂಡಿದೆ ಎಂದು ನಟ ಪ್ರಶಾಂತ್ ಹಿರೇಮಠ್ ತಿಳಿಸಿದ್ದಾರೆ.

ರಂಗಾಯಣದ ಆವರಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನ. 10, 17, 24ರಂದು ಸಂಜೆ 6.30ಕ್ಕೆ ಭೂಮಿಗೀತ ರಂಗಮಂದಿರದಲ್ಲಿ ಚೆಕ್‌ಮೇಟ್ ನಾಟಕ ಪ್ರದರ್ಶನಗೊಳ್ಳಲಿದೆ. ನ.17ರಂದು ಚೆಕ್‌ಮೇಟ್ ನಾಟಕ 100ನೇ ಪ್ರದರ್ಶನಗೊಳ್ಳಲಿದೆ. ಮರಾಠಿಯ ಯೋಗೇಶ್ ಸೋಮನ್ ನಾಟಕವನ್ನು ಡಾ.ತಿಪ್ಪೇಸ್ವಾಮಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಸಂಗೀತ ಶ್ರೀನಿವಾಸ ಭಟ್, ಚೀನಿ, ಎಚ್.ಕೆ. ದ್ವಾರಕನಾಥ್ ರಂಗವಿನ್ಯಾಸ ಮತ್ತು ಅನೂಪ್ ಜೋಷಿ ನಿರ್ದೇಶನ, ಮಹೇಶ್ ಕಲ್ಲತ್ತಿ ಬೆಳಕಿನ ವಿನ್ಯಾಸ ಮಾಡಿದ್ದಾರೆ.

ಹಿರಿಯ ಕಲಾವಿದ ಹುಲಿಗಪ್ಪ ಕಟ್ಟೀಮನಿ ಮಾತನಾಡಿ, ರಂಗಾಯಣದಿಂದ ನಿವೃತ್ತಿ ಹೊಂದಿದ ಬಳಿಕವೂ ಚೆಕ್‌ಮೇಟ್ ನಾಟಕ ಅಭಿನಯಿಸಲು ರಂಗಾಯಣಕ್ಕೆ ಆಗಮಿಸಿದ್ದೇವೆ. ನಿವೃತ್ತಿಯ ಬಳಿಕ ಮತ್ತೆ ಅಭಿನಯಿಸುವ ಅವಕಾಶ ದೊರೆತದ್ದು ಸಂತೋಷ ತಂದಿದೆ 2 ಗಂಟೆ 15 ನಿಮಿಷಗಳ ಚೆಕ್‌ಮೇಟ್ ನಾಟಕದಲ್ಲಿ ರಂಗಾಯಣದ ಹಿರಿಯ ಕಲಾವಿದರಾದ ಪ್ರಶಾಂತ್ ಹಿರೇಮಠ್, ಗೀತಾ ಎಂ.ಎಸ್, ಹುಲಗಪ್ಪ ಕಟ್ಟೀಮನಿ ಅಭಿನಯಿಸಿದ್ದಾರೆ. ರಂಗಾಯಣ ರೂಪಿಸಿರುವ ಮಹತ್ವದ ಪ್ರಯೋಗಗಳಲ್ಲಿ ಒಂದಾಗಿದೆ.

ಶ್ರೀಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣೆ ಶಿಬಿರ

ಮೈಸೂರು, ನ.8(ಜಿಎ)–ಮೈಸೂರಿನ ಗರಡಿಗೆರೆಯಲ್ಲಿರುವ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್‌ನ 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾ ಕುಂಭಾಭಿಷೇಕ ಹಾಗೂ 10ನೇ ವರ್ಷದ ಹಾಲರವಿ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣೆ ಶಿಬಿರ ಆಯೋಜಿಸಲಾಗಿತ್ತು.

ಆರೋಗ್ಯ ತಪಾಸಣೆಗೆ ಹಿರಿಯ ವೈದ್ಯರಾದ ಡಾ.ಮದನ್ ಲಾಲ್ ಅವರು ಶಾಲಾ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಮಾಡುವ ಮೂಲಕ ಚಾಲನೆ ನೀಡಿದರು. ಈ ವೇಳೆ ಬಿಜಿಎಸ್ ಅಪೋಲೋ ಆಸ್ಪತ್ರೆ, ಬಿ.ಸಿ.ಎಸ್. ಸ್ಪೋರ್ಟ್ಸ್ ಮೆಡಿಸನ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಸ್ಪರ್ಶ ಆರೋಗ್ಯ ಮತ್ತು ಕಣ್ಣಿನ ಆಸ್ಪತ್ರೆ ಹಾಗೂ ಸಂಜೀವಿನಿ ಡೆಂಟಲ್ ಹೆಲ್ತ್ ಕೇರ್ ವತಿಯಿಂದ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣೆ ಮಾಡಲಾಯಿತು.



ಮೈಸೂರಿನ ಗರಡಿಗೆರೆಯಲ್ಲಿರುವ ಶ್ರೀಮಲೆಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರಕ್ಕೆ ಹಿರಿಯ ವೈದ್ಯರಾದ ಡಾ.ಮದನ್ ಲಾಲ್ ಚಾಲನೆ ನೀಡಿದರು.

ಈ ವೇಳೆ ಪಾಲಿಕೆ ಮಾಜಿ ಸದಸ್ಯ ಹಾಗೂ ಟ್ರಸ್ಟ್‌ನ ಗೌರವಾಧ್ಯಕ್ಷರೂ ಆದ ಎಂ.ಶಿವಣ್ಣ ಮಾತನಾಡಿ, ಕಳೆದ 5 ದಿನಗಳಿಂದ ವಿವಿಧ ರೀತಿಯ ಪೂಜಾ ಕಾರ್ಯಕ್ರಮ ನಡೆಯುತ್ತಿದೆ. ಆರೋಗ್ಯ ಎಲ್ಲರಿಗೂ ಮುಖ್ಯವಾಗಿರುವ ಹಿನ್ನೆಲೆಯಲ್ಲಿ ಕಳೆದ ಹತ್ತು ವರ್ಷಗಳಿಂದ ನಡೆಯುತ್ತಿರುವ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ ಎಂದರು.

ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರು ಕಳೆದ ರಾತ್ರಿ ದೇವಸ್ಥಾನಕ್ಕೆ ಭೇಟಿ ನೀಡಿ ಆಶೀರ್ವಚನ ನೀಡಿದ್ದಾರೆ. ಇಂದು ಮಧ್ಯಾಹ್ನ ಏರ್ಪಡಿಸಿದ್ದ ಮಹಾ ಅನ್ನಸಂತರ್ಪಣೆಯಲ್ಲಿ ಸಾವಿರಾರು ಭಕ್ತಾದಿಗಳು ಭಾಗಿಯಾಗಿ ಪ್ರಸಾದ ಸ್ವೀಕರಿಸಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಟ್ರಸ್ಟ್‌ನ ಅಧ್ಯಕ್ಷ ಎಂ.ಎಸ್. ರವಿಕುಮಾರ್, ಡಾ.ವಿಕ್ರಮ್‌ಕುಮಾರ್ ಜೈನ್, ಡಾ.ಪದ್ಮನಾಭನ್, ಸುರೇಶ್ ಗೋಲ್ಡ್, ಟ್ರಸ್ಟ್‌ನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಕೆರೆಯನ್ನೇ ನುಂಗಿದ ವಕ್ಫ್ ಬೋರ್ಡ್! 4 ಎಕರೆ 10 ಗುಂಟೆ ಕೆರೆಯ ಜಾಗ ಈಗ ವಕ್ಫ್ ಹೆಸರಿಗೆ

ಹಾಸನ, ನ.8– ಸರ್ಕಾರಿ ಜಾಗದಲ್ಲಿದ್ದ ಕೆರೆಯನ್ನು ನುಂಗಿರುವ ಘಟನೆ ಹಾಸನ ಜಿಲ್ಲೆ, ಅರಕಲಗೂಡು ಪಟ್ಟಣದಲ್ಲಿ ನಡೆದಿದೆ.

ನೂರಾರು ವರ್ಷಗಳಿಂದ ಅರಕಲಗೂಡು ಪಟ್ಟಣದಲ್ಲಿರುವ ಗೌರಿಕಟ್ಟೆಗೆ (ಗೌರಿಕೆರೆ) ಸೇರಿದ 4 ಎಕರೆ 10 ಗುಂಟೆ ಜಾಗ ಇದೀಗ ವಕ್ಫ್ ಬೋರ್ಡ್‌ಗೆ ಸೇರಿದೆ ಎಂದು ಪಹಣಿಯಲ್ಲಿ ಉಲ್ಲೇಖವಾಗಿದೆ. ಅರಕಲಗೂಡು ಪಟ್ಟಣದಲ್ಲೇ ಕೆರೆ ಇದ್ದು ಸದ್ಯ ದುಬಾರಿ ಬೆಲೆ ಬಾಳುತ್ತದೆ. ಕೆರೆಯ ಜಾಗ ಕೆಲವರು ಉಳಿಸಲು ಕೋರ್ಟ್ ಮೆಟ್ಟಿಲೇರಿದ್ದು, ಇದರ ನಡುವೆ 4 ಎಕರೆ 10 ಗುಂಟೆ ಕೆರೆಯ ಜಾಗ ವಕ್ಫ್ ಬೋರ್ಡ್ ಎಂದು ಪಹಣಿಯಲ್ಲಿ ನಮೂದಾಗಿದೆ.

ನೀರಿನ ಮೂಲವಿಲ್ಲದೆ ಕೆರೆ ಬರಿದಾಗಿದ್ದು, ಗಿಡ ಗಂಟೆಗಳು ಬೆಳೆದಿವೆ. ಹಲವಾರು ವರ್ಷಗಳಿಂದ ಹದಿನೆಂಟು ಸಮುದಾಯದವರು ಈ ಕೆರೆಯಲ್ಲಿ ಗೌರಿಯನ್ನು ಕೂರಿಸಿ ಪೂಜೆ ಸಲ್ಲಿಸುತ್ತಿದ್ದರು. ಆದರೆ ನೀರಿಲ್ಲದ ಕಾರಣ ಕೆರೆ ಪಾಳುಬಿದ್ದಿದೆ. ವಕ್ಫ್ ಬೋರ್ಡ್ ಹೆಸರಿಗೆ ಕೆರೆ ಜಾಗ ಸೇರಿರುವುದು ಕೇಳಿ ಪಟ್ಟಣದ ಜನತೆ ಆಕ್ರೋಶ ವ್ಯಕ್ತಪಡಿಸಿದ್ದು, ಕೂಡಲೇ ಪಹಣಿಯಲ್ಲಿ ಹಿಂದಿನಂತೆ ಸರ್ಕಾರಿ ಕೆರೆಯ ಜಾಗ ಎಂದು ಉಲ್ಲೇಖವಾಗಬೇಕು. ಇಲ್ಲವಾದಲ್ಲಿ ಹೋರಾಟ ನಡೆಸಲಾಗುವುದು ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಸಿದ್ದರಾಮಯ್ಯ ಭಾಗಿ

ದೂರುದಾರ ಸ್ನೇಹಮಯಿ ಕೃಷ್ಣ ಆರೋಪ

ಮೈಸೂರು, ನ.8(ಬಿಎಲ್‌ಯು)– ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಕಾನೂನು ಕುಣಿಕೆ ಬಿಗಿಯಾಗುತ್ತಿದೆ. ನನಗೆ ಗೊತ್ತಿಲ್ಲದಂತೆ ನನ್ನ ಪತ್ನಿ 14 ನಿವೇಶನ ವಾಪಾಸು ಕೊಟ್ಟಿದ್ದಾರೆ ಎಂಬ ಅವರ ಮಾತು ವಿಶ್ಲೇಷಿಸಿದಾಗ ಅಪರಾಧದಲ್ಲಿ ಅವರೂ ಭಾಗಿಯಾಗಿರುವುದು ಸ್ಪಷ್ಟವಾಗುತ್ತದೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಲೋಕಾಯುಕ್ತ ವಿಚಾರಣೆ ನಂತರ ಸಿದ್ದರಾಮಯ್ಯ ನನ್ನ ಬಗ್ಗೆ ನಿರಾಧಾರ ಆರೋಪ ಮಾಡಿದ್ದಾರೆ. ಇಂತಹ ಹೇಳಿಕೆಗಳ ಮೂಲಕ ನನ್ನ ವಿರುದ್ಧ ಅವರ ಅಭಿಮಾನಿಗಳನ್ನು ಪ್ರಚೋದಿಸುತ್ತಿದ್ದಾರೆ ಎಂದು ಆಪಾದಿಸಿದ್ದಾರೆ.

ಮುಡಾ ಹಗರಣ ಸಂಬಂಧ ನನ್ನಲ್ಲಿ ಸಾಕ್ಷ್ಯಾಧಾರವಿಲ್ಲ ಎಂದು ಹೇಳಿದ್ದಾರೆ. ಆದರೆ ನನ್ನಲ್ಲಿ ಸಿದ್ದರಾಮಯ್ಯ ಮೇಲಿನ ಆರೋಪಕ್ಕೆ ಪೂರಕ ಸಾಕ್ಷ್ಯಾಧಾರಗಳಿವೆ. ನನ್ನ ಆರೋಪ ಸುಳ್ಳಾದರೆ ಈಗ ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರ ನೀಡಿ ಎಂದು ಮುಖ್ಯಮಂತ್ರಿಗೆ ಬಹಿರಂಗ ಸವಾಲು ಹಾಕಿದ್ದಾರೆ.

ಮುಡಾ ಹಗರಣ ಸಂಬಂಧ ಮೊನ್ನೆ ನೀವು ನೀಡಿದ ಸ್ಪಷ್ಟನೆ ಗಮನಿಸಿದರೆ, ಲೋಕಾಯುಕ್ತರು ನಿಮ್ಮನ್ನು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ಸ್ನೇಹಮಯಿ ಕೃಷ್ಣ ದೂರಿದ್ದಾರೆ.


ಕಾಂಗ್ರೆಸ್ ಸರ್ಕಾರದಿಂದ ಬಡವರು ಬದುಕಲಾಗುತ್ತಿಲ್ಲ; ರೈತರಿಗೆ ನೆಮ್ಮದಿ ಇಲ್ಲ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಕಿಡಿನುಡಿ

ಚನ್ನಪಟ್ಟಣ, ನ.8– ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಲೂಟಿ ಮಾಡುತ್ತಿದ್ದು, ಬಡವರು ಬದುಕಲಾಗದ, ರೈತರಿಗೆ ನೆಮ್ಮದಿ ಇಲ್ಲದಂತಾಗಿದೆ. ಈ ಸರ್ಕಾರವನ್ನು ತೆಗೆಯುವ ತನಕ ರಾಜ್ಯಕ್ಕೆ ನೆಮ್ಮದಿ ಇಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹರಿಹಾಯ್ದರು.

ಚನ್ನಪಟ್ಟಣ ಕ್ಷೇತ್ರದ ರಾಂಪುರ ಗ್ರಾಮದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಈ ಸರ್ಕಾರದ ಬಗ್ಗೆ ನಾನು ಯಾವಾಗಲೂ ಮಾತಾಡಿರಲಿಲ್ಲ. ಇವರ ಲೂಟಿ ನೋಡಲಾರದೆ ನಿನ್ನೆಯಿಂದ ಮಾತನಾಡುತ್ತಿದ್ದೇನೆ ಎಂದರು.

ಇಂದು ಮುಖ್ಯಮಂತ್ರಿ, ನಾಳೆಯೂ ಮುಖ್ಯಮಂತ್ರಿ ಅಂತ ಹೇಳುತ್ತಾರೆ. ಇಷ್ಟಾದರೂ ಹೀಗೆಲ್ಲಾ ಮಾತನಾಡುತ್ತೀರಾ ಅಯ್ಯೋ ರಾಮ ಅಂತ ಸಿದ್ದರಾಮಯ್ಯನವರು ಲೋಕಾಯುಕ್ತ ವಿಚಾರಣೆ ಎದುರಿಸಿದ್ದನ್ನು ಪರೋಕ್ಷವಾಗಿ ಪ್ರಸ್ತಾಪಿಸಿ ವ್ಯಂಗ್ಯವಾಡಿದರು. ಅಂಬೇಡ್ಕರ್ ಹೆಸರು ಹೇಳುತ್ತಿರುವ ಇಬ್ಬರು ಮಹಾನ್ ನಾಯಕರು ರಾಜ್ಯವನ್ನು ಆಳುತ್ತಿದ್ದಾರೆ. ಅವರ 5



ಗ್ಯಾರಂಟಿಗಳ ಪೈಕಿ 4ನೇ ಗ್ಯಾರಂಟಿ ಅಲ್ಲಾಡುತ್ತಿದೆ. ಇದನ್ನು ನಾನು ಹೇಳುತ್ತಿಲ್ಲ. ಅವರದೇ ಸಂಪುಟದ ಸಚಿವರು ಹೇಳುತ್ತಿದ್ದಾರೆ. ಖಜಾನೆಯಲ್ಲಿ ಏಕೆ ಕಾಸು ಇಲ್ಲವಾ. ಈ ಸರ್ಕಾರದಲ್ಲಿ ಎಲ್ಲರೂ ತಿಂದು ತೇಗುತ್ತಿದ್ದಾರೆ ಎಂದು ಟೀಕಿಸಿದರು.

ಸಾಮಾನ್ಯ ಸಮುದಾಯದ ವ್ಯಕ್ತಿಯನ್ನು ನಾನು ಮಂತ್ರಿಯನ್ನಾಗಿ ಮಾಡಿದೆ. ಗಂಗಾಮತಸ್ಥ ಸಮುದಾಯದ ಚಿನ್ನ ಸ್ವಾಮಿಯನ್ನು ವಿಧಾನಸೌಧಕ್ಕೆ ಕಳುಹಿಸುವ ಕೆಲಸ ಮಾಡುತ್ತೇನೆ. ಶಾಸಕರಾಗಿಯೋ, ಪರಿಷತ್ ಸದಸ್ಯರಾಗಿಯೊ ಮಾಡುತ್ತೇವೆ ಎಂದು ತಿಳಿಸಿದರು.

ಈ ಕ್ಷೇತ್ರಕ್ಕಾಗಿ ನಾನು ಏನು ಮಾಡಿದೆ ಎಂದು ಹೇಳುವುದಿಲ್ಲ. ನೀವೇ ನನ್ನ ಕೆಲಸದ ಪಟ್ಟಿ ಮಾಡಿ, ನಿಖಿಲ್ ಪರ ಕೈ ಚಾಚಲು ನಿಮ್ಮ ಮುಂದೆ ಬಂದಿದ್ದೇನೆ. ಹೈನು ಗಾರಿಕೆಗೆ ಈ ಕ್ಷೇತ್ರದಲ್ಲಿ ನಾನು ಶಕ್ತಿ ಕೊಟ್ಟವನು. ಅಮೂಲ್ ಸಂಸ್ಥೆ ಕಾರ್ಯಕ್ರಮದಲ್ಲಿ ಕುರಿಯನ್ ಅವರಿಗೆ ಒಂದು ಮಿಲ್ಕ್ ಫೆಡರೇಷನ್ ರಾಜ್ಯದಲ್ಲಿ ಸ್ಥಾಪನೆ ಮಾಡಿ ಅಂತ ಕೇಳಿದೆ. ಇದಕ್ಕೆ ಅವರು ಆಗಲ್ಲ ಅಂದಿದ್ದರು. ದೇಶಕ್ಕೊಂದೆ ತಾಜ್ ಮಹಲ್. ಹಾಗೆಯೇ ಒಂದು ಸಂಸ್ಥೆ ಮಾತ್ರಕಟ್ಟಲು ಸಾಧ್ಯವೆಂದು ಹೇಳಿದ್ದರು. ಅದನ್ನು ನಾನು ಸವಾಲಾಗಿ ಸ್ವೀಕರಿಸಿ ರಾಜ್ಯದಲ್ಲಿ ಮಿಲ್ಕ್ ಫೆಡರೇಶನ್ ಸ್ಥಾಪಿಸಿದೆ ಎಂದು ಹೇಳಿದರು.

ಇಗ್ಗಲೂರು ಡ್ಯಾಂ ನಾನು ಕಟ್ಟಿಸಿದೆ. ಆದರೆ, ಅವರಾರೋ ಭಗೀರಥ, ನಾನು ನೀರು ತಂದೆ ಅನ್ನುತ್ತಿದ್ದಾರೆ. ಇದು ಈ ರೈತನ ಮಗನ ಕೆಲಸ ನಾನು ಸಾಮಾನ್ಯ ರೈತನ ಮಗ. ರೈತರ ಕಷ್ಟ ಏನಂತ ನನಗೆ ಗೊತ್ತು. ನಾನು ಮೊಮ್ಮಗನನ್ನು ಗೆಲ್ಲಿಸಲು ಬಂದಿದ್ದೇನೆ ಎಂದು ಟೀಕೆ ಮಾಡುತ್ತಾರೆ. ನಾನು ನಿಮ್ಮ ಆಶೀರ್ವಾದದ ಬಲದಿಂದ ಇನ್ನೂ ನಾಲ್ಕಾರು ವರ್ಷ ಬದುಕಿರುತ್ತೇನೆ ದೇಹದಲ್ಲಿ ಕೊನೆ ಉಸಿರು ಇರುವರೆಗೂ ಹೋರಾಟ ಮಾಡುತ್ತೇನೆ ಎಂದು ತಿಳಿಸಿದರು. ಅಪೂರ್ವ ಸಹೋದರರು ಬೇರೆಯವರ ಜಮೀನನ್ನು ಹೇಗೆ ಲೂಟಿ ಮಾಡಿದ್ದಾರೆ ಅಂತ ಕನಕಪುರಕ್ಕೆ ಹೋಗಿ ನೋಡಿಕೊಂಡು ಬನ್ನಿ, 6 ತಿಂಗಳಲ್ಲಿ ನಾನೇ ಅಭ್ಯರ್ಥಿ ಅಂದರು. ಸುಳ್ಳು ಹೇಳಿ, ಮತ್ತೊಬ್ಬರನ್ನು ಕರೆದುಕೊಂಡು ತಂದು ನಿಲ್ಲಿಸಿದವರಿಗೆ ತಕ್ಕಪಾಠ ಕಲಿಸಿ ಎಂದು ಡಿಕೆ ಸಹೋದರರ ವಿರುದ್ಧ ದೇವೇಗೌಡರು ಕಿಡಿಕಾರಿದರು.

ಕರಾಮುವಿ: ಪರೀಕ್ಷಾ ದಿನಾಂಕ ಮುಂದೂಡಿಕೆ

ಮೈಸೂರು,ನ.8– ಕರ್ನಾಟಕ ರಾಜ್ಯ ವಿಧಾನಸಭೆಯ ಮೂರು ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ನ.13 ರಂದು ನಡೆಯಬೇಕಾಗಿದ್ದ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ, ಸ್ನಾತಕೋತ್ತರ (UG/PG) ಪದವಿಗಳ ಪರೀಕ್ಷೆಗಳನ್ನು ಮುಂದೂಡಲಾಗಿರುತ್ತದೆ. ಮುಂದೂಡಲಾಗಿರುವ ಸ್ನಾತಕ (UG) ಕಾರ್ಯಕ್ರಮದ (ಬಿ.ಎ) ಪರೀಕ್ಷೆಯನ್ನು ನ.25 ರಂದು ಹಾಗೂ ಸ್ನಾತಕೋತ್ತರ (PG) ಕಾರ್ಯಕ್ರಮಗಳ ಪರೀಕ್ಷೆಗಳನ್ನು ಡಿ.2 ರಂದು ನಡೆಸಲಾಗುವುದು. ಉಳಿದಂತೆ ನಿಗದಿಪಡಿಸಿರುವ ಎಲ್ಲಾ ಪರೀಕ್ಷೆಗಳು ಪರೀಕ್ಷಾ ವೇಳಾಪಟ್ಟಿಯಂತೆ ನಡೆಯಲಿವೆ.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್‌ಜಾಲ www.ksoumysuru.ac.in ನ್ನು ವೀಕ್ಷಿಸುವುದು ಹಾಗೂ ಆನ್‌ಲೈನ್ ಸಹಾಯವಾಣಿ ಸಂ: 8800335638 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಡಾ.ಹೆಚ್ ವಿಶ್ವನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ರೈತರ ವಿರುದ್ಧ ವಕ್ಫ್ ಛೂ ಬಿಟ್ಟಿದೆ

● ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಆಕ್ರೋಶ ● ಹಿಂದು ಮಠ–ಮಂದಿರಗಳ ಕಬಳಿಸುವ ಯತ್ನ

ಬೆಂಗಳೂರು, ನ.9 (ಕೆಎಂಶಿ)– ರಾಜ್ಯಾದ್ಯಂತ ವಕ್ಫ್ ಬೋರ್ಡ್ ಮೂಲಕ ಹೊಸ ಜಿಹಾದಿ ನಡೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ಸಿಗರ ನಡೆ–ನುಡಿ ಗಮನಿಸಿದರೆ, ದುರುಳತನ ಅರ್ಥವಾಗುತ್ತದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ಸಿಗರು ಹುಂಬರು, ತಿಳಿವಳಿಕೆ ಇಲ್ಲದವರು ಎನ್ನುವುದಿಲ್ಲ. ಅವರೇನು ಮಾತನಾಡುತ್ತಾರೆ ಎಂಬುದು ಅವರಿಗೆ ಗೊತ್ತಿದೆ ಎಂದರು.

ವಕ್ಫ್ ಆಸ್ತಿಯನ್ನು ಕಾಂಗ್ರೆಸ್ಸಿನ ಕೆಲವು ಹಿರಿಯ ನಾಯಕರು ಲೂಟಿ ಮಾಡಿದ್ದರು. ಇದನ್ನು ಉಳಿಸುವುದಾಗಿ ಬಿಜೆಪಿ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ವಕ್ಫ್ ಜಾಗ ಬಾಡಿಗೆ, ಲೀಸ್ ಮೂಲಕ ಸಾವಿರಾರು ಕೋಟಿ ರೂ. ಪಡೆಯುತ್ತಿದ್ದರು. ಇದರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದೆವು.

ಈಗ ರೈತರ ವಿರುದ್ಧವೇ ವಕ್ಫ್ ಬೋರ್ಡ್ ಅನ್ನು ಛೂ ಬಿಟ್ಟಿದ್ದಾರೆ. ನೂರಾರು ವರ್ಷಗಳ ಮಂದಿರ, ಮಠ ಕಬಳಿಸಲು ಮುಂದಾಗಿದ್ದಾರೆ. ವಿಜಯಪುರ ಜಿಲ್ಲೆ ಪಡಗಾನೂರು ಗ್ರಾಮದಲ್ಲಿ ಚಾಲುಕ್ಯರು ಕಟ್ಟಿದ 1,500 ವರ್ಷಗಳ ಪುರಾತನ ದೇವಾಲಯ



ಆಸ್ತಿಯನ್ನೂ ವಕ್ಫ್ ಸಂಪತ್ತು ಎಂದು ಘೋಷಿಸಿದ್ದಾರೆ. ಕಂದಾಯ ದಾಖಲೆಯ ಕಾಲಂ ನಂಬರ್ 11ರಲ್ಲಿ ದಾಖಲಾಗಿರುವುದಾಗಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಇದನ್ನು ಪ್ರಶ್ನಿಸಿದಾಗ ಸಮರ್ಪಕ ಉತ್ತರ ದೊರೆಯಲಿಲ್ಲ.

ಆಸ್ತಿಯ ಸೇಲ್ ಡೀಡ್ ಇಲ್ಲದೆ ಸಂಪತ್ತು ಕಬಳಿಸುವ ಷಡ್ಯಂತ್ರ ವಕ್ಫ್ ನಡೆಸುತ್ತಿದೆ. ಕಾಂಗ್ರೆಸ್ ಪಕ್ಷ ಭಯೋತ್ಪಾದಕರ ಬಗ್ಗೆ ಮೃದು ಧೋರಣೆ ಹೊಂದಿದೆ. ಜಮ್ಮು–ಕಾಶ್ಮೀರದ ನ್ಯಾಷನಲ್ಸ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಭಯೋತ್ಪಾದಕರನ್ನು ಕೊಲ್ಲಬಾರದು, ಪಾಕಿಸ್ತಾನದ ಜೊತೆ ಭಾರತ ಮಾತುಕತೆ ನಡೆಸಬೇಕು ಎನ್ನುತ್ತಾರೆ. ಇಂತಹವರೊಂದಿಗೆ ಕಾಂಗ್ರೆಸ್‌ನ 'ಇಂಡಿ' ಒಕ್ಕೂಟ ಇದೆ, ಕಾಂಗ್ರೆಸ್‌ಗೆ ಬುದ್ಧಿ ಭ್ರಮಣೆಯಾಗಿದೆಯೇ.

ಬರೀ ತುಷ್ಟೀಕರಣ: ಕಾಂಗ್ರೆಸ್ ತುಷ್ಟೀಕರಣ ಮಾಡುತ್ತಿದೆ, ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದರೆ ನಿಮ್ಮ ಮನೆಗಳನ್ನೂ ವಕ್ಫ್ ಆಸ್ತಿಯಾಗಿ ನಮೂದಿಸಬಹುದು. ಅಲ್ಪ ಸಂಖ್ಯಾತರ ಅರ್ಥಾತ್ ಮುಸಲ್ಮಾನರ ತುಷ್ಟೀಕರಣವೇ ಕಾಂಗ್ರೆಸ್ ಧ್ಯೇಯವನ್ನಾಗಿ ಮಾಡಿಕೊಂಡಿದೆ ಎಂದು ತೀಕ್ಷ್ಣವಾಗಿ ಟೀಕಿಸಿದರು. ಸಿದ್ದರಾಮಯ್ಯ ಆಡಳಿತದ ಮೊದಲ ಅವಧಿಯಲ್ಲಿ (2013–18) ನಿರ್ಬಂಧಿತ ಪಿಎಫ್‌ಐ, ಎಸ್‌ಡಿಪಿಐ, ಕೆಎಫ್‌ಡಿ ಪೂರ್ವಾವತಾರವಾದ ಸಿಮಿ ಸಂಘಟನೆಯ ಮೇಲಿದ್ದ 175 ಮೊಕದ್ದಮೆಗಳನ್ನು ವಾಪಸ್ ಪಡೆದರು. ಇದೀಗ ಎರಡನೇ ಬಾರಿಗೆ ಮುಖ್ಯಮಂತ್ರಿ ಆದ ಮೇಲೆ ಹಿಂದೂ ಸಂಘಟನೆಗಳು, ಮಂದಿರಗಳ ಮೇಲೆ ಅನೇಕ ಬಾರಿ ದಾಳಿ ಮಾಡಿದವರ ಮೇಲಿನ ಕೇಸ್‌ಗಳನ್ನು ವಾಪಸ್ ಪಡೆದರು.

ಆದರೂ ಕಾಂಗ್ರೆಸ್ಸಿಗರಿಗೆ ಏನೂ ಅನ್ನಿಸುತ್ತಿಲ್ಲ, ತುಷ್ಟೀಕರಣ ರಾಜಕಾರಣದಿಂದ ಚುನಾವಣೆ ಗೆಲ್ಲಲು ಹೊರಟಿದ್ದಾರೆ, ಇದು ಕಾಂಗ್ರೆಸ್‌ನ ತುಷ್ಟೀಕರಣದ ಪರಾಕಾಷ್ಠೆ, ಈ ಬಾರಿ ಕಾಂಗ್ರೆಸ್‌ಗೆ ಶಾಕ್ ನೀಡಿದರೆ, ಅನ್ಯಾಯಕ್ಕೊಳಗಾದ ಹಿಂದೂಗಳೂ ಜಾಗೃತರಾಗಿದ್ದಾರೆ ಎಂಬ ಸಂದೇಶ ಸಿಗಲಿದ್ದು, ಆ ಪಕ್ಷವನ್ನು ಮತದಾರರು ಸಂಪೂರ್ಣವಾಗಿ ತಿರಸ್ಕರಿಸಬೇಕು ಎಂದರು. ಬಿಜೆಪಿಯವರನ್ನು ಟೀಕಿಸುವುದಕ್ಕಾಗಿ, ತಮ್ಮನ್ನು ಕೇಸಿನಲ್ಲಿ ಸಿಲುಕಿಸುತ್ತಿದ್ದಾರೆ ಎಂಬುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ, ಜನರಿಗೆ ಸುಳ್ಳು ಹೇಳುವುದರಲ್ಲಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಗೀತಾ ಸಂತೋಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ಕ)	4 ಪ್ರದರ್ಶನಗಳು
ಸಂಗಂ	
ನವಗ್ರಹ (ಕ)	4 ಪ್ರದರ್ಶನಗಳು
ಲಿಡೋ	
ಎಲಾ ಕುನ್ನಿ (ಕ)	2 ಪ್ರದರ್ಶನಗಳು
ಸಿಂಗಂ ಅಗೇನ್ (ಹಿಂ)	2 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಗಂ ಅಗೇನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಸಂಗೀತಾ ಸಂತೋಷ (ಕ)	2 ಪ್ರದರ್ಶನಗಳು
ಆದಿ ಪರ್ವ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ.
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೇನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಲ್ಲಿ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದವರಿಗೆ ಕಠಿಣ ಶಿಕ್ಷೆಗೆ ಆಗ್ರಹ

ಮೈಸೂರು,ನ8(ಎಂಟಿವೈ)– ಮೈಸೂರಿನ ವಿಜಯನಗರದ ಖಾಸಗಿ ಹೋಟೆಲ್‌ವೊಂದರಲ್ಲಿ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವ ಘಟನೆ ತಲೆ ತಗ್ಗಿಸುವ ಕೃತ್ಯವಾಗಿದ್ದು, ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಿ, ಸಂತ್ರಸ್ತ ಯುವತಿಗೆ ನ್ಯಾಯ ಒದಗಿಸುವಂತೆ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಪಿಯುಸಿಎಲ್ ಮತ್ತು ವಿವಿ ಮಹಿಳಾ ಸಂಘಟನೆಗಳು ಆಗ್ರಹಿಸಿವೆ.

ಈ ಸಂಬಂಧ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಪಿಯುಸಿಎಲ್ ಮೈಸೂರು, ಸಮತಾ ವೇದಿಕೆ, ಸಮತಾ ಅಧ್ಯಯನ ಕೇಂದ್ರ, ಧ್ವನಿ ಮಹಿಳಾ ಒಕ್ಕೂಟ, ಎಐಎಮ್‌ಎಸ್‌ಎಸ್ ಹಾಗೂ ಇತರ ಪ್ರಗತಿಪರ ಸಂಘಟನೆಗಳ ಮುಖಂಡ ಹಾಗೂ ಹೋರಾಟಗಾರರಾದ ಡಾ.ಇ.ರತಿರಾವ್, ಸಬೀಹ ಭೂಮಿಗೌಡ, ನಾ.ದಿವಾಕರ, ಸುಶೀಲ, ಕೆ.ಆರ್.ಸುಮತಿ, ಸುಮನ, ಕಮಲ್ ಗೋಪಿನಾಥ್, ವಿ.ಪುರುಷೋತ್ತಮ್ ಸೇರಿದಂತೆ ಇನ್ನಿತರರು ಜಂಟಿ ಪ್ರತಿಕಾ ಪ್ರಕಟಣೆ ನೀಡಿದ್ದು, ಅತ್ಯಾಚಾರ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಸಾಂಸ್ಕೃತಿಕ ನಗರಿ ಎಂದೇ ಹೆಸರಾಗಿರುವ ಮೈಸೂರು ನಗರ ತನ್ನ ಮೂಲ ಸಾಂಸ್ಕೃತಿಕ ಸಂವೇದನೆ ಮತ್ತು ಲಿಂಗ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತಿರುವಂತೆ ಕಂಡು ಬರುತ್ತಿದೆ. ಮೂರು ವರ್ಷಗಳ ಹಿಂದೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಯುವತಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಈ ಭೀಕರ ಘಟನೆಯ ನೆನಪು ಮಾಸುವ ಮುನ್ನವೇ ಮೈಸೂರು ನಗರಿ ಮತ್ತೊಂದು ಸಾಮೂಹಿಕ ಅತ್ಯಾಚಾರ ಪ್ರಕರಣ ನಡೆದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಖಾಸಗಿ ಕಂಪನಿಯೊಂದರಲ್ಲಿ ನೌಕರಿಯಲ್ಲಿದ್ದ ಯುವತಿಯ ಮೇಲೆ



ಇಬ್ಬರು ಅತ್ಯಾಚಾರ ಎಸಗಿದ್ದಾರೆ. ಶನಿವಾರ ರಾತ್ರಿ ನಗರದ ಪ್ರತಿಷ್ಠಿತ ಬಡಾವಣೆಯಾದ ವಿಜಯನಗರದ ಖಾಸಗಿ ಹೋಟೆಲ್‌ನಲ್ಲಿ ಪಾರ್ಟಿಯಲ್ಲಿ ಭಾಗಿಯಾಗಿದ್ದ ಯುವತಿಯ ಮೇಲೆ ಆಕೆಯ ಇಬ್ಬರು ಸ್ನೇಹಿತರು ಅತ್ಯಾಚಾರ ಎಸಗಿರುವುದಾಗಿ, ಸಂತ್ರಸ್ತ ಯುವತಿ ದೂರು ನೀಡಿದ್ದಾರೆ. ಇದು ಆಘಾತಕಾರಿ ಬೆಳವಣಿಗೆಯಾಗಿದ್ದು, ಹೆಣ್ಣು ಮಕ್ಕಳ ಸುರಕ್ಷತೆಯ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಯುವಕರು ತಮ್ಮ ಗೆಳತಿಯರನ್ನು ಮತ್ತು ಸಹೋದ್ಯೋಗಿಗಳನ್ನು ನೋಡುವ, ಬಳಸಿಕೊಳ್ಳುವ, ಅವರ ಮೇಲೆ ದೌರ್ಜನ್ಯ ಎಸಗುವ ಮನಸ್ಥಿತಿಯು ತುಂಬ ಕಳವಳಕಾರಿಯಾಗಿದೆ. ಲಿಂಗ ಸೂಕ್ಷ್ಮತೆ, ಲೈಂಗಿಕ ಶಿಕ್ಷಣದ ಕೊರತೆಯು ಯುವಕರನ್ನು ರಾಕ್ಷಸತ್ವದತ್ತ ಸೆಳೆದಿರುವ ರೀತಿಯನ್ನು ಸಮಾಜವು ಗಂಭೀರವಾಗಿ ಯೋಚಿಸಬೇಕಿದೆ ಮತ್ತು ಸೂಕ್ಷ್ಮತೆಯನ್ನು ಬೆಳೆಸಬೇಕಿದೆ. ಜೊತೆಗೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸರ್ಕಾರದ ಆಡಳಿತ ಯಂತ್ರಗಳ ವೈಫಲ್ಯದ ಬಗ್ಗೆಯೂ ಯೋಚಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯ ಸರ್ಕಾರ ಹಾಗೂ ಮೈಸೂರು ನಗರಾಡಳಿತವು ಈ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನಾವು ಆಗ್ರಹಿಸುತ್ತೇವೆ ಹಾಗೆಯೇ ಇಂತಹ ಘಟನೆಗಳು ಪದೇಪದೇ ನಡೆಯದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡು, ಮೈಸೂರು ನಗರದ ಹೆಣ್ಣುಮಕ್ಕಳಿಗೆ ಸೂಕ್ತ ರಕ್ಷಣೆ ಒದಗಿಸುವಂತೆ ಆಗ್ರಹಿಸಿದ್ದಾರೆ.

ಯೋಗ ಶಿಕ್ಷಕಿ ಪ್ರಾಣ ಉಳಿಸಿತು 'ಪ್ರಾಣಾಯಾಮ'!

ಸುಪಾರಿ ಕಿಲ್ಲರ್ಸ್ ಅಂದರ್


ಸುಪಾರಿ ನೀಡಿದ ಬಿಂದು


ಯೋಗ ಶಿಕ್ಷಕಿಯ ಹತ್ಯೆಗೆ ಯತ್ನಿಸಿದ ಸುಪಾರಿ ಹಂತಕರು

ಚಿಕ್ಕಬಳ್ಳಾಪುರ, ನ.8-ಯೋಗಾಭ್ಯಾಸ ಆರೋಗ್ಯ ಕಾಪಾಡುವುದರ ಜೊತೆಗೆ ದೀರ್ಘಾಯುಷ್ಯಕ್ಕೆ ಅನುಕೂಲಕಾರಿ. ಮಾತ್ರವಲ್ಲ ಆಪತ್ಕಾಲದಲ್ಲಿ ಜೀವ ಉಳಿಸುತ್ತದೆ ಎಂಬುದಕ್ಕೆ ಈ ಘಟನೆ ಜ್ವಲಂತ ಸಾಕ್ಷಿ.

ಬೆಂಗಳೂರಿನ ಕೃಷ್ಣರಾಜಪುರಂನ ಯೋಗ ಶಿಕ್ಷಕಿಯನ್ನು ಐವರು ಸುಪಾರಿ ಕಿಲ್ಲರ್‌ಗಳು ಅಪಹರಿಸಿದ್ದರು. ಅವರನ್ನು ಚಿಕ್ಕಬಳ್ಳಾಪುರ ಜಿಲ್ಲೆ ದಿಬ್ಬೂರು ಅರಣ್ಯಕ್ಕೆ ಕರೆದೊಯ್ದು ಚಿನ್ನಾಭರಣ ದೋಚಿ, ಕಿರುಕುಳ ನೀಡಿದ್ದಲ್ಲದೇ, ಅರೆ ನಗ್ನ ಸ್ಥಿತಿಯಲ್ಲಿ ಕೊಲ್ಲುವ ಸಲುವಾಗಿ ಕೇಬಲ್ ವೈರನ್ನು ಆಕೆಯ ಕತ್ತಿಗೆ ಬಿಗಿದಿದ್ದಾರೆ. ಆದರೆ ಅನುಭವಿ ಯೋಗಪಟುವಾದ ಶಿಕ್ಷಕಿ ಪ್ರಾಣಾಯಾಮದ ಮೂಲಕ ಸತ್ತಂತೆ ನಟಿಸಿದ್ದಾರೆ. ಸುಪಾರಿ ಕಿಲ್ಲರ್ಸ್ ಶಿಕ್ಷಕಿ ಸತ್ತರೆಂದು ಭಾವಿಸಿ ಗುಂಡಿ ತೋಡಿ ಅದರಲ್ಲಿ ಅವರನ್ನು ಹಾಕಿ ಮರದ ಕೊಂಬೆಗಳನ್ನು ಮುಚ್ಚಿ ಕಾಲ್ಕಿತ್ತಿದ್ದಾರೆ. ಕೆಲ ಹೊತ್ತಿನ ನಂತರ ಸಹಜ ಸ್ಥಿತಿಗೆ ಮರಳಿ, ಗುಂಡಿಯಿಂದ ಮೇಲೆ ಬಂದು ಸಮೀಪದ ಮನೆಯೊಂದಕ್ಕೆ ತೆರಳಿದ ಶಿಕ್ಷಕಿ ಅವರ ಸಹಾಯ ಪಡೆದು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ವಿವರ: 35 ವರ್ಷದ ಯೋಗ ಶಿಕ್ಷಕಿ ಬಳಿ ಕೆಆರ್.ಪುರಂನ ಸಂತೋಷ್ ಎಂಬಾತ ಯೋಗ ಕಲಿಯಲು ಬರುತ್ತಿದ್ದ. ಅವರಿಬ್ಬರ ನಡುವೆ ಸ್ನೇಹ ಬೆಳೆದಿತ್ತು. ಇವರಿಬ್ಬರ ವರ್ತನೆ ಬಗ್ಗೆ ಅನುಮಾನಗೊಂಡಿದ್ದ ಸಂತೋಷ್ ಪತ್ನಿ ಬಿಂದು(27) ಬೆಂಗಳೂರಿನಲ್ಲಿ ಖಾಸಗಿ ಪತ್ತೇದಾರಿ ಕೆಲಸವನ್ನು ಮಾಡುತ್ತಿದ್ದ ಕ್ರಿಮಿನಲ್ ಹಿನ್ನೆಲೆಯುಳ್ಳ ಸತೀಶ್ ರೆಡ್ಡಿ ಎಂಬಾತನನ್ನು ಸಂಪರ್ಕಿಸಿ ತನ್ನ ಪತಿ ಹಾಗೂ ಯೋಗ ಶಿಕ್ಷಕಿ ನಡುವಿನ ಸಂಬಂಧದ ಬಗ್ಗೆ ತನಿಖೆ ನಡೆಸುವಂತೆಯೂ, ಒಂದು ವೇಳೆ ಸಂಬಂಧವಿದ್ದರೆ ಯೋಗ ಶಿಕ್ಷಕಿಯನ್ನು ಹತ್ಯೆ ಮಾಡುವಂತೆ ಸುಪಾರಿ ನೀಡಿದ್ದಾಳೆ.

ಅದರಂತೆ ಯೋಗ ಶಿಕ್ಷಕಿ ಬಳಿ ತಾನು ವಿದ್ಯಾರ್ಥಿಯಾಗಿ ಸೇರಿದ ಸುಪಾರಿ ಕಿಲ್ಲರ್ ಸತೀಶ್ ರೆಡ್ಡಿ, ಕೆಲ ದಿನಗಳ ನಂತರ ತಾನು ರೈಫಲ್ ತರಬೇತಿ ನೀಡುತ್ತಿರುವುದಾಗಿ ತಿಳಿಸಿ ತರಬೇತಿ ಸ್ಥಳಕ್ಕೆ ಹೋಗೋಣ ಎಂದು ಅ.23ರಂದು ಯೋಗ ಶಿಕ್ಷಕಿಯನ್ನು ಕಾರಿನಲ್ಲಿ ಕರೆದೊಯ್ದಿದ್ದಾನೆ. ಆ ಸಂದರ್ಭದಲ್ಲಿ ಆತನ ಕಾರಿನಲ್ಲಿ ಅಪ್ರಾಪ್ತ ಬಾಲಕ ಸೇರಿದಂತೆ ಇನ್ನೂ ನಾಲ್ವರಿದ್ದರು. ಕಾರಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ದಿಬ್ಬೂರು ಅರಣ್ಯಕ್ಕೆ ಯೋಗ ಶಿಕ್ಷಕಿಯನ್ನು ಕರೆತಂದ ಈ ತಂಡ, ಆಕೆ ಮೇಲೆ ಹಲ್ಲೆ ನಡೆಸಿ, ಅರೆನಗ್ನಾವಸ್ಥೆ ಮಾಡಿ, ಆಭರಣಗಳನ್ನು ದೋಚಿಕೊಂಡು ಕೇಬಲ್ ವೈರ್‌ನಿಂದ ಕತ್ತನ್ನು ಬಿಗಿದಿದ್ದಾರೆ. ಆದರೆ, ಪ್ರಾಣಾಯಾಮದ ಸಹಾಯದಿಂದ ಸತ್ತಂತೆ ನಟಿಸಿದ್ದಾರೆ. ಅವರು ಸತ್ತಿದ್ದಾರೆಂದು ಭಾವಿಸಿದ ಸುಪಾರಿ ಕಿಲ್ಲರ್‌ಗಳು ಅರಣ್ಯದಲ್ಲಿ ಸಣ್ಣ ಗುಂಡಿಯೊಂದನ್ನು ತೋಡಿ ಅದರಲ್ಲಿ ಆಕೆಯನ್ನು ಹಾಕಿ ಕೊಂಬೆ-ರೆಂಬೆಗಳನ್ನು ಮುಚ್ಚಿ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಕತ್ತಲೆಯಾದ ನಂತರ ಅರಣ್ಯದಿಂದ ಹೊರ ಬಂದ ಯೋಗ ಟೀಚರ್ ಸುಮಾರು 3 ಕಿ.ಮೀ. ನಡೆದುಕೊಂಡು ಬಂದು ಅ.24ರಂದು ಮುಂಜಾನೆ ದಿಬ್ಬೂರಹಳ್ಳಿ ಗ್ರಾಮದ ಒಂಟಿ ಮನೆಯೊಂದಕ್ಕೆ ತೆರಳಿ ವಿಷಯ ತಿಳಿಸಿದ್ದಾರೆ. ಮನೆಯವರು ಆಕೆಗೆ ಬಟ್ಟೆಯನ್ನು ಕೊಟ್ಟು ಯೋಗ ಶಿಕ್ಷಕಿಯ ಸಹೋದರನನ್ನು ಅಲ್ಲಿಗೆ ಕರೆಸಿದ ನಂತರ ದಿಬ್ಬೂರಹಳ್ಳಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಗುರುವಾರ ಯೋಗ ಟೀಚರ್ ಹತ್ಯೆಗೆ ಸುಪಾರಿ ನೀಡಿದ್ದ ಸಂತೋಷ್‌ನ ಪತ್ನಿ, ಬಿಂದು, ಸುಪಾರಿ ಕಿಲ್ಲರ್‌ಗಳಾದ ಸತೀಶ್ ರೆಡ್ಡಿ, ನಾಗೇಂದ್ರ ರೆಡ್ಡಿ, ರಮಣ ರೆಡ್ಡಿ ಮತ್ತು ರವಿ ಎಂಬಾತನನ್ನು ಬಂಧಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಚಿಕ್ಕಬಳ್ಳಾಪುರ ಎಸ್ಪಿ ಕುಶಾಲ್ ಚೌಕೆ ಅವರು, ಯೋಗ ಶಿಕ್ಷಕಿಗೆ ತನ್ನ ಪತಿಯೊಂದಿಗೆ ಉತ್ತಮ ಸಂಬಂಧವಿರಲಿಲ್ಲ. ಕೆ.ಆರ್. ಪುರಂನ ಸಂತೋಷ್ ಎಂಬಾತನ ಜೊತೆ ಸಂಬಂಧ ಇಟ್ಟುಕೊಂಡಿದ್ದರು. ಇದೇ ವಿಚಾರವಾಗಿ ಸಂತೋಷ್ ಪತ್ನಿ ಬಿಂದು ಜಗಳ ಆಡಿದ್ದರು. ನಂತರ ಯೋಗ ಶಿಕ್ಷಕಿಯನ್ನು ಕೊಲ್ಲಲು ಸತೀಶ್ ರೆಡ್ಡಿಗೆ ಬಿಂದು ಸುಪಾರಿ ನೀಡಿದ್ದಾರೆ. ಆತನಿಗೆ ನಗದಾಗಿ ಹಣ ನೀಡಿದ್ದಲ್ಲದೇ ಬ್ಯಾಂಕ್ ಖಾತೆಗೂ ಹಣ ವರ್ಗಾಯಿಸಿದ್ದಾಳೆ. ಸತೀಶ್ ರೆಡ್ಡಿ ಅಪರಾಧ ಹಿನ್ನೆಲೆಯುಳ್ಳವನಾಗಿದ್ದು, ಯೋಗ ಶಿಕ್ಷಕಿಯನ್ನು ಅಪಹರಿಸಿದ ಕಾರನ್ನು ಕೊಪ್ಪಳದಿಂದ ಕಳವು ಮಾಡಿರುವುದು ಬೆಳಕಿಗೆ ಬಂದಿದೆ ಎಂದು ಹೇಳಿದ್ದಾರೆ.

ಡಿಸೆಂಬರ್ ಅಂತ್ಯದೊಳಗೆ ಕರಕುಶಲನಗರ ಪಾಲಿಕೆಗೆ ಹಸ್ತಾಂತರ

ಶಾಸಕ ಕೆ.ಹರೀಶ್‌ಗೌಡ ಸಲಹೆ


ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ವಲಯ ಕಚೇರಿ-5ರ ಅಭಿವೃದ್ಧಿ ಅಧಿಕಾರಿ ಮನುಗೌಡ ಇನ್ನಿತರ ಅಧಿಕಾರಿಗಳೊಂದಿಗೆ ಶಾಸಕ ಕೆ.ಹರೀಶ್‌ಗೌಡ ಸಭೆ ನಡೆಸಿದರು.

ಮೈಸೂರು: ಪಾಲಿಕೆಯ ವಾರ್ಡ್ ನಂ.7ರ ಮೇಟಗಳ್ಳಿ ವ್ಯಾಪ್ತಿಯ ಕರಕುಶಲ ನಗರದಲ್ಲಿ ನವಂಬರ್ 5ರಂದು ಶಾಸಕ ಕೆ.ಹರೀಶ್‌ಗೌಡರು ಪಾದಯಾತ್ರೆ ನಡೆಸಿದರು. ಈ ವೇಳೆ ಸ್ವೀಕೃತವಾದ ಬಹಳಷ್ಟು ದೂರುಗಳ ಬಗ್ಗೆ ಚರ್ಚಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ವಿಶ್ವನಾಥ್ ಹಾಗೂ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ವಲಯ ಕಚೇರಿ-5ರ ಅಭಿವೃದ್ಧಿ ಅಧಿಕಾರಿ ಮನುಗೌಡ ಜೊತೆ ಇಂದು ಸಭೆ ನಡೆಸಿದರು.

ಪಾದಯಾತ್ರೆ ವೇಳೆ ಕರಕುಶಲ ನಗರದ ನಿವಾಸಿಗಳು ಮೂಲಭೂತ ಸಮಸ್ಯೆ, ನಿವಾಸಕ್ಕೆ ಹಕ್ಕು ಪತ್ರ ಸೇರಿ ಹಲವು ಸಮಸ್ಯೆಗಳನ್ನು ಬಗೆಹರಿಸುವಂತೆ ಶಾಸಕರ ಬಳಿ ಅಹವಾಲು ತೋಡಿಕೊಂಡಿದ್ದರು. ನಿಗಮದಿಂದ ಮನೆ ಹಂಚಿಕೆ ಮಾಡಿರುವುದನ್ನು ಬಿಟ್ಟರೆ ಬೇರೆ ಯಾವುದೇ ಮೂಲಭೂತ ಸೌಕರ್ಯವನ್ನು ಕಲ್ಪಿಸಿಲ್ಲ. ರಸ್ತೆ, ಚರಂಡಿ, ನೀರು ಇನ್ನಿತರೇ ಮೂಲಭೂತ ಸೌಕರ್ಯವನ್ನು ಪಾಲಿಕೆಯು ಮಾಡುತ್ತಿರುವುದರಿಂದ, ನಿಗಮದ ವ್ಯಾಪ್ತಿಯಲ್ಲಿರುವ 18.11 ಎಕರೆ ಜಾಗದಲ್ಲಿ ಹಾಲಿ ಮನೆ ನಿರ್ಮಿಸಿರುವ ಜಾಗವನ್ನು ಸಂಪೂರ್ಣವಾಗಿ ಪಾಲಿಕೆ ವ್ಯಾಪ್ತಿಗೆ ಡಿಸೆಂಬರ್-2024ರ ಅಂತ್ಯದೊಳಗೆ ಹಸ್ತಾಂತರಿಸುವಂತೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ವಿಶ್ವನಾಥ್ ಅವರಿಗೆ ಸೂಚಿಸಿದರು. ಅಲ್ಲದೆ, ಖಾಲಿಯಿರುವ ಜಾಗವನ್ನು ಸ್ವಚ್ಛಗೊಳಿಸುವುದಲ್ಲದೆ, ತಂತಿ ಬೇಲಿ ಹಾಕಿ ಸಂರಕ್ಷಿಸುವುದು ಸೂಕ್ತವೆಂದು ತಿಳಿಸಿದರು. ಅಲ್ಲದೇ ಇದಕ್ಕೆ ಬೇಕಾದ ಎಲ್ಲಾ ಸಹಕಾರ ನೀಡುವಂತೆ ಪಾಲಿಕೆ ಆಯುಕ್ತರು ವಲಯ-5ರ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದರು. ಸದರಿ ಬಡಾವಣೆಯನ್ನು ಪಾಲಿಕೆ ವ್ಯಾಪ್ತಿಗೆ ತೆಗೆದುಕೊಳ್ಳುವ ಜೊತೆಗೆ, ಅಲ್ಲಿಂದ ಬರುವ ಕಂದಾಯ ಇತ್ಯಾದಿ ಆದಾಯ ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಲು ಅಗತ್ಯ ಕ್ರಮ ವಹಿಸುವಂತೆಯೂ ತಿಳಿಸಿದರು.

ನಿಗಮದ ಉಳಿಕೆ ಜಾಗ ಅಂದಾಜು 6 ರಿಂದ 8 ಎಕರೆ ಇದ್ದು, ಅದನ್ನು ನಿಗಮದಿಂದ ಅಥವಾ ಪಾಲಿಕೆಯ ವತಿಯಿಂದ ಗುಂಪು ಯೋಜನೆ ಮನೆಗಳನ್ನು ನಿರ್ಮಿಸಲು ಯೋಜನೆ ರೂಪಿಸುವ ಬಗ್ಗೆ ಕ್ರಮ ವಹಿಸಲಾಗುವುದು. ಸೂರಿಲ್ಲದ ಕರಕುಶಲ ಕರ್ಮಿಗಳಿಗೆ ಮನೆ ನಿರ್ಮಿಸಿ ಕೊಡುವ ಬಗ್ಗೆ ಮುಂಬರುವ ಅಧಿವೇಶನದಲ್ಲಿ ಪ್ರಸ್ತಾಪಿಸಿ ಸರ್ಕಾರದಿಂದಲೂ ಅನುಮೋದನೆ ಪಡೆದುಕೊಳ್ಳುವುದಾಗಿ ತಿಳಿಸಿದರು.

ಸಿಬಿಐ ತನಿಖೆ ಹಿಂಪಡೆದ ಪ್ರಕರಣ

ಕರ್ನಾಟಕ ಸರ್ಕಾರ, ಡಿಸಿಎಂ ಡಿಕೆಶಿಗೆ ಸುಪ್ರೀಂಕೋರ್ಟ್ ನೋಟಿಸ್



ನವದೆಹಲಿ: ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಈ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ಈಗಿನ ಕಾಂಗ್ರೆಸ್ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಶಿವಕುಮಾರ್‌ಗೆ ಸುಪ್ರೀಂಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿದೆ.

ನ್ಯಾ. ಸೂರ್ಯ ಕಾಂತ್ ಹಾಗೂ ನ್ಯಾ. ಉಜ್ಜಲ್ ಭುಯನ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಕರ್ನಾಟಕ ಹೈಕೋರ್ಟ್‌ನ ತೀರ್ಪಿನ ವಿರುದ್ಧ ಸಿಬಿಐ ಮೇಲ್ಮನವಿ ಸಲ್ಲಿಸಿದೆ ಎಂದು ಸಿಬಿಐ ಪರ ವಕೀಲರು ಪೀಠದ ಗಮನಕ್ಕೆ ತಂದರು. ಇದನ್ನು ಪುರಸ್ಕರಿಸಿದ ಪೀಠ, ರಾಜ್ಯ ಸರ್ಕಾರ ಮತ್ತು ಡಿ.ಕೆ. ಶಿವಕುಮಾರ್‌ಗೆ ನೋಟಿಸ್ ಜಾರಿ ಮಾಡಿ ಪ್ರತಿಕ್ರಿಯಿಸುವಂತೆ ನಿರ್ದೇಶಿಸಿದೆ.

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆಗೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ 2019ರಲ್ಲಿದ್ದ ಬಿಜೆಪಿ ಸರ್ಕಾರ ಸಿಬಿಐಗೆ ವಹಿಸಿತ್ತು. 2023ರ ನ. 23ರಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಸಿಬಿಐಗೆ ನೀಡಿದ್ದ ತನಿಖೆಯನ್ನು ಹಿಂಪಡೆದಿತ್ತು.

ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಿಬಿಐ ಹಾಗೂ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ ಕರ್ನಾಟಕ ಹೈಕೋರ್ಟ್ ಈ ಅರ್ಜಿಗಳನ್ನು ವಜಾಗೊಳಿಸಿತ್ತು.

ಸಿಬಿಐ ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. ಅರ್ಜಿಯಲ್ಲಿ ದೆಹಲಿ ವಿಶೇಷ ಪೊಲೀಸ್ ಕಾಯ್ದೆ-1946 ಮತ್ತು ಅಕ್ರಮ ಹಣ ವರ್ಗಾವಣೆ ಕಾಯ್ದೆ-2002ರ ಅನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಂವಿಧಾನಿಕ ಅಧಿಕಾರದ ಕುರಿತಾದ ನಿಬಂಧನೆಗಳಿಗೆ ಸಂಬಂಧಿಸಿದ ವಿಚಾರಗಳು ಇಲ್ಲಿ ಉದ್ಭವವಾಗಿವೆ. ಅರ್ಜಿಯಲ್ಲಿನ ಎಲ್ಲ ಪಕ್ಷಗಾರರ ವಾದ ಮತ್ತು ಕಾನೂನಿನ ನಿಬಂಧನೆಗಳನ್ನು ಸೂಕ್ಷ್ಮವಾಗಿ ಆಲಿಸಿದಾಗ ಇದು ಮನದಟ್ಟಾಗಿದೆ ಎಂದು ನ್ಯಾಯಪೀಠ ಹೇಳಿತ್ತು.

ಕೇಂದ್ರ ಸರ್ಕಾರವು ಎಲ್ಲಿಯವರೆಗೆ ರಾಜ್ಯವೊಂದರಲ್ಲಿ ಸಿಬಿಐ ಅನ್ನು ಕಾರ್ಯನಿರ್ವಹಣೆಗೆ ಹಚ್ಚಬಹುದು ಎಂಬುದು ಕಾನೂನಿನ ವಿಚಾರಕ್ಕೆ ಒಳಪಟ್ಟಿದೆ. ಈ ಪ್ರಕರಣದಲ್ಲಿನ ಕಾನೂನಿನ ವಿಚಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಸಂಬಂಧಿಸಿವೆ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮತ್ತು ಸಿಬಿಐ ನಡುವೆ ಸಂಘರ್ಷ ಇದ್ದು ಪ್ರಕರಣವನ್ನು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸುವುದೇ ಸೂಕ್ತವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿತ್ತು. ಈ ಕಾರಣಗಳಿಂದ ಎರಡೂ ಅರ್ಜಿಗಳು ಅನೂರ್ಜಿತವಾಗಲಿದ್ದು, ಇವುಗಳನ್ನು ವಜಾಗೊಳಿಸಲಾಗಿದೆ. ಅದಾಗ್ಯೂ, ಅರ್ಜಿದಾರರು ಈ ಕುರಿತು ಸುಪ್ರೀಂಕೋರ್ಟ್‌ನಲ್ಲಿ ಸೂಕ್ತ ಪರಿಹಾರ ಕಂಡುಕೊಳ್ಳಬಹುದು ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿತ್ತು.

ಸುಪ್ರೀಂಕೋರ್ಟ್ ಮೆಟ್ಟಿಲೇರಿದ ಯತ್ನಾಳ್ ಅವರ ಮೇಲ್ಮನವಿಗೆ ಸಂಬಂಧಿಸಿದಂತೆ ಸೆ. 17ರಂದು ಇದೇ ಪೀಠವು ರಾಜ್ಯ ಸರ್ಕಾರ ಹಾಗೂ ಡಿ.ಕೆ.ಶಿವಕುಮಾರ್‌ಗೆ ನೋಟಿಸ್ ಜಾರಿ ಆಗಿತ್ತು.

ಪ್ರಕರಣವೇನು: 2013ರಿಂದ 2018ರವರೆಗೆ ರಾಜ್ಯದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಿವಕುಮಾರ್ ಅವರು ಆದಾಯ ಮೀರಿ 74.93 ಕೋಟಿಯಷ್ಟು ಆಸ್ತಿ ಗಳಿಸಿದ್ದಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ 2019ರ ಸೆಪ್ಟೆಂಬರ್ 25ರಂದು ಅಂದಿನ ಬಿಜೆಪಿ ಸರ್ಕಾರ ಅನುಮತಿ ನೀಡಿತ್ತು. ಈ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರ 2023ರ ನವೆಂಬರ್ 23ರಂದು ಹಿಂಪಡೆದಿತ್ತು. ನಂತರ 2023ರ ಡಿಸೆಂಬರ್ 28ರಂದು ಲೋಕಾಯುಕ್ತ ತನಿಖೆಗೆ ವಹಿಸಿತ್ತು.

ಇದನ್ನು ಪ್ರಶ್ನಿಸಿ ಸಿಬಿಐ ಮತ್ತು ಬಸನಗೌಡ ಪಾಟೀಲ ಯತ್ನಾಳ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅಲ್ಲಿ ಅರ್ಜಿ ವಜಾಗೊಂಡ ನಂತರ ಸಿಬಿಐ ಹಾಗೂ ಶಾಸಕ ಯತ್ನಾಳ್ ಸುಪ್ರೀಂ ಮೊರೆ ಹೋಗಿದ್ದಾರೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಎಸ್‌ಡಬ್ಲ್ಯುಆರ್/ಡಬ್ಲ್ಯು/ಟಿಎಸ್/ಯುಎಸ್‌ಎಫ್‌ಡಿ/2024/03/ಇ ದಿನಾಂಕ : 30-10-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
"ರೈಲ್‌ಗಳು ಮತ್ತು ವೆಲ್ಡ್‌ಗಳ ಅಲ್ಟ್ರಾಸೋನಿಕ್ ಪರೀಕ್ಷೆ (ಪರಿಷ್ಕೃತ) 2012 ರೊಂದಿಗೆ ಎಲ್ಲಾ ತಿದ್ದುಪಡಿಗಳು" ಕೈಪಿಡಿಗೆ ಅನುಸಾರವಾಗಿ ಗುತ್ತಿಗೆದಾರರ ಆರ್‌ಡಿಎಸ್‌ಓ ಅಂಗೀಕೃತ ಹಸ್ತಚಾಲಿತ ಅಲ್ಟ್ರಾಸೋನಿಕ್ ರೈಲ್ ಟೆಸ್ಟರ್ ಮತ್ತು ವೆಲ್ಡ್ ಟೆಸ್ಟರ್ ಬಳಸಿ 2 ವರ್ಷಗಳ ಅವಧಿಗೆ ವೆಲ್ಡ್‌ಗಳ ಅಲ್ಟ್ರಾಸೋನಿಕ್ ಪರೀಕ್ಷೆ	ರೂ. 31,57,576/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29-11-2024 ರಂದು 14:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ಟ್ರ್ಯಾಕ್ ಪ್ರೊಕ್ಯೂರ್‌ಮೆಂಟ್ ಹೆಚ್‌ಕ್ಯು / ಹುಬ್ಬಳ್ಳಿ

ಪಿಯುಬಿ/552/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR SWRRLY SWRRLY

CHANGE OF NAME

I Chandrakala Mysore Narasimhamurthy W/o Narasimhamurthy Mirle venugopal, Residing at #2345, 28th cross , Sankranthi circle, Hebbal 2nd stage, Mysore- 570017, have changed my name from Chandrakala Mysore Nagabhushan to Chandrakala Mysore Narasimhamurthy on my own free will sworn in before notary C Mangala, Mysore vide affidavit dated 22.10.2024

Sd/- Chandrakala Mysore Narasimhamurthy

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಬೆಂಗಳೂರು ನಗರ 560037, ದೊಡ್ಡಣೆಕುಂದಿ, ಟೋಟಲ್ ಮಾಲ್‌ನ ಹಿಂಭಾಗ, ಔಟರ್ ರಿಂಗ್ ರಸ್ತೆ, ಆಕ್ಮೆ ಬಲೆಟ್, ನಂ ಈ-203 ರಲ್ಲಿ ವಾಸವಾಗಿರುವ ಶ್ರೀ ಆರ್. ಶ್ರೀನಿವಾಸ್ ರವರ ಧರ್ಮಪತ್ನಿಯಾದ ಶ್ರೀಮತಿ ವಿ ಸೌಮ್ಯ ಲಕ್ಷ್ಮಿರವರು, ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ರಂಗಸಮುದ್ರ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಕೃಷ್ಣಗೌಡ ರವರ ಮಗನಾದ ಶ್ರೀ ಕೆ ಗಿರೀಶ್ ರವರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ, ಸಂಬಂಧಿಕರಲ್ಲಿ, ಏನಾದರೂ ತಂಟೆತಕರಾರುಗಳಿದ್ದಲ್ಲಿ ಈ ಪ್ರಕಟಣೆಯ 14 ದಿನಗಳೊಳಗಾಗಿ ನಮಗಾಗಲ್ಲಿ ನಮ್ಮ ಕಕ್ಷೀದಾರರಿಗಾಗಲಿ ತಿಳಿಸತಕ್ಕದ್ದು, ಇಲ್ಲವಾದ ಪಕ್ಷದಲ್ಲಿ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಯಾವುದೇ ತಕರಾರುಗಳಿಲ್ಲವೆಂದು ತೀರ್ಮಾನಿಸಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ :ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ರಂಗಸಮುದ್ರ ಗ್ರಾಮದ ಸರ್ವೆ ನಂಬರ್ 55/9 (ಹಳೇ ಸರ್ವೆ ನಂಬರ್ 55/2) ರಲ್ಲಿನ ವಿಸ್ತೀರ್ಣ 1.03.08 ಎಕರೆ (ಒಂದು ಎಕರೆ ಮೂರುವರೆ ಗುಂಟೆ) ಖುಷ್ಕಿ ಜಮೀನಿನ ಸ್ವತ್ತಿಗೆ ಚೆಕ್ಕುಬಂದಿ.
ಪೂರ್ವಕ್ಕೆ: ನಾಲಾ ಹಾಗೂ ಸಿದ್ದೇಗೌಡ ರವರ ಜಮೀನು. ಪಶ್ಚಿಮಕ್ಕೆ: ಸೌಮ್ಯ ಲಕ್ಷ್ಮಿ ಹಾಗೂ ಸಿಂಧೂರ ಲಕ್ಷ್ಮಿಕಾಂತ ರವರ ಜಮೀನು
ಉತ್ತರಕ್ಕೆ: ಸೌಮ್ಯ ಲಕ್ಷ್ಮಿ ಹಾಗೂ ಭಾರ್ಗವಿ ಶ್ರೀನಿವಾಸನ್ ರವರ ಜಮೀನು, ದಕ್ಷಿಣಕ್ಕೆ: ಪಂಚಾಯತಿ ರಸ್ತೆ

ಕಕ್ಷಿದಾರರು ಪರ ವಕೀಲರು, ಸಹಿ/- ಡಿ.ಬಿ.ಯಶವಂತ ಗುರು, ಬಿ.ಎ.,ಎಲ್.ಎಲ್.ಬಿ., ವಕೀಲರು, ಕೆ.ಎ.ಆರ್. 1782/11, ನಂ 283/1, ಉಪನೋಂದಣಾಧಿಕಾರಿಗಳ ಕಛೇರಿ ಪಶ್ಚಿಮ ಕಟ್ಟಡ, ವಿಜಯನಗರ 2ನೇ ಹಂತ, ಮೈಸೂರು 570017. ಮೊ. 8123068123

ದಿನಾಂಕ: 08.11.2024

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಇಲಾಖೆ, ವನ್ಯಜೀವಿ ವಿಭಾಗ,
ಅರಣ್ಯ ಭವನ, ಅಶೋಕಪುರಂ, ಮೈಸೂರು
ದೂ: 0821-2481159, email:dcfwlmys@gmail.com
ದಿನಾಂಕ: 06.11.2024

ಟೆಂಡರ್ ಪ್ರಕಟಣೆ

ಮೈಸೂರು ವನ್ಯಜೀವಿ ವಿಭಾಗದ ರಂಗನತಿಟ್ಟು ಪಕ್ಷಿಧಾಮದಲ್ಲಿ ಇರುವ 115 ತೆಂಗಿನಮರಗಳ ಪಸಲನ್ನು ದಿ: 01.12.2024 ರಿಂದ 31.03.2026 ರವರೆಗೆ ಸಂಗ್ರಹಿಸಿ ಪಡೆದುಕೊಳ್ಳಲು ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿವುಳ್ಳ ಸಂಸ್ಥೆ/ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ದರ ನಮೂದಿಸಬಹುದಾಗಿರುತ್ತದೆ. ಟೆಂಡರ್ ಫಾರಂ ನೀಡುವ ದಿ: 14.11.2024 ರಂದು ಬೆಳಗ್ಗೆ 10.30 ರಿಂದ ಮದ್ಯಾಹ್ನ 1.30 ಗಂಟೆಯವರೆಗೆ, ಅಂದೇ ಟೆಂಡರ್ ಫಾರಂ ಸಲ್ಲಿಸಲು ಸಮಯ 4.00 ಗಂಟೆಯವರೆಗೆ, ಟೆಂಡರ್ ತೆರೆಯುವ ಸಮಯ 4.30 ಗಂಟೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಕಛೇರಿಗೆ ಭೇಟಿ ನೀಡಿ ಪಡೆಯಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು

DIPR/DDMYS-765/KSMCA-524/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂತೆಪೇಟೆ,
ಬಿ.ಎಂ.ರಸ್ತೆ, ಹಾಸನ-573201
Email:hassanapmc@gmail.com, 08172-256186,
ಕ್ರ.ಸಂ: ಕೃಉಮಾಸ/ಹಾ/ 469/2024-25 ದಿನಾಂಕ: 08.11.2024

ಟೆಂಡರ್ ಪ್ರಕಟಣೆ(ಇ-ಪ್ರೊಕ್ಯೂರ್ಮೆಂಟ್ ಮೂಲಕ)

2024-25 ನೇ ಸಾಲಿಗಾಗಿ ಹಾಸನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಹಾಗೂ ದುದ್ದ ಮಾರುಕಟ್ಟೆ ಪ್ರಾಂಗಣದಲ್ಲಿ ಭದ್ರತಾ ಸೇವೆಗಾಗಿ ಸಂಬಂಧಿಸಿದ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ಗಳನ್ನು ಏಕ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. 1)ಭರ್ತಿ ಮಾಡಿದ ಇ-ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 22/11/2024 ಸಂಜೆ 4-00 ಗಂಟೆವರೆಗೆ. 2)ಇ-ಟೆಂಡರ್ ಗಳನ್ನು ತೆರೆಯುವ ದಿನಾಂಕ: 25/11/2024 ಅಪರಾಹ್ನ 11-00 ಗಂಟೆಗೆ ಒಂದು ವೇಳೆ ಸದರಿ ದಿನಾಂಕಗಳಂದು ಸಾರ್ವತ್ರಿಕ ರಜೆ ಘೋಷಣೆ ಆದಲ್ಲಿ ಕಾರ್ಯಾಲಯದ ಮುಂದಿನ ಕೆಲಸದ ದಿನ ಸಿಂಧುವಾಗಿರುತ್ತದೆ. ಕ್ರ.ಸಂ.1)ಕೆಲಸದ ಹೆಸರು:ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಪೂರೈಸುವುದು. ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ 12 ಇ.ಎಂ.ಡಿ ಮೊತ್ತ: ರೂ.. 167651.00 ಖಾಲಿ ಟೆಂಡರ್ ಫಾರಂ ಬೆಲೆ:e-portal ನಿಯಮಗಳನ್ವಯ ವಿವರ :ಭದ್ರತಾ ಕಾವಲುಗಾರರು-05, ವಾಹನ ಚಾಲಕರು-03, ಬೆರಳಚ್ಚುಗಾರರು/ಕಂಪ್ಯೂಟರ್ ಆಪರೇಟರ್ -03 ಪ್ಲಂಬರ್/ಎಲೆಕ್ಟ್ರೀಷಿಯನ್ -01, ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ-ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ-ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ https://kppp.karnataka.gov.in ವೆಬ್ಸೈಟ್ನಲ್ಲಿ ಪಡೆಯಬಹುದಾಗಿದೆ. ಇ-ಪ್ರೋಕ್ಯೂರ್ಮೆಂಟ್ ಟೆಂಡರ್ನಲ್ಲಿ ಭಾಗವಹಿಸಲು ನೊಂದಾಯಿಸುವ ಬಗ್ಗೆ ಸಹಾಯವಾಣಿ ದೂರವಾಣಿ ಸಂಖ್ಯೆ 08172-256186 ನ್ನು ಸಂಪರ್ಕಿಸಬಹುದು.

ಸಹಿ/-ಕಾರ್ಯದರ್ಶಿ, ಕೃ.ಉ.ಮಾ.ಸ, ಹಾಸನ

ಸಹಿ/-ಆಡಳಿತಾಧಿಕಾರಿ, ಕೃ.ಉ.ಮಾ.ಸ, ಹಾಸನ

ವಾಸಾಸಂಇ/ಹಿಸನಿ/ಹಾಸನ/633/ಕೆಎಸ್‌ಎಂಸಿಎ/2024-25